ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ವಿದ್ಯಾರಣ್ಯ-583278

ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿರುವ ಸಂಶೋಧನಾ ನಿಬಂಧ 2019-20

ವಿಷಯ: 'ಶಿಶುನಾಳ ಶರೀಫರ ತತ್ವಪದಗಳಲ್ಲಿ ಭಾವೈಕ್ಯತೆಯ ಸ್ವರೂಪ'

ಸಂಶೋಧಕರು

ಸುರೇಶ ಎಸ್. ಹೊಸಮನಿ

ನೋಂದಣಿ ಸಂಖ್ಯೆ: 182001030040

ಮಾರ್ಗದರ್ಶಕರು

ಡಾ. ನಟರಾಜ್ ಆರ್

ಸಹ ಪ್ರಾಧ್ಯಾಪಕರು,

ಬಿ.ಎನ್.ಎಂ. ಪದವಿ ಕಾಲೇಜು

ಬನಶಂಕರಿ 2ನೇ ಹಂತ

ಬೆಂಗಳೂರು-590070

ಮಾನ್ಯತಾ ಸಂಸ್ಥೆ

ಕನ್ನಡ ಸಾಹಿತ್ಯ ಪರಿಷತ್ತು,

ಮಹಾಕವಿ ರಸ್ತೆ, ಚಾಮರಾಜಪೇಟೆ

ಬೆಂಗಳೂರು-18

ಕನ್ನಡ ವಿಶ್ವವಿದ್ಯಾಲಯ, ಹಂಪಿ
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ವಿದ್ಯಾರಣ್ಯ–583 276

ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿರುವ ಸಂಶೋಧನಾ ನಿಬಂಧ 2019–20

ವಿಷಯ: "ಶಿಶುನಾಳ ಶರೀಫರ ತತ್ವಪದಗಳಲ್ಲಿ ಭಾವೈಕ್ಯತೆಯ ಸ್ವರೂಪ"

ಸಂಶೋಧಕರು

ಸುರೇಶ ಎಸ್. ಹೊಸಮನಿ
ನೋಂದಣಿ ಸಂಖ್ಯೆ: 182001030040

ಮಾರ್ಗದರ್ಶಕರು

ಡಾ. ನಟರಾಜ್ ಆರ್
ಸಹ ಪ್ರಾಧ್ಯಾಪಕರು,
ಬಿ.ಎನ್.ಎಂ. ಪದವಿ ಕಾಲೇಜು
ಬನಶಂಕರಿ 2ನೇ ಹಂತ
ಬೆಂಗಳೂರು–590070

ಕನ್ನಡ ಸಾಹಿತ್ಯ ಪರಿಷತ್ತು,
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು–18

ಸಂಶೋಧನಾ ವಿದ್ಯಾರ್ಥಿಯ ಪ್ರಮಾಣ ಪತ್ರ

ಕನ್ನಡ ವಿಶ್ವವಿದ್ಯಾಲಯ, ಹಂಪಿ ಎಂ.ಫಿಲ್. ಪದವಿಗಾಗಿ ಸಂಶೋಧನೆ ನಡೆಸಿ "ಶಿಶುನಾಳ ಶರೀಫರ ತತ್ವಪದಗಳಲ್ಲಿ ಭಾವೈಕ್ಯತೆಯ ಸ್ವರೂಪ" ಎಂಬ ಶೀರ್ಷಿಕೆಯ ಈ ನಿಬಂಧವನ್ನು ಈ ಮೊದಲು ಭಾಗಶಃ ಆಗಲಿ, ಪೂರ್ಣವಾಗಿ ಆಗಲಿ ಬೇರೆ ಯಾವುದೇ ಪದವಿ ಹಾಗೂ ಇನ್ನಿತರ ಸ್ವಂತ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಈ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯ, ಹಂಪಿ., ಎಂ.ಫಿಲ್ ಪದವಿಗಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ಪರವಾಗಿ ಈ ಮೂಲಕ ಸಲ್ಲಿಸುತ್ತಿದ್ದೇನೆ.

ಸಂಶೋಧಕರು
Suresh 30/7/19
ಸುರೇಶ ಎಸ್. ಹೊಸಮನಿ
ರಿ. ನಂ.–182001030040
ಕನ್ನಡ ವಿಶ್ವವಿದ್ಯಾಲಯ
ಹಂಪಿ

ದಿನಾಂಕ: 30/7/19
ಸ್ಥಳ : ಬೆಂಗಳೂರು

ಮಾರ್ಗದರ್ಶಕರ ದೃಢೀಕರಣ ಪತ್ರ

ಶ್ರೀ ಸುರೇಶ ಎಸ್. ಹೊಸಮನಿ ಅವರು ಎಂ.ಫಿಲ್ ಪದವಿಗಾಗಿ ಬರೆದು ಸಿದ್ಧಪಡಿಸಿರುವ **"ಶಿಶುನಾಳ ಶರೀಫರ ತತ್ವಪದಗಳಲ್ಲಿ ಭಾವೈಕ್ಯತೆಯ ಸ್ವರೂಪ"** ಎಂಬ ಸಂಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯ, ಹಂಪಿ, ಕನ್ನಡ ಸಾಹಿತ್ಯ ಪರಿಷತ್ತಿನ ಪರವಾಗಿ ಸಲ್ಲಿಸಲು ನನ್ನ ಮಾರ್ಗದರ್ಶನದಲ್ಲಿ ಸ್ವತಂತ್ರ ಅಧ್ಯಯನದ ಮೂಲಕ ಸಿದ್ಧಪಡಿಸಿರುತ್ತಾರೆ. ಈ ಸಂಪ್ರಬಂಧ ವಿಷಯವನ್ನು ಅಥವಾ ಇದರ ಯಾವುದೇ ಭಾಗವನ್ನು ಇದಕ್ಕೆ ಮೊದಲು ಬೇರೆ ಯಾವುದೇ ಪದವಿಗಾಗಲೀ ಅಥವಾ ಇನ್ನಿತರೆ ಉದ್ದೇಶಗಳಿಗಾಗಲಿ ಸಲ್ಲಿಸಿಲ್ಲವೆಂದು ಈ ಮೂಲಕ ದೃಢೀಕರಿಸಿರುತ್ತೇನೆ.

30/7/19

ಡಾ.ಆರ್.ನಟರಾಜ್
ಅಧ್ಯಾಪಕರು ಹಾಗೂ ಮಾರ್ಗದರ್ಶಕರು
ಬಿ.ಎನ್.ಎಂ. ಪದವಿ ಕಾಲೇಜು
ಬನಶಂಕರಿ 2ನೇ ಹಂತ
...070

ಮಾರ್ಗದರ್ಶಕರು

ಡಾ. ನಟರಾಜ್ ಆರ್
ಸಹಾಯಕ ಪ್ರಾಧ್ಯಾಪಕರು,
ಬಿ.ಎನ್.ಎಂ. ಪದವಿ ಕಾಲೇಜು,
ಬನಶಂಕರಿ 2ನೇ ಹಂತ,
ಬೆಂಗಳೂರು–70

ದಿನಾಂಕ:
ಸ್ಥಳ : ಬೆಂಗಳೂರು

ಕೃತಜ್ಞತೆಗಳು

ಕುಲಸಚಿವರು, ಕನ್ನಡ ವಿಶ್ವವಿದ್ಯಾಲಯ, ಹಂಪಿ ಮತ್ತು ಕನ್ನಡ ಸಾಹಿತ್ಯ ಅಧ್ಯಯನಾಂಗ ವಿಭಾಗ, ವಿದ್ಯಾರಣ್ಯ, ಹಂಪಿ-583276, ಜೊತೆಗೆ ಮಾನ್ಯತಾ ಸಂಸ್ಥೆ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು-18. ನನ್ನ ವಿಷಯಕ್ಕೆ ಆತ್ಮೀಯವಾಗಿ ಸ್ಪಂದಿಸಿ ಅತ್ಯುತ್ತಮವಾದ ಮಾರ್ಗದರ್ಶನ ಮಾಡಿ ಸೂಕ್ತ ಸಲಹೆಗಳನ್ನು ನೀಡಿ ಜೊತೆಗೆ **"ಶಿಶುನಾಳ ಶರೀಫರ ತತ್ವಪದಗಳಲ್ಲಿ ಭಾವೈಕ್ಯತೆಯ ಸ್ವರೂಪ"** ಎಂಬ ವಿಷಯಕ್ಕೆ ಸಂಬಂಧಿಸಿದಂತೆ ಸೂಕ್ತ ಮಾರ್ಗದರ್ಶನ ಮಾಡಿದಂತಹ ಡಾ. ನಟರಾಜ್ ಆರ್., ಸಹ ಪ್ರಾಧ್ಯಾಪಕರು, ಬಿ.ಎನ್.ಎಂ. ಪದವಿ ಕಾಲೇಜು, ಬನಶಂಕರಿ 2ನೇ ಹಂತ, ಬೆಂಗಳೂರು-30 ಇವರಿಗೆ ತುಂಬು ಹೃದಯದ ಕೃತಜ್ಞತೆಗಳು.

ಅಧಿಕೃತವಾಗಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಡಾ. ಎಂ. ಎನ್. ಶಿಂದಗಿ, "ಶಿಶುನಾಳ ಶರೀಫರ ಜೀವನ, ಕೃತಿಗಳ ಮತ್ತು ದರ್ಶನ" ಮಹಾಪ್ರಬಂಧವನ್ನು ಮಂಡಿಸಿದ ಇವರನ್ನು ಹುಬ್ಬಳ್ಳಿಯಲ್ಲಿ ಅವರ ನಿವಾಸಕ್ಕೆ ಹೋಗಿದ್ದಾಗ ಮಾರ್ಗದರ್ಶನ ನೀಡಿದ 85 ವರ್ಷ ಇಳಿವಯಸ್ಸಿನಲ್ಲಿ ಶರೀಫರ ಬಗ್ಗೆ ವಿವರವಾದ ಮಾಹಿತಿಯನ್ನು ನೀಡಿದ್ದಾರೆ. ಅವರಿಗೆ ನನ್ನ ಹೃದಯಪೂರ್ವಕ ನಮನಗಳು.

ಸದಾ ನನ್ನ ಏಳ್ಗೆಯನ್ನೇ ಬಯಸುವ ನನ್ನ ಅಜ್ಜ ಶ್ರೀ ಬಸವಂತಪ್ಪ ತಿ. ಹೊಸಮನಿ ಇವರು ಶರೀಫ ಶಿವಯೋಗಿಯ ಭಕ್ತರಾಗಿದ್ದರು. ಅವರಿಗೆ ಕೃತಜ್ಞತೆಗಳು (ದಿವಂಗತ). ಜೊತೆಗೆ ನನ್ನ ಪೂಜ್ಯ ತಂದೆ ಶ್ರೀ ಸೋಮಣ್ಣಾ ಬ ಹೊಸಮನಿ, ಮಾತೋಶ್ರೀಯವರಾದ ನೀಲವ್ವ ಎಸ್. ಹೊಸಮನಿ, ನನ್ನ

ಸಹೋದರ ಷಣ್ಮುಕ ಸುವರ್ಣ. ಹೊಸಮನಿ, ತಂಗಿಯರಾದ ದೇವಕ್ಕ, ಲಕ್ಷ್ಮವ್ವ, ವಿನೋದಾ ಇವರುಗಳಿಗೆ ನನ್ನ ಕೃತಜ್ಞತೆಗಳು.

ಸದಾ ನನಗೆ ಒಳಿತನ್ನೇ ಬಯಸುವ ಹಾಗೂ ನನ್ನ ಜೀವನದ ಬಾಳಸಂಗಾತಿಯಾದ ಜಯಶ್ರೀ ಎಸ್. ಹೊಸಮನಿ ಇವರಿಗೆ ನನ್ನ ಪ್ರೀತಿಯ ಮಕ್ಕಳಾದ ಸ್ನೇಹಾ, ಸಂಜಯ, ಸುಹಾಸ, ಸಿಂಚನಾ, ಸಮರ್ಥ, ಭರತ ಎಚ್. ಕೊತಬಾಳ ಇವರೆಲ್ಲರಿಗೂ ನನ್ನ ಕೃತಜ್ಞತೆಗಳು.

ಅಧ್ಯಯನದ ಸಂದರ್ಭದಲ್ಲಿ ಸಹಾಯ ಮಾಡಿದ ನನ್ನ ಸಹೋದ್ಯೋಗಿಗಳಾದ ಪುಷ್ಪ ಎಂ., ಲಕ್ಷ್ಮೀ ಸಿ., ಕಾಂತರಾಜು, ಶಶಿರೇಖಾ, ಕಿರಣಕುಮಾರ್ ಆರ್.

ಈ ನಿಬಂಧವನ್ನು ಅಂದವಾಗಿ ಅಕ್ಷರ ರೂಪದಲ್ಲಿ ಹೊರಬರಲು ಕಾರಣರಾದ ಶ್ರೀ ಶಿವಾನಂದ ಎಸ್. ಬಡಿಗೇರ ಇವರಿಗೂ ನನ್ನ ಕೃತಜ್ಞತೆಗಳು.

ತಮ್ಮ ವಿಶ್ವಾಸಿ

ಶ್ರೀ ಸುರೇಶ ಎಸ್. ಹೊಸಮನಿ

ದಿನಾಂಕ:

ಸ್ಥಳ : ಬೆಂಗಳೂರು

"ಶಿಶುನಾಳ ಶರೀಫರ ತತ್ವಪದಗಳಲ್ಲಿ ಭಾವೈಕ್ಯತೆಯ ಸ್ವರೂಪ"

ಪರಿವಿಡಿ

ಅಧ್ಯಾಯ-1

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

ಕನ್ನಡ ಸಾರಸ್ವತ ಲೋಕದಲ್ಲಿ ಶರೀಫರ ತತ್ವಪದಗಳಲ್ಲಿ ಕಂಡು ಬರುವ ಜನಪದ ಸಾಹಿತ್ಯ ಮತ್ತು ಶಿಷ್ಟ ಸಾಹಿತ್ಯಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. 19ನೇ ಶತಮಾ ಆಗಿಹೋದ ಅನುಭಾವಿಗಳು. ಕರ್ನಾಟಕ ಕಬೀರರೆಂದು ಕರೆಯಲು ಅವರ ತತ್ವಪದಗಳಲ್ಲಿ ಕಂಡುಬರುವ ಲೌಖಿಕ ಮತ್ತು ಅಲೌಖಿಕ ಕಲ್ಪನೆಯನ್ನು ಸಾಂಸ್ಕೃತಿಕ ತಳಹದಿಯ ಮೇಲೆಯೇ ನಿರೂಪಿಸಿದ್ದಾರೆ. ಶರೀಫರ ಭಾವೈಕ್ಯತೆಯ ಕಲ್ಪನೆಯು ಇಂದಿನ ಸಮಾಜದ ಕಾಲಘಟ್ಟಕ್ಕೆ ಮಾದರಿಯಾಗಿದೆ. ಈಗಿನ ರಾಜಕೀಯ, ಸಾಮಾಜಿಕ ಸಂಘರ್ಷವನ್ನು ನೋಡಿದರೆ ಅವರ ಸಾಹಿತ್ಯಕ್ಕೆ ಮಜಲನ್ನು ಅರಿಯುವುದು ತುಂಬಾ ಅವಶ್ಯಕವಾಗಿದೆ. ಶರೀಫರು ಒಬ್ಬ ಮೇಧಾವಿ, ಅನುಭಾವಿ, ತತ್ವಜ್ಞಾನಿಯಾಗಿ, ಮುಂದಿನ ಯುವ ಪೀಳಿಗೆಯ ಹಿತದೃಷ್ಟಿಯನ್ನಿಟ್ಟುಕೊಂಡು ಸಾಂಸಾರಿಕ ನೆಲೆಗಟ್ಟಿನ ಮೇಲೆಯೇ ಆದರ್ಶ ಸಮಾಜದ ಕಲ್ಪನೆಯನ್ನು ನಮಗೆ ನೀಡಿದ್ದಾರೆ.

ಸಂಸಾರಿಕ ಭವಬಂಧನದಲ್ಲಿದ್ದುಕೊಂಡೆ ಸಮಾಜದ ಉನ್ನತ ಆದರ್ಶ ಕಟ್ಟುಪಾಡುಗಳನ್ನು ತೊರೆದು ಅಪಾರ ಹಿಂಸೆ, ನಿಂದನೆಗೆ ಗುರಿಯಾಗಿ ತಮ್ಮ ನಿಲುವನ್ನು ಪ್ರಚುರಪಡಿಸಿದ್ದಾರೆ. ಶರೀಫರು, 70 ವರ್ಷ ಬದುಕಿ ಜಾತ್ಯಾತೀತ, ಧರ್ಮಾತೀತ, ಮನೋಧರ್ಮದವರಾಗಿ ಇಡೀ ಮಾನವ ಕುಲಕ್ಕೆ ಸಲ್ಲುವವರಾಗಿದ್ದಾರೆ. "ಶರೀಫ" ಎಂಬ ಪಾರ್ಸಿ ಭಾಷೆಯ ಪದದ ಅರ್ಥ "ಉದಾತ್ತ ಧ್ಯೇಯ"ಗಳ ಅಥವಾ "ಉತ್ತಮ ಶೀಲ ಸ್ವಭಾವ" ಹೊಂದಿ ಇತರರಿಂದ ಗೌರವಿಸಲ್ಪಡುವ ವ್ಯಕ್ತಿ. ಶರೀಫರ ತತ್ವಪದಗಳಲ್ಲಿ ದೇಸಿ ಸಂಸ್ಕೃತಿಯನ್ನು ವಿಶೇಷವಾಗಿ ಉತ್ತರ ಕರ್ನಾಟಕ ಶೈಲಿಯಲ್ಲಿ ನಿರೂಪಣೆನ್ನು ಮಾಡಿದ್ದಾರೆ.

ಇಪ್ಪತ್ತನೇ ಶತಮಾನದಲ್ಲಿ ಕರ್ನಾಟಕದ ಸಾಮಾಜಿಕ ಜೀವನದಲ್ಲಿ ಹಿಂದೂ ಮುಸಲ್ಮಾನರು ಅಪನಂಬುಗೆ, ಅನುಮಾನ, ಅವಿಶ್ವಾಸ ಮತ್ತು ಅಸಹಹನೆಯಿಂದ ಪರಸ್ಪರ ವೈರಿಗಳಂತೆ ಕಾಣುತ್ತಿದ್ದ ಪರಿಸರವಿತ್ತು. ಭಾರತೀಯ ತತ್ವ ದರ್ಶನಗಳನ್ನು ರಕ್ತಗತ ಮಾಡಿಕೊಳ್ಳಲು ಬಹು ಸಮುದಾಯಗಳ ನಡುವೆ ಸಮನ್ವಯ ಸಾಧಿಸಲು, ಸಮುದಾಯ ಪ್ರತ್ಯೇಕತೆ ಮೀರಿ ಮಾನವ ಸಮುದಾಯ ಕಟ್ಟಲು ಸಾಧ್ಯವಾಯಿತು. ಶಿಶುನಾಳ ಶರೀಫರು ಸಂತ ಶ್ರೇಷ್ಠರಾಗಿದ್ದರು. ಅವರ ಜೀವನದ ಪರಮಗುರಿ ಸಮಾಜವನ್ನು ತಿದ್ದುವುದಾಗಿತ್ತು. ನಂಬಿಕೆ ಆಚರಣೆಗಳನ್ನು ಗೌರವಿಸುತ್ತಾ ಬಂದಿರುವ ಐತಿಹಾಸಿಕ

ಹಿನ್ನೆಲೆ ನಮ್ಮ ಸಂಸ್ಕೃತಿಗೆ ಇದ್ದು ಇಂತಹ ಪರಿಸರ ನಿರ್ಮಾಣಕ್ಕೆ ಸಮಾಜ ಸುಧಾರಕರು ಹಾಗೂ ಸಾಧು ಸಂತರು ನೀಡಿದ ಕೊಡುಗೆ ಅಪಾರವಾಗಿದೆ (ಅನುಪಮವಾದುದಾಗಿದೆ).

ಭಕ್ತಿ ನೀತಿಗಳನ್ನು ಮೇಳೈಸಿ ದೇವನೊಬ್ಬ ನಾಮ ಹಲವು ಎಂದು ತಮ್ಮ ಚಿಂತನೆಗಳಲ್ಲಿ ಬೋಧಿಸಿದ ಶರೀಫರು ಹರಿ-ಹರ, ಹಜರತ, ಮಾರ್ಗಗಳೆಲ್ಲಾ ದೇವನನ್ನು ಸೇರುವ ದಾರಿಗಳೆ ಎಂದು ತಿಳಿಸಿ ಆ ಮೂಲಕ ಹಿಂದೂ-ಮುಸ್ಲಿಂ ಸಂಸ್ಕೃತಿಯ ಐಕ್ಯತೆಗೆ ಕಾರಣ ಪುರುಷರಾಗಿದ್ದಾರೆ. ಶರಣರ "ಬದುಕನ್ನು ಮರಣದಲ್ಲಿ ಕಾಣು" ಎನ್ನುವಂತೆ ಇವರ ಧರ್ಮಾತೀತ ಭಾವನೆಯ ದ್ಯೋತಕಗಳಾಗಿ ಕಾಣಿಸುತ್ತವೆ. ಇವರು ಬದುಕಿನ ಎಲ್ಲಾ ಅನುಭವಗಳನ್ನು ಬಲ್ಲವರಾಗಿದ್ದು ಜೀವನದ ಅಂತ್ಯವನ್ನು ಇಚ್ಛಾಮರಣಿಯಂತೆ ಸ್ವೀಕರಿಸಿದರು. ಹಾಗಾಗಿ ಸಾಮಾಜಿಕ ನೆಮ್ಮದಿ ಮೂಡಿಸುವುದು. ಇಂದಿನ ಜೀವನಕ್ಕೆ ಜರೂರಾಗಿದ್ದು, ಅದಕ್ಕಾಗಿ ನಮ್ಮ ಚರಿತ್ರೆಯಲ್ಲಿ ಸಾಮರಸ್ಯದ ಬದುಕಿನ ಕುರಿತು ಬಾಳಿ ಬೋಧಿಸಿದ ಸಮಾಜ ಸುಧಾರಕರು ಅನಕ್ಷರಸ್ಥ ಜನಸಾಮಾನ್ಯನೂ ತತ್ವಪದಗಳಲ್ಲಿ ಆಸಕ್ತಿಯನ್ನು ಮೂಡಿಸುವ ಶಕ್ತಿ ಶರೀಫರ ತತ್ವಪದಗಳಿಗೆ ಇದೆ. ಶಿಶುನಾಳ ಶರೀಫರ ತತ್ವಪದಗಳು ಇಂದಿನ ಜಾತೀಯತೆಯ ಬೇಧಭಾವವನ್ನು ಹೋಗಲಾಡಿಸಲು ಪ್ರಮುಖ ಪಾತ್ರವನ್ನು ವಹಿಸುತ್ತವೆ. ಕೋಮು ಸೌಹಾರ್ದ ನೆಲೆಗಟ್ಟಿನ ಮೇಲೆ ಸಮಾಜವನ್ನು ತಿದ್ದುವ ಕೆಲಸವನ್ನು ಶರೀಫರ ಸಾಹೇಬರು ಮಾಡಿದ್ದಾರೆ.

ಸ್ವರೂಪ

ಕನ್ನಡ ಸಾಹಿತ್ಯದಲ್ಲಿ ವಿಶೇಷವಾಗಿ ಶರೀಫರ ತತ್ವಪದಗಳಿಂದ ಶಿಷ್ಟಸಾಹಿತ್ಯಕ್ಕೆ ತನ್ನದೆ ಆದ ಕೊಡುಗೆಯನ್ನು ನೀಡಿದ ಪ್ರವಾದಿ. 19ನೇ ಶತಮನದಲ್ಲಿ ಅವರ ಭಾವೈಕ್ಯತೆಯ ದೃಷ್ಟಿಯನ್ನು ಹಿಂದೂ ಮುಸ್ಲಿಂರ ಐಕ್ಯತೆಯನ್ನು ತೋರಿದ ಮಹಾಚೇತನ ಶರೀಫರನ್ನು ಕರ್ನಾಟಕ ಕಬೀರರು ಎಂದು ಕರೆಯಬಹುದು.

ಸಾಂಸ್ಕೃತಿಕ ವಿಮರ್ಶೆಯ ಹಿನ್ನೆಲೆಯಲ್ಲಿ ನೋಡಿದಾಗ ಅವರ ತತ್ವಪದಗಳ ಬ್ರಿಟೀಷರ ವಸಾಹತುಶಾಹಿ ಕಲ್ಪನೆ, ಸಂಸ್ಕೃತಿಯ ಬೆಳವಣಿಗಯನ್ನು ಕಾಣುತ್ತೇವೆ. ಅವರ ತತ್ವಪದಗಳಲ್ಲಿ ನೀತಿಕತೆ ಸಂಸಾರಿಕ ಜಟಿಲತೆಯ ಪರಕಾಷ್ಠೆಯನ್ನು ಎತ್ತಿ ತೋರಿಸಿದ್ದಾರೆ. ಹಲವು ಪ್ರಾಣಿ ಸಂಕೇತಗಳನ್ನು ಬಳಸಿ ಸಮಾಜದ ಧರ್ಮದ ಮೂಢತೆಯನ್ನು ತೆಗೆದಿದ್ದಾರೆ. ಭಕ್ತಿಯಿಂದ ಎಲ್ಲ ಸ್ವಯಂಶಿಸ್ತನ್ನು

ಬೆಳೆಸಿಕೊಳ್ಳಬಹುದೆಂದು ಅವರ ಭಾವೈಕ್ಯತೆಯಲ್ಲಿ ಕಂಡುಕೊಳ್ಳಬಹುದು. ಆ ಸಮಯದಲ್ಲಿ ಅನಕ್ಷರತೆ, ಅಂಧಕಾರ, ಮೂಢನಂಬಿಕೆ, ಬಡವ-ಬಲಿತ ಎಂಬ ತಾರತಮ್ಯಗಳು ತಾಂಡವಾಡುತ್ತಿದ್ದವು. ಶರೀಫರ ತತ್ವ ಆದರ್ಶಗಳಿಗೆ ಅವರೇ ತಮ್ಮ ಜೀವನವನ್ನು ಮುಡುಪಾಗಿ ಇಟ್ಟು ಸಾಧಿಸಿ ತೋರಿಸಿದ್ದಾರೆ. ಶರೀಫರ ತತ್ವಪದದಲ್ಲಿ ಕಾಲದ ಬದಲಾವಣೆಯ ಚಿಹ್ನೆಯನ್ನು ತೋರಿಸಿದ್ದಾರೆ. ಆ ಸಮಯದಲ್ಲಿ ಹಿಂದೂ ಧರ್ಮದ ಬ್ರಾಹ್ಮಣ ಗುರುಗೋವಿಂದ ಭಟ್ಟರು ಶಿಷ್ಯನನ್ನಾಗಿ ಪಡೆದು ತಮ್ಮ ವಿದ್ಯೆಯನ್ನು ಧಾರೆಯೆರೆದಿದ್ದಾರೆ. ಈಗಲೂ ಉತ್ತರ ಕರ್ನಾಟಕದಲ್ಲಿ ಹಾವೇರಿ, ಧಾರವಾಡ ಜಿಲ್ಲೆಯ ಹಿಂದೂ-ಮುಸ್ಲಿಂರ ಭಾವೈಕ್ಯತೆಯನ್ನು ಶರೀಫರ ಗದ್ದುಗೆ ಶಿಶುನಾಳ ಪುಣ್ಯಕ್ಷೇತ್ರದಲ್ಲಿ ನಾವು ಕಣ್ಣಾರೆ ಕಂಡು ಮನಸ್ಸನ್ನು ಸೂರೆಗೊಳಿಸಬಹುದು. ಮನುಷ್ಯನ ಸಂಸಾರಿಕ ಕಾಮದ ನಿಗ್ರಹವನ್ನು ಸ್ವಂತ ತಾವೇ ತಮ್ಮ ಜೀವನದ ಉದಾಹರಣೆಯೊಂದಿಗೆ ಸಾಧಿಸಿ ತೋರಿಸಿದ್ದಾರೆ. ಅವರ ಮುಂದಾಲೋಚನೆಯನ್ನು ಈಗಿನ ಕಾಲದ ಯಾವ ತತ್ವಜ್ಞಾನಿಯು ಮಾಡದ ಸಾಧನೆಯನ್ನು 19ನೇ ಶತಮಾನಕ್ಕೆ ಕೊಡುಗೆಯಾಗಿ ನೀಡಿದ್ದಾರೆ. ಶರೀಫರ ಜನಿಸಿ ಎರಡು ನೂರು ವರ್ಷವಾದರೂ ಅವರ ತತ್ವಪದಗಳು ಇಂದಿನ ಯುವ ಪೀಳಿಗೆಗೆ ದಾರಿದೀಪವಾಗಿವೆ. ದ್ವಿಶತಮಾನದ ಆಚರಣೆಯನ್ನು ಮಾಡುವ ಉದ್ದೇಶವನ್ನು ಶಿಶುನಾಳ ಶರೀಫರ ಟ್ರಸ್ಟ್ ಹಮ್ಮಿಕೊಳ್ಳುವ ಕಾರ್ಯಕ್ರಮವಿದೆ ಶಿಶುನಾಳದಲ್ಲಿ.

ಈಗಿನ ಪರಿಸ್ಥಿತಿಗೆ ಹೋಲಿಸಿದರೆ ಜಾತಿ ಬೇಧ ಕಲ್ಪನೆ ಹಿಂದೂ-ಮುಸ್ಲಿಂ, ಕ್ರೈಸ್ಥ, ಜೈನ, ಬುದ್ಧಿಸಂ ಎಂಬ ಬೇಧಭಾವಗಳನ್ನು ನೋಡಿದರೆ ಅವರ ಭಾವೈಕ್ಯತೆಯ ಕಲ್ಪನೆ ಆ ಕಾಲಘಟ್ಟಕ್ಕಿಂತ ಈ ಸಮಯಕ್ಕೆ ಸೂಕ್ತವೆಂದು ನನ್ನ ಅಭಿಪ್ರೇರಣೆ. ರಾಜಕಾರಣದ ಜೊತೆಗೆ ಧರ್ಮದ ಜಾಡು ಸಹ ಕಾರ್ಯವನ್ನು ಮಾಡುತ್ತಿವೆ. ಈಗಿನ ಸಮಯದಲ್ಲಿ ಸಾಮರಸ್ಯದ ಭಾವನೇ ಕಡಿಮೆಯಾಗುತ್ತದೆ. ಯುವಜನಾಂಗದ ಮೇಲೆ ಪರಿಣಾಮವನ್ನು ಬೀರುತ್ತದೆ.

ಶರೀಫರು ತಮ್ಮ ವಯಸ್ಸಿನುದ್ದಕ್ಕೂ ಸಮಾಜದ ಒಳಿತಿಗಾಗಿ ಹೋರಾಟದ ಮನೋಭಾವನೆಯನ್ನು ಸಾಧಿಸಿ ತೋರಿಸಿದ್ದಾರೆ. ಅಜ್ಞಾನ, ಅಂಧಕಾರ, ಮೂಢನಂಬಿಕೆ, ಮೇಲು-ಕೀಳು ಭಾವನೆಯನ್ನು ಸಂಪೂರ್ಣವಾಗಿ ತೊಲಗಿಸಲು ಹೋರಾಟದ ಮನೋಭಾವನೆಯನ್ನು ಅವರ ತತ್ವಾದರ್ಶಗಳಲ್ಲಿ ಕಾಣಬಹುದು. ಆಧುನಿಕತೆಯ ಕಲ್ಪನೆಯನ್ನು ಅವರ ಪದಗಳಲ್ಲಿ ಕಾಣುತ್ತೇವೆ. ಅಧಿಕಾರಶಾಹಿ ನಿಲುವು ಸಹ ಎದ್ದು ಕಾಣುತ್ತದೆ. ಹೀಗೆ ಎಲ್ಲ ಅಂಶಗಳನ್ನು ನೋಡಿದಾಗ ಒಟ್ಟಾರೆ ಅವರ ತತ್ವಪದಗಳ ಭಾವೈಕ್ಯತೆಯ ಸ್ವರೂಪವನ್ನು ಕಾಣಬಹುದು.

ಅಧ್ಯಾಯ–2

ತತ್ವಪದ ಮತ್ತು ಸಂಗೀತ ಪರಂಪರೆ

ಕನ್ನಡ ಶಕ್ತಿ ಸಾಹಿತ್ಯದಲ್ಲಿ ತತ್ವಪದಗಳಿಗೆ ಒಂದು ವಿಶಿಷ್ಟವಾದ ಮಹತ್ವವಿದೆ. ವಚನಕಾರರು, ಕೀರ್ತನಕಾರರು ಮತ್ತು ತತ್ವಪದಕಾರರು ಈ ಮೂರು ಗುಂಪಿನ ಅನುಭಾವಿಗಳು ಭಕ್ತಿಸಾಹಿತ್ಯದ ಪ್ರಮುಖ ಸ್ತೋತ್ರಗಾರರಾಗಿದ್ದಾರೆ. ನಿಜಗುಣ ಶಿವಯೋಗಿಗಳನ್ನು ತತ್ವಪದ ಪ್ರಕಾರದ ಪ್ರವರ್ತಕರೆಂದು ಗುರುತಿಸುವುದುಂಟು. ಅವರ ಕೈವಲ್ಯ ಪದ್ಧತಿ, ಮುಪ್ಪಿನ ಷಡಕ್ಷರಿಯ ಸುಬೋಧಸಾರ, ಸರ್ಪಭೂಷಣ ಶಿವಯೋಗಿಗಳ ಕೈವಲ್ಯ ಕಲ್ಪವಲ್ಲರಿ, ಚಿದಾನಂದಾವಧೂತರ ಕೈವಲ್ಯನವನೀತ, ಬಾಲಲೀಲಾಮಹಾಂತ ಶಿವಯೋಗಿಗಳ ಕೈವಲ್ಯ ದರ್ಪಣ, ಕಲಬುರ್ಗಿ ಜಿಲ್ಲೆಯ ಕಡಕೋಳ ಮಡಿವಾಳಪ್ಪನವರು, ಶಿಶುನಾಳ ಶರೀಫ ಸಾಹೇಬರ ತತ್ವಪದಗಳು ಹೀಗೆ ಒಂದು ಪರಂಪರೆಯೇ 12ನೇ ಶತಮಾನಕ್ಕಿಂದ ಪೂರ್ವದಿಂದ 19ನೇ ಶತಮಾನದ ಸಂದರ್ಭದವರೆಗೂ ಬೆಳೆದುಬಂತು. "ಸುಮಾರು ಎರಡು ಸಾವಿರಕ್ಕೂ ಹೆಚ್ಚಿನ ಸಂಖ್ಯೆಯಲ್ಲಿರುವ ತತ್ವಪದಕಾರರ" ಒಂದು ಪಡೆಯೇ ಈ ಸಾಹಿತ್ಯವನ್ನು ಬೆಳೆಸಿದೆ. (ತತ್ವಪದಗಳು ಪ್ರಾತಿನಿಧಿಕ ಸಂಕಲನ. ಕ.ಸಾ.ಅ.ಬೆಂ.)

ಕೆಲವು ತತ್ವಪದಗಳನ್ನು ಬರೆದು ಇಟ್ಟದ್ದರೂ, ಅವುಗಳ ಪ್ರಸಾರವಾದದ್ದು ಹಾಡಿನ ಮೂಲಕ. ಭಜನೆಗಳ ಮೂಲಕ, ಮಠಗಳು, ಗುಡಿಗಳು, ಅನುಭಾವ ಗೋಷ್ಠಿಗಳು, ಭಜನಾ ಮೇಳಗಳು ಹಳ್ಳಿಗಾಡಿನ ಮೂಲೆಮೂಲೆಗಳಲ್ಲಿ ಇಂದಿಗೂ ಕ್ರಿಯಾಶೀಲವಾಗಿದ್ದು, ಪುಟ್ಟ ಸಾಂಸ್ಕೃತಿಕ ಕೇಂದ್ರಗಳಾಗಿ ಬಹುದೊಡ್ಡ ಸಂಖ್ಯೆಯ ಅನಕ್ಷರಸ್ಥರಲ್ಲಿ ಸಂಸ್ಕೃತಿ ಪ್ರಸಾರದ ಮಹತ್ವದ ಕೆಲಸ ಮಾಡುತ್ತಾ ಬಂದವು. ಅಕ್ಷರದ ನೆರವಿಲ್ಲದೆಯೂ ಒಂದು ಸಮುದಾಯ ಹೇಗೆ ತನ್ನ ಸಂಸ್ಕೃತಿಯನ್ನು ಅರ್ಥಪೂರ್ಣವಾಗಿ ಬೆಳಸಿಕೊಳ್ಳಬಲ್ಲದೆಂಬುದಕ್ಕೆ ತತ್ವಪದಗಳ ಬೆಳವಣಿಗೆ, ಪ್ರಸಾರ ಒಂದು ನಿದರ್ಶನವಾಗಿದೆ.

ತತ್ವಪದಗಳು ಜನಸಾಮಾನ್ಯರಿಗೆ ಬದುಕಿನ ಬಗ್ಗೆ ತಿಳುವಳಿಕೆ ನೀಡಿವೆ. ಆಧ್ಯಾತ್ಮಿಕ ಅರ್ಥ ನೀಡಿವೆ. ನೈತಿಕ ಮಾರ್ಗದರ್ಶನ ನೀಡಿವೆ. ಪರದ ಬಗ್ಗೆ ಒಲವು ಇದ್ದರೂ ಇಹದ ಬಗ್ಗೆ ಸಾಕಷ್ಟು ಕಾಳಜಿ ವಹಿಸಿವೆ. ವ್ಯಕ್ತಿಯ ವೈಯಕ್ತಿಕ ಆತ್ಮೋನ್ನತೆಯ ಸಾಧನೆಗೆ ತತ್ವಪದಗಳು ಹೆಚ್ಚ ಒಲವು ತೋರಿದರೂ, ಅದು ಸಾಮುದಾಯಿಕ ಅಭಿವೃದ್ಧಿಗೆ ಅವಕಾಶವನ್ನು ಕಲ್ಪಿಸಿದೆ.

ಆಧ್ಯಾತ್ಮಿಕ ಮತ್ತು ಜೀವನದ ವಾಸ್ತವ ತತ್ವಗಳನ್ನು ಪ್ರತಿಪಾದಿಸುವ, ಮನಸ್ಸಿಗೆ ಕಸರತ್ತು, ಚಿಂತನೆಯನ್ನು ಕೊಡುವ, ಮನಸ್ಸಿಗೆ ಕಿರಿಕಿರಿ ಕೊಡುವ ತತ್ವಪದಗಳು ಎಂಬ ಆರೋಪವನ್ನು ಅದರಲ್ಲಿನ ಗಹನವಾದ ತಾತ್ವಿಕ ವಿಚಾರಗಳ ಹಿನ್ನೆಲೆಯಲ್ಲಿ ಗುರುತಿಸಿದರೂ, ಅನಕ್ಷರಸ್ತ ಜನಸಾಮಾನ್ಯನೂ ತತ್ವಪದಗಳ ಬಗ್ಗೆ ಏಕೆ ಆಸಕ್ತಿವಹಿಸಿದ್ದಾನೆಂದು ಕಾರಣ ಹುಡುಕಲು ಹೊರಟಾಗ ಅದಕ್ಕೆ ಹಲವಾರು ಕಾರಣಗಳನ್ನು ಉದಾಹರಿಸಬಹುದು. ಅವುಗಳಲ್ಲಿ ಮುಖ್ಯವಾಗಿ ಗುರುತಿಸಲೇಬೇಕಾದ ಅಂಶವೆಂದರೆ, ಅದರಲ್ಲಿನ ಹಾಡುಗಾರಿಕೆ, ಲಯಗಾರಿಕೆ, ಕೆಲವು ಸಂದರ್ಭದಲ್ಲಿ ತತ್ವಪದಗಳನ್ನು ಓದಿದರೆ, ನಿಘಂಟು ಹಿಡಿದು ಅರ್ಥ ಹುಡುಕಾಟ ಮಾಡಿದರೂ ಹೊಳೆಯದ, ಅರ್ಥವಾಗದ ರಹಸ್ಯ ಒಳನೋಟಗಳು ಹಾಡಿದಾಗ ಬಿಚ್ಚಿಕೊಳ್ಳುತ್ತದೆ.

ಸಂಗೀತಕ್ಕೆ ಮಾನವನ ಮನಸ್ಸನ್ನು ಶುದ್ಧೀಕರಿಸುವ ಶಕ್ತಿಯೂ ಇದೆ. ತತ್ವಪದಗಳಿಗೆ ಅದರ ಸಾಹಚರ್ಯವನ್ನು ಪಡೆದು ಬಲಿಷ್ಠತೆಯನ್ನು ತಂದುಕೊಂಡಿದೆ. ತತ್ವಪದದ ಪ್ರತಿಯೊಂದು ಅಕ್ಷರವೆಂಬ ರಕ್ತಕಣದಲ್ಲೂ ಸಂಗೀತವೆಂಬ ಜೀವ ತುಂಬಿದೆ. "ಸಂಗೀತ" ಎಂಬ ಪದಕ್ಕೆ ಸಾರಂಗದೇವನು ತನ್ನ ಸಂಗೀತ ರತ್ನಾಕರದಲ್ಲಿ 'ಗೀತಂ ವಾದ್ಯಂ ತಥಾ ನೃತ್ಯಂ ತ್ರಯಂ ಸಂಗೀತ ಮುಚ್ಯತೇ' ಎಂದು ಹೇಳಿದ್ದಾನೆ. ಗೀತೆ ವಾದ್ಯ ಮತ್ತು ನೃತ್ಯ ಈ ಮೂರು ಸೇರಿದರೆ ಸಂಗೀತವಾಗುತ್ತದೆ. ಸಂಗೀತ ಕುರಿತು ನಮ್ಮ ಪೂರ್ವಜರೂ ವಾಖ್ಯಾನ ನೀಡಿದ್ದಾರೆ.

ಕಂಠರ್ಯೇನಾ ಲಂಭಯೇತ್ ಗೀತಂ॥
ಹಸ್ತೇನಾರ್ಥಂ ಪ್ರದರ್ಶಯೇತ್॥
ಚಕ್ಷುಭ್ಯಾಂ ಪ್ರದರ್ಶಯೇತ್‌ಭಾವಂ॥
ಪಾದಾಭ್ಯಾಂ ತಾಳಮಾಚರೇತ್॥

ಕಂಠದಿಂದಗೀತೆ, ಅದು ಸಾಹಿತ್ಯಪೂರಿತವಾದ ಗೀತೆಯನ್ನು ಹಾಡಬೇಕು. ಹಸ್ತಗಳಿಂದ ಅರ್ಥವನ್ನು ಸೂಚಿಸಬೇಕು. ಕಣ್ಣುಗಳಿಂದ ಭಾವವನ್ನು ಪ್ರಕಟಿಸಬೇಕು ಮತ್ತು ಕಾಲುಗಳಿಂದ ತಾಳವನ್ನು ಅನುಸರಿಸಬೇಕು. ಇದು ಅಲ್ಲದೇ ಪ್ರಾಚೀನ ಸಂಗೀತ ಶಾಸ್ತ್ರಜ್ಞರು ಸಂಗೀತಕ್ಕೆ ಶೃತಿಯೇ ತಾಯಿ ಮತ್ತು ಲಯಪ್ರಧಾನವಾದ ತಾಳವೇ ತಂದೆ ಎಂದು ಘೋಷಿಸಿದ್ದಾರೆ. ಈ ಎರಡೂ ಪ್ರಧಾನ ಪ್ರಾಣಗಳಲ್ಲಿ ಯಾವುದಾದರೂ ಒಂದಕ್ಕೆ ಲೋಪ ಬಂದಲ್ಲಿ ಸಂಗೀತಕ್ಕೆ ದೌರ್ಬಲ್ಯ ಬಂದು ಅನಾಥವಾಗುತ್ತದೆ. ಯಾಜ್ಞವಲ್ಕ್ಯನು 'ಗೀತಂ ವಾದ್ಯಂ ಚ ನೃತ್ಯಂ ಚ ತಾಳ ಹೀನಂ ನರಾತೇ' ಎಂದು ಹೇಳಿದ್ದಾನೆ. ಗೀತವಾಗಲಿ, ವಾದ್ಯವಾಗಲಿ, ನೃತ್ಯವಾಗಲಿ ತಾಳವಿಲ್ಲದೇ ರಂಜಿಸುವುದಿಲ್ಲ.

ತತ್ವಪದಕಾರರಂತೂ ಲಯ ಮತ್ತು ತಾಳವನ್ನು ಮರೆತವರಲ್ಲ. ಅವರಲ್ಲಿ ಅನೇಕರು ಸಂಗೀತ ಶಾಸ್ತ್ರವನ್ನು ತಿಳಿದವರಾಗಿದ್ದರು. ಕೆಲವರಂತೂ ಜನಪದ ಮೂಲದಿಂದ ಸಿಡಿದೆದ್ದು ಜಾನಪದೀಯ ಸ್ವರ ಅಥವಾ ಶೃತಿ ಸಂಗೀತವನ್ನೇ ಗರ್ಭೀಕರಿಸಿಕೊಂಡು ಬೆಳದುದ್ದುಂಟು.

ಸಂಗೀತ, ಸಾಹಿತ್ಯದ ಸಂಬಂಧ ಭಾರತೀಯ ದಂಪತಿಗಳ ಸಂಬಂಧ, ನೆಪರು ಪಾರಿವಾಳಕ್ಕೆ ಇದ್ದ ಸಂಬಂಧ, ಮಂಗ ಮತ್ತು ಅದರ ಬಾಲಕ್ಕಿರುವ ಸಂಬಂಧ ಹೀಗೆ ವಿಶ್ಲೇಷಿಸಬಹುದಾಗಿದೆ. "ಸಂಗೀತಕ್ಕೂ ತತ್ವಪದಕ್ಕೂ ಜೀವ-ದೇಹ ಸಂಬಂಧ, ಮುಖದ ಮೇಲೆ ಗೆರೆ ಮೂಡದ ನಗೆಯನ್ನು ಹೇಗೆ ಊಹಿಸಲಾಗದೋ ಹಾಗೆಯೇ ಸಂಗೀತದ ಸಾಹಚರ್ಯವಿಲ್ಲದ ತತ್ವಪದವನ್ನು ಕಲ್ಪಿಸಿಕೊಳ್ಳಲಾಗದು. ಒಂದರ್ಥದಲ್ಲಿ ಸಂಗೀತವು "ತತ್ವಪದಗಳಿಗೆ ಎದೆ-ಗುಂಡಿಗೆಯಾಗಿದೆ. ಸಂಗೀತಕ್ಕಳವಡಿಸಿ, ಲಯಬದ್ಧವಾದ ಸ್ವರ ಹಿಡಿದು ಹಾಡದಿದ್ದರೆ ತತ್ವಪದಗಳ ಮೂಲ ಆಂತರ್ಯ ಹೊರಬೀಳದು."

ತರವಲ್ಲ ತಗೀ ನಿನ್ನ ತಂಬೂರಿ
ಸ್ವರ ಬರದೇ ಬಾರಸದಿರು ತಂಬೂರಿ ॥ಪ॥
ಸರಸ ಸಂಗೀತ ಕುರುಹುಗಳನರಿಯದೆ
ಬರಿದೇ ಬಾರಸದಿರು ತಂಬೂರಿ ॥ಅ.ಪ॥

ಶಿಶುನಾಳ ಶರೀಫರ ಈ ಪಲ್ಲವಿ ಸ್ವರದ ಮಹತ್ವವನ್ನು ತಿಳಿಸುತ್ತದೆ. ರಾಗರಸದ ಪುಟಿಗೆಗಾಗಿ ತಂತಿವಾದ್ಯ, ತಾಳವಾದ್ಯ, ಗಾಳಿವಾದ್ಯಗಳನ್ನೂ ಮೇಳೈಸುವುದುಂಟು. ಇವು ಪರಿಪೂರ್ಣತೆ ಪಡೆಯಲು ತಾಳ ಹಾಕುವ ತಾಳಧರರು, ಚರ್ಮವಾದ್ಯ ಭಾರಿಸುವ ಆವುಜರು ಹಾಡುವ ಮೇಳದವರೂ ಇರಬೇಕಾಗುತ್ತದೆ. ಏಕತಾರಿಯ ಸೂರು ಹಿಡಿದು ಏಕವ್ಯಕ್ತಿಯೂ ಹಾಡಿಕೊಳ್ಳಬಹುದಾದರೂ, ಹಲವು ವಾದ್ಯಗಳ ಜೊತೆಗೆ ಹಿಮ್ಮೇಳವೂ ಕುಡಿದರೆ ಹಾಡಿಗೆ ಕೋಡು ಮೂಡುತ್ತದೆ. ತತ್ವಪದ ಹಾಡುಗಾರ ಭಾವತುಂಬಿ ಹಾಡುವಾಗ ಆತನ ಆಂಗಿಕ ಅಭಿನಯ-ಸಂಕೇತಗಳೇ ನರ್ತನವಾಗಿ ತತ್ವಪದದ ಮೂಲ ಅಂತಃಸತ್ವ ಚೈತನ್ಯಪಡೆದುಕೊಂಡು ಮಾನಸಿಕ ನಿರಾಳತನಕ್ಕೆ ಅವಕಾಶವನ್ನೂ ಒದಗಿಸುತ್ತದೆ. ಇದರಿಂದ ಸಾಧಕಜೀವಿಯು ನಾದಲೀಲೆಯಲ್ಲಿ ಕರಗಿ ಅಹಂ ನಿರಸಗೊಂಡು ನಿಜಪದವನ್ನೇರಲು ಅನುಕೂಲವಾಗುತ್ತದೆ.

ತತ್ವಪದಗಳು ಮೂಲತಃ ಸಂಗೀತ ಪ್ರಧಾನವಾಗಿಯೆ ರಚನೆಯಾಗಿವೆ. ಅವುಗಳಿಗೆ ಒಂದು ಪರಂಪರೆ ಎಂಬುದಿದೆ. ತತ್ವಪದಗಳು ಮತ್ತು ಸಂಗೀತ ಮೂಲವನ್ನು ಭಾರತದಲ್ಲಿ ಗುರುತಿಸುವಾಗ ನಾವು ಶಕ್ತಿ ಚಳುವಳಿಗಳ ಮೊರೆ ಹೋಗಬೇಕಾಗುತ್ತದೆ. ದಕ್ಷಿಣ ದ್ರಾವಿಡ ಪ್ರದೇಶಗಳು, ಮುಖ್ಯವಾಗಿ ಶೈವ ಮತ್ತು ವೈಷ್ಣವ ಧರ್ಮೀಯ ನಾಯನ್ಮಾರ್ ಮತ್ತು ಆಳ್ವರರ ಕೆಲವು ಗೇಯಬದ್ಧ ಆಧ್ಯಾತ್, ಗೀತೆಗಳು ಸ್ಮರಣೀಯ.

ಮಧ್ಯಕಾಲೀನ ಭಾರತದಲ್ಲಿನ ರಾಜಕೀಯ ವಿಪ್ಲವ, ಧಾರ್ಮಿಕ ಮುಖಾಮುಖಿ ಸಾಮಾಜಿಕ ಅರಾಜಕತೆಗಳ ಇಕ್ಕಟ್ಟಿನಲ್ಲಿ ಭಕ್ತಿಪಂಥ ಒಂದು ಚಳುವಳಿಯ ಸ್ವರೂಪ ಪಡೆಯಿತು. ಹತ್ತನೆಯ ಶತಮಾನಕ್ಕಾಗಲೇ ತಮಿಳುನಾಡಿನಲ್ಲಿ ನಾಯನ್ಮಾರರು ಮತ್ತು ಆಳ್ವಾರರು ಈ ಅನುಭಾವಿ ಪರಂಪರೆಯ ಹರಿಕಾರರಾಗಿ ಹರ-ಹರಿ ಭಕ್ತಿಯನ್ನು ಸಾರಿದರು. ತಮಿಳುನಾಡಿನಲ್ಲಿ ನಡೆದ ಈ 'ಭಕ್ತಿ ಚಳುವಳಿಯ ಪ್ರಕ್ರಿಯೆ, ವಿಭಿನ್ನ ಕಾಲಘಟ್ಟಗಳಲ್ಲಿ ಭಾರತದಾದ್ಯಂತ ವ್ಯಾಪಿಸಿತು. ಆಧ್ಯಾತ್ಮಿಕ ಗೀತೆಗಳಿಗೆ ಜನ್ಮ ನೀಡಿತು. ಕರ್ನಾಟಕದಲ್ಲಿ ಅದು ಹನ್ನೆರಡನೆಯ ಶತಮಾನದ ಶಿವಶರಣತ ಹರಭಕ್ತಿ ಹಾಗೂ ಹದಿನೈದನೆಯ ಶತಮಾನದಲ್ಲಿ ಆರಂಭವಾದ ಹರಿದಾಸರ ಕೃಷ್ಣ ಭಕ್ತಿಯ ಚಳುವಳಿಗಳನ್ನೂ ಜೊತೆಗೂಡಿಸಿಕೊಂಡು ಬೆಳೆಯಿತು. ಅಷ್ಟೇ ಅಲ್ಲದೆ ಜಿನಭಕ್ತರು, ಮುಸ್ಲಿಮತು, ಸೂಫಿಗಳು, ಕ್ರೈಸ್ತರು ಮೊದಲಾದ ಸಂತ ಪರಂಪತೆಯಲ್ಲಿ ತತ್ವ ಸ್ವರೂಪವನ್ನು ತಿಳಿಸುವ, ರಾಗ-ತಾಳ ಸಮನ್ವಿತವಾದ ಭಕ್ತಿಯ ಹಾಡುಗಳು ತಲೆಯೆತ್ತಿದವು.

ತತ್ವಪದಗಳು ಎಂಬ ಪ್ರಕಾರ ತನ್ನ ಪರಂಪರೆಯಲ್ಲಿ ಒಂದೇ ರೂಪವಾಗಿ ಬೆಳೆದಿಲ್ಲ. ಅದು ವೈವಿಧ್ಯತೆಯನ್ನು ರೂಢಿಸಿಕೊಂಡು ಹಲವಾರು ಹೆಸರುಗಳಿಂದ ಕರೆಸಿಕೊಂಡು ಬೆಳವಣಿಗೆಯನ್ನು ಹೊಂದಿದೆ. ಅವುಗಳನ್ನು ವಿದ್ವಾಂಸರು ಅಧ್ಯಯನದ ದೃಷ್ಟಿಯಿಂದ ತತ್ವಪದಗಳು ಎಂಬ ನಾಮಕರಣದಲ್ಲಿ ಸಮೀಕರಿಸಿರುವುದನ್ನು ಗಮನಿಸಬಹುದು. ತತ್ವಪದಗಳಿಗೆ ಆ ಪರಂಪರೆಯಲ್ಲಿ ಅನೇಕ ಹೆಸರುಗಳಿವೆ ಮತ್ತು ರಚನೆಕಾರರಿದ್ದಾರೆ.

ಗೀತ, ಸ್ವರ, ಸ್ವರ ವಚನ, ಹಾಡು, ಪದ, ಪದ ವಚನ, ಆಧ್ಯಾತ್ಮ ಕೀರ್ತನೆ, ಕೈವಲ್ಯ ಪದ, ಭಜನೆ ಹಾಡು, ಶಿವತತ್ವ ಗೀತ, ಹರಿತತ್ವ ಗೀತೆ ಮೊದಲಾದವು. ತತ್ವ ಪದಗಳು ಪ್ರಾತಿನಿಧಿಕ ಸಂಕಲನ (ಕ.ಸಾ.ಅ. ಬೆಂಗಳೂರು) ಕೃತಿಯ ಪ್ರಸ್ತಾವನೆಯಲ್ಲಿ ಪ್ರೊ.ಓ.ಎಲ್. ನಾಗಭೂಷಣಸ್ವಾಮಿಗಳು ಭಾರತ ಭಾಷೆಗಳ ಹಲವಾರು ತತ್ವಪದ ಸ್ವರೂಪದ ಹಾಡುಗಳನ್ನು ಹೆಸರಿಸಿದ್ದಾರೆ. ಅವುಗಳೆಂದರೆ

"ಸದಾಶಿವನಾಮ ಮತ್ತು ದೇಹ್‌ಬಿಚಾದಾರ್‌ಗೀತ್, ಬರ್‌ಗೀತಾದ ವಿವಿಧ ಪ್ರಕಾರಗಳು (ಅಸ್ಸಾಂ) ಕವ್ವಾಲಿಗಳು ಮತ್ತು ಚಾರ್‌ಬೈತ್ (ಉರ್ದು ಭಾಷೆಯ ಸೂಫಿಗಳು) ವತ್ಸೂನ್ (ಕಾಶ್ಮೀರಿ) ಭಕ್ತಿ ಪ್ಪಾಡಲ್ (ತಮಿಳು) ತತ್ವಾಲು (ತೆಲುಗು) ಸೂರ್‌ಸಾಗರ್ (ಪಂಜಾಬಿ), ಬಾಉಲ್‌ಗೀತ್ (ಬಂಗಾಳಿ), ಚರಿಯಾ ಪದ ಅಥವಾ ಚರಿಯಾ ಗೀತೆಗಳು (ಅಸ್ಸಾಂ, ಬಿರುಗಾಳಿ, ಒರಿಯಾ ಮತ್ತು ಮೈಥಿಲಿ ಭಾಷೆ) ತತ್ವಾತ್ಮಕ್ ಚೌತಿಶಾಗಳು (ಒರಿಯಾ) ಮೊದಲಾದವು. ಅಷ್ಟೆ ಅಲ್ಲದೆ ಹದಿನೇಳು ಮತ್ತು ಹದಿನೆಂಟನೆಯ ಶತಮಾನದಲ್ಲಿ ಬದುಕಿ ಬಾಳಿದ ಹಲವಾರು ಧರ್ಮ, ಜಾತಿ, ಜನಾಂಗಗಳಲ್ಲಿ ಹುಟ್ಟಿದ ಆಧ್ಯಾತ್ಮ ಸಾಧಕರು ಸಾಮರಸ್ಯದಿಂದ ಹಾಡಿದ, ಅವರ ಹೆಸರಿನಿಂದಲೇ ಪ್ರಖ್ಯಾತಿ ಪಡೆದ ಹಲವಾರು ಭಕ್ತಿಗೀತೆಗಳು ತತ್ವಪದಗಳಾಗಿ ಸಂಗೀತದ ಸಾಹಚರ್ಯವನ್ನು ಪಡೆದಿವೆ. ಸಂಗೀತವನ್ನು ಜೀವನಾಡಿಯಾಗಿ ಬಳಸಿ ಹಾಡಲು ಅನುಕೂಲವಾಗುವ ಛಂದೋ ಪ್ರಕಾರಗಳಾದ ರಗಳೆ, ತ್ರಿಪದಿ, ಚೌಪದಿ, ಸಂಗತ್ಯ, ಷಟ್ಪದಿ, ಅಕ್ಕರ, ಏಳೆಯಂಥ ಮಟ್ಟುಗಳು ತತ್ವಪದಗಳಲ್ಲಿದೆ. ಅಂಶ ಮತ್ತು ಮಾತ್ರಾ ಛಂದೋ ಪ್ರಕಾರಗಳು ಹದವರಿತು ಬಳಕೆಯಾಗಿವೆ.

ಇನ್ನು ಪರಂಪರೆಯ ಮೂಲವನ್ನು ಗಮನಿಸಿದಾಗ ಹನ್ನೆರಡನೆಯ ಶತಮಾನದ ವಚನಕಾರರು ತತ್ವಪದ ಮತ್ತು ಸಂಗೀತ ಪರಂಪರೆಯನ್ನು ಬೆಳೆಸಿದವರಲ್ಲಿ ಮೊದಲ ಸಾಲಿನಲ್ಲಿಯೆ ನಿಲ್ಲುತ್ತಾರೆ. ಇದನ್ನು ಡಾ.ಎಲ್. ಬಸವರಾಜ ಅವರು ಸ್ಪಷ್ಟಪಡಿಸಿದ್ದಾರೆ. "ಇಡೀ ಭಾರತೀಯ ಸಾಹಿತ್ಯಕ್ಕೆ ವಚನವೆಂಬ ಅಭೂತಪೂರ್ವ ಕಾಣಿಕೆಯನ್ನು ಕೊಟ್ಟ ಶಿವದಾಸರು (ಶರಣರು) ತಮ್ಮ ಕಾಲಕ್ಕೆ ಕನ್ನಡದಲ್ಲಿಲ್ಲದಿದ್ದ ಹಾಡುಗಳನ್ನು ಬರೆಯಲು ಮೊದಲಿಗರಾದರು. ಶಿವಶರಣರು ಬರೆದ ಹಾಡುಗಳು ಪಲ್ಲವಿಗಳಿಂದ ಕೂಡಿದ್ದು, ಬೇರೆ ಬೇರೆ ರಾಗಗಳಲ್ಲಿ ಹಾಡಲು ಹದವರಿತು ರಚಿತವಾದ ಗೇಯ ಕೃತಿಗಳು. (ಶಿವದಾಸ ಗೀತಾಂಜಲಿ, ಪುಟ. 65 1990) ಶರಣರು ರಚಿಸಿದ ಅನುಭಾವಿಕ ವಚನಗಳೆಂದು ಪ್ರಸಿದ್ಧಿಗೆ ಬಂದ ಸಾಹಿತ್ಯ ರೂಪಗಳು ಇತ್ತ ಪದ್ಯವೂ ಅಲ್ಲದ, ಅತ್ತ ಗದ್ಯವೂ ಅಲ್ಲದ "ಗದ್ಯ ಪದ್ಯ ಸಹಿತ" ವಾದ ವಿಶಿಷ್ಟ ನಾದ-ಲಯಯುಕ್ತ ರಚನೆಗಳು. ಅಚ್ಚಗನ್ನಡ, ಬಿಚ್ಚುಗನ್ನಡವನ್ನು ಪ್ರಮಾಣೀಕರಿಸಿ ಬಳಸಿದರು. ಇದೇ ಅವರ ಸಾಧನೆಯ ಸಾಹಿತ್ಯವೆಂದು ನಾವು ಸ್ವೀಕರಿಸಿದ್ದೇವೆ. ಶರಣರೆಂದರೆ ವಚನಗಳು ಎಂಬ ನೆನಪು ಬರುತ್ತದೆ. ಆದರೆ ಈ ವಚನಗಳಂತೆಯೇ ರಾಗ-ತಾಳ ಬದ್ಧವಾದ ಸಂಗೀತ ಸ್ಪರ್ಶ ಆಧ್ಯಾತ್ಮ ಗೀತೆಗಳನ್ನು ಅವರು ರಚಿಸಿದ್ದಾರೆ. ಅವುಗಳನ್ನು ವಿದ್ವಾಂಸರು ಸ್ವರವಚನಗಳೆಂದು ಹೆಸರಿಸಿದ್ದಾರೆ. ಆ ಸ್ವರ ವಚನಗಳೆ ಕನ್ನಡ ತತ್ವಪದ ಸಾಹಿತ್ಯಕ್ಕೆ ಮೂಲ ಎನ್ನಬಹುದು.

ಶರಣರ ಮುಕ್ತಕ ಸ್ವರೂಪದ ವಚನಗಳನ್ನು ಮೆಚ್ಚಿಕೊಂಡ ನಾವು ಅವರ ಸಂಗೀತ ಪ್ರಧಾನವಾದ ಆರ್ಧಯಾತ್ಮ ಸ್ವರ ವಚನಗಳಿಗೆ ಅಷ್ಟು ಮಹತ್ವ ಕೊಟ್ಟಿಲ್ಲ. ಅವುಗಳಲ್ಲಿರುವ ಗಹನವಾದ, ಆಧ್ಯಾತ್ಮ ವಿಚಾರದ ಕಾರಣದಿಂದಲೂ ಅವುಗಳು ಹೆಚ್ಚು ವ್ಯಾಪಕವಾಗಿ ಬೆಳೆಯಲಿಲ್ಲ. ಆ ಸ್ವರ ವಚನಗಳಿಗೆ ಶರಣರು ಸಂಗೀತ ಪರಂಪರೆಯ ಶಾಸ್ತ್ರೀಯ ರಾಗ–ತಾಳ, ಸಂಯೋಜನೆ ಮಾಡಿದ್ದರೆಂಬುದು ತಿಳಿದುಬರುತ್ತದೆ.

"ಹರಿಹರನು ಶರಣರನ್ನು ವರ್ಣಿಸುವಲ್ಲಿ 'ಗೀತಂಗಳಂ ಪಾಡುತ' ಎಂದು ಹೇಳಿದ ಮಾತು, ಹಾಗೆಯೇ 'ಬರೆದೋರಿ ಪಠಿಸಿ ಬಸವಣ್ಣ ಮೊದಲಾದ ಶಿವಶರಣರು ಸುರಿದ ವಚನ ಗೀತಂಗಳಂ' ಎಂಬ ಕೆಸ್ತೂರದೇವನ ಸ್ವರ ವಚನದ ಪಲ್ಲವಿಯೂ ಮೇಲೆ ಹೇಳಿದ ಹರಿಹರನ ಮಾತನ್ನೇ ಪುಷ್ಟೀಕರಿಸುತ್ತದೆ". ಶರಣರು ನಿಜವಾಗಲೂ ವಚನಗಳಲ್ಲದೆ ಸಂಗೀತ ವಚನಗಳನ್ನು ಹಾಡುತ್ತಿದ್ದರು ಎಂಬುದಕ್ಕೆ ಈ ಮಾತುಗಳೇ ಸಾಕ್ಷಿ.

ಬಸವಣ್ಣ, ಚನ್ನಬಸವಣ್ಣ, ಮಹಾದೇವಿಯಕ್ಕ, ಸಿದ್ಧರಾಮ, ಸಕಲೇಶ ಮಾದರಸ, ಪ್ರಭುದೇವರಾದಿಯಾಗಿ ಬಹುಸಂಖ್ಯೆಯ ಶಿವಶರಣರು ತತ್ವಗೀತೆಗಳನ್ನು ಹಾಡಿದಲ್ಲದೆ, ಸಂಗೀತ ಬಲ್ಲವರಾಗಿದ್ದಾರೆಂಬುದಕ್ಕೆ ಸಾಕಷ್ಟು ಆಧಾರಗಳಿವೆ. ಕಿನ್ನರಿ, ವೀಣೆ, ದಂಡಿಗೆ, ತಾಳ ಮುಂತಾದವುಗಳ ಹಿಮ್ಮೇಳದಲ್ಲಿ ಶರಣರು ತಮ್ಮ ಗೀತೆಗಳನ್ನು ಹಾಡುತ್ತಿದ್ದರೆಂಬುದಕ್ಕೆ ಮರುಳಸಿದ್ಧನ ಕಿನ್ನರಿ, ಸಕಲೇಶಮಾದರಸನ ವೀಣೆ, ಬಸವನ ದಂಡಿಗೆ, ಬಾಹೂರ ಬ್ರಹ್ಮಯನ ತಾಳ ಎಂಬುವು ರೂಢಿಯ ಮಾತಾಗಿವೆ. (ಶಿವದಾಸ ಗೀತಾಂಜಲಿ, ಪುಟ. 102) ಎನ್ನ ಕಾಯವ ದಂಡಿಗೆಯ ಮಾಡಯ್ಯ ಶಿರವ ಸೋರೆಯ ಮಾಡಯ್ಯ ಎಂಬ ವಚನದಲ್ಲಿ ಬಸವಣ್ಣನವರು ದಂಡಿಗೆ, ಸೋರೆ, ತಂತಿ, ಕಡ್ಡಿ, ಬತ್ತೀಸರಾಗ ಮುಂತಾದ ಸಂಗೀತ ಪರಿಕರದ ಪ್ರಸ್ತಾಪವನ್ನು ಮಾಡಿದ್ದಾರೆ. ಭಕ್ತಿಭಂಡಾರಿಯಾದ ಅವರಿಗೆ ಸಂಗೀತದ ಭಕ್ತಿ ಅಗಾಧವಾದದು ಎಂಬುದು ತಿಳಿದಿತು. ಅದಕ್ಕಾಗಿ ಅವರು ಒಂದೆಡೆ "ಕಿಂಚಿತ್ತೂ ಗೀತವೊಂದನಂತಕೋಟಿ ಜಪ, ಜಪವೆಂಬುದೇಕೆ ಮನವೇ" ಎಂದಿದ್ದಾರೆ. ಅಷ್ಟೇ ಅಲ್ಲದೇ 'ಕುಡಲಸಂಗಮ ದೇವಾ ನಿನಗೆ ಕೇಡಿಲ್ಲವಾಗಿ ಆನು ಒಲಿದಂತೆ ಹಾಡುವೆ" ಎನ್ನುತ್ತಾ ಈಜು ಕಲಿತ ವ್ಯಕ್ತಿ ನೀರಿನಲ್ಲಿ ಹೇಗೆ ಬಿದ್ದರೂ ಅದು ಈಜಾಡಿ ಆತ ದಡ ಸೇರುವಂತೆ ಸಂಗೀತವನ್ನು ತನ್ನ ಮಾತಿನ ಶೈಲಿಯಲ್ಲಿಯೇ ಸೆರೆ ಹಿಡಿದ ಬಸವಣ್ಣ ಸಂಗೀತದ ವ್ಯಾಪಕತೆಯನ್ನು ಈ ಪದದಿಂದ ಗುರುತಿಸಿದ್ದಾನೆ.

“ಬಸವ ಪುರಾಣದಲ್ಲಿ ಸಕಲೇಶ ಮಾದರಸನು ಬತ್ತೀಸರಾಗಗಳಿಗೆ ಹೊಂದುವಂತೆ ಎಲ್ಲಾ ದಂಡಿಗೆಗಳನ್ನು ನಿಯೋಜಿಸಿ, ಹಾಡಿ ನರ್ತಿಸುತ್ತಿದ್ದುದರ ಉಲ್ಲೇಖವಿದೆ. ಸಿದ್ಧರಾಮನು ತನ್ನೊಂದು ವಚನದಲ್ಲಿ 'ಅರವತ್ತೆಂಟು ಸಾವಿರ ವಚನಂಗಳ ಹಾಡಿ ಹಾಡಿ ಸೋತಿತೆನ್ನ ಮನನೋಡಯ್ಯಾ' ಎನ್ನುತ್ತಾನೆ. ಅಸ್ತಂಗತವಾದ ಅಜಗಣ್ಣನಿಗೆ ಮುಕ್ತಾಯಕ್ಕ ಮರುಗುತ್ತಿರುವಾಗ, ಅಲ್ಲಮ ಪ್ರಭು 'ಬಲದ ಹಸ್ತದೊಳು ವೀಣಾ ದಂಡಮಂ ಹಿಡಿದು ಪರಮಾನಂದರಸ ಒಸರಲು ಪಾಡುವ ಸ್ವರವೇ ನಾದ ಬ್ರಹ್ಮದೊಳು ತರಹರವಾಗಿ ದಿವ್ಯವಚನಾಮೃತಂಗಳ ಪಾಡುತ್ತ ಬಂದನೆಂದು ಶೂನ್ಯ ಸಂಪಾದನೆಯಲ್ಲಿ ಪ್ರಸ್ತಾಪವಿದೆ. (ಗೂಳೂರು ಪುಟ 24) ಮತ್ತೊಂದು ಉದಾಹರಣೆ –

“ಎಂಭತ್ತು (ಎರಡೆಂಬತ್ತು) ಕೋಟಿ ವಚನವ ಹಾಡಿ
ಹಲವ ಹಂಬಲಿಸಿತ್ತೆನ್ನ ಮನವು
ಮನಘನವನರಿಯದು, ಘನಮನವನರಿಯದು
ಗುಹೇಶ್ವರನೆಂಬ ಲಿಂಗವನರಿದ ಬಳಿಕ
ಗೀತವೆಲ್ಲಾ ಒಂದು ಮಾತನೊಳಗು”

ಎನ್ನುವ ಅಲ್ಲಮ ಸಂಗೀತಕ್ಕೆ ಆಧ್ಯಾತ್ಮದ ಲೇಪನವನ್ನು ಕೊಟ್ಟಿದ್ದಾನೆ.

'ಅಯ್ಯಾ ನೀನು ಕೇಳಿದಡೆ ಕೇಳು ಕೇಳದಡೆ ಮಾಣು
ಆನು ಹಾಡಿದಲ್ಲದೆ ಸೈರಿಸಾರೆನಯ್ಯಾ'

ಎನ್ನುವ ಅಕ್ಕಮಹಾದೇವಿ ಹಾಡಿದ್ದಾಳೆ. ಈ ನಿದರ್ಶನಗಳೆಲ್ಲಾ ಹನ್ನೆರಡನೆಯ ಶತಮಾನದ ವಚನಕಾರರ ಸಂಗೀತ ಜ್ಞಾನಕ್ಕೆ ಸಾಕ್ಷಿಯಾಗಿವೆ. ಹಾಡುಗಾರಿಕೆಗಾಗಿಯೇ ರಚಿಸಿದ ಶಿವಶರಣರು ತಮ್ಮ ಹಾಡುಗಳಿಗೆ ಸಂಗೀತವನ್ನು ಆರೋಪಿಸಿಕೊಂಡೇ ಬರೆದರು. ಅವರ ದೃಷ್ಟಿಯಲ್ಲಿ ಒಂದು ಸ್ವರಪ್ರಧಾನವಾದ ವಚನ ಸಂಗತಿ, ಸಂಗೀತ, ಸಾಹಿತ್ಯಗಳ ಸುಂದರ ಸಂಗಮವಾಗಿದೆ. ಈ ಆಧ್ಯಾತ್ಮ ಗೀತೆಗಳನ್ನು ಹಾಡುವಾಗ ಸಂಗೀತ ನಮ್ಮ ಎದುರಿಗೇ ನಿಲ್ಲುತ್ತದೆ. ಭಕ್ತಿ, ಅರಿವು, ಅನುಭಾವ, ವೀರಶೈವ ನಿಷ್ಠೆ, ಆತ್ಮ ನಿವೇದನೆ, ಲಿಂಗಸಾಮರಸ್ಯದ ನಿರೂಪಣೆಗೆ ಮಹತ್ವದ ಸ್ಥಾನವನ್ನು ಈ ಗೀತೆಗಳಲ್ಲಿ ಕಲ್ಪಿಸಲಾಗಿದೆ.

“ತಂಗಾಳಿಯೆಲರು ಮರನೆ ಎ
ನ್ನಂಗದೊಳಗಿಪ್ಪ ಶಿವಲಿಂಗದಮರನೆ ॥ಪ॥
ಹುಟ್ಟಿದೆಡೆಯ ಬಿಟ್ಟು ಮರನೆ, ಕೈವಲ್ಯಕೆ

ದೃಷ್ಟವಾದ ಹೆಮ್ಮರನೇ ಮೆಟ್ಟಿ ತ್ರಿ
ಪುಟಿಯ ಕೀಲ ಬೆಟ್ಟದ ಮರನೆ ||3||
ಏರಿ ಇಳಿಯರಿಯದ ಅಲ್ಲಮಗೆ ಹೋ
ಮಾರು ಹೋದ ಮರನೆ ।
ಆರು ದರ್ಶನಕಾರೂಢ ಮರನೆ" ||4||

ಎಂಬ ಸಕಲೇಶ ಮಾದರಸರ ಸ್ವರವಚನ ತತ್ವಪದಗಳು ಮತ್ತು ಸಂಗೀತದ ಬೆಳವಣಿಗೆಯಲ್ಲಿ ಮಹತ್ವದ ದಾಖಲೆಯಾಗಿ ನಿಂತಿದೆ. ಮಾದರಸನಿಗಿಂತ ಆದ್ಯರೆಂದು ಜೇಡರ ದಾಸಿಮಯ್ಯನ ಸ್ವರ ವಚನವನ್ನು ಗುರುತಿಸಲಾಗಿದೆ.

ಶರಣರೆಲ್ಲರು ಅನುಭವ ಮಂಟಪದ ಅಧ್ಯಕ್ಷರೂ, ಜ್ಞಾನಯೋಗಿ, ಆಧ್ಯಾತ್ಮ ಪುರುಷ, ಅದ್ವೈತದ ಶಿಖರವಾದ ಅಲ್ಲಮನ ಮಾರ್ಗದರ್ಶನದಲ್ಲಿ ಆತನನ್ನೇ ಗುರುವಾಗಿ ಸ್ವೀಕರಿಸಿ ವಚನಗಳ ಜೊತೆಗೆ ವೈಯಕ್ತಿಕ ಸಾಧನೆಯ ಹಾದಿಯಲ್ಲಿ ತತ್ವಪದಗಳನ್ನು ಹಾಡಿ ಈ ಪರಂಪರೆಗೆ ಸೋಪಾನವಾಗಿ ನಿಂತಿರುವುದನ್ನು ಗಮನಿಸಬಹುದು. ಈ ಶರಣರು ತಮ್ಮ ಹಾಡುಗಳನ್ನು ವರಾಳಿ, ಶ್ರೀರಾಗ, ಬವುಲಿ, ಮದುಮಾಧವಿ, ತೆಲಗು, ಕಾಂಭೋದಿ, ಶುದ್ಧ ಕಾಂಭೋದಿ, ವಸಂತ, ಅಹಿರ ಮೊದಲಾದ ರಾಗಗಳಿಗೆ ಹೊಂದುವಂತೆ ರಚಿಸಿದ್ದಾರೆ. ಆದರೂ ಶರಣರ ಮುಕ್ತಕ ರೂಪದ ವಚನಗಳು ಪ್ರಸಿದ್ಧಿ ಪಡೆದಷ್ಟು ಅವರ ಈ ರಾಗ ಸಂಯೋಜನೆಯ ಸ್ವರವಚನಗಳು ಪಡೆಯಲಿಲ್ಲ. ತತ್ವಪದ ಪರಂಪರೆಯಲ್ಲಿ ಶರಣರನ್ನು ಮೊದಲ ತಲೆಮಾರಿನ ರಚನೆಕಾರರೆಂದು ಮಾತ್ರ ಗುರುತಿಸಬಹುದು.

ಹರಿದಾಸ ಪರಂಪರೆಯಲ್ಲಿ ಪ್ರಮುಖರೆನಿಸಿಕೊಂಡ ಪ್ರತಿಯೊಬ್ಬ ಕೀರ್ತನಕಾರನು ತತ್ವಪದನಗಳನ್ನು ರಚನೆ ಮಾಡಿ ಬೆಳೆಸಿದ್ದಾನೆ. ತತ್ವಪದಗಳ ಮೂಲ ತಾತ್ವಿಕ ವಿಚಾರಗಳು ಶರಣರಿಂದ ಬೆಳೆದು ಶಿವಯೋಗ ತತ್ವಗಳಾಗಿ ಹೇಗೆ ಗುರುತಿಸಿಕೊಂಡವೋ, ಹಾಗೆಯೇ ತತ್ವಪದಗಳ ಸಂಗೀತ, ಜನಪ್ರೀಯತೆಯನ್ನು ಪಡೆಯಲು ದಾಸರೂ ಮೂಖ್ಯಕಾರಣಕರ್ತರು. ದಾಸರ ಅದೆಷ್ಟೋ ರಚನೆಗಳು ತತ್ವಗೀತೆಗಳಾಗಿ ಹೆಸರು ಪಡೆದಿವೆ. ಹರಿಭಕ್ತಿ ಮತ್ತು ವೈಕುಂಠ ತತ್ವಗಳು ಶಿವಯೋಗ ತತ್ವಗಳಂತೆಯೇ ಪ್ರಸಿದ್ಧಿ ಪಡೆದಿವೆ. ಉತ್ತರ ಕರ್ನಾಟಕದಲ್ಲಿ ಶೈವಭಕ್ತಿ ಪ್ರಾಧಾನ್ಯತೆ ಪಡೆದಂತೆ ದಕ್ಷಿಣದಲ್ಲಿ ಹರಿಭಕ್ತಿಯು ಅಷ್ಟೇ ಪ್ರಸಿದ್ಧಿಯನ್ನು ಪಡೆಯಿತು. ತತ್ವಪದಕಾರರನ್ನು ಹುಟ್ಟು ಹಾಕಿತು. ಹರಿಕಥಾ ಸಂಪ್ರದಾಯವನ್ನು ಬೆಳೆಸಿತು.

ಪುರಂದರದಾಸರು 'ಮಾನವ ಜನ್ಮ ದೊಡ್ಡದು ಇದ ಹಾನಿ ಮಾಡಲೇಬೇಡಿ ಹುಚ್ಚಪ್ಪಗಳಿರಾ' ಎಂಬ ಸಾರ್ವಕಾಲಿಕ ಸತ್ಯ ತತ್ವವನ್ನು ಪ್ರತಿಪಾದಿಸಿದಂತೆ ಅದು ಅಷ್ಟೇ ಜನಪ್ರಿಯವಾಗಿ ಜನರ ಹೃದಯಗಳಲ್ಲಿ ನಿಲ್ಲಲು ಸಂಗೀತದ ಪ್ರಯೋಗವನ್ನು ಸುಮಧುರವಾಗಿ ಬಳಸಿದರು. "ಅದುವರೆಗೂ ಕೇವಲ ರಾಜಾಸ್ಥಾನಗಳ, ವಿದ್ವಾಂಸರ ಸೊತ್ತಾಗಿದ್ದ ಸಂಗೀತ ಪ್ರಕಾರವನ್ನು ವ್ಯವಸ್ಥಿತಗೊಳಿಸಿದ ಹರಿದಾಸರು, ಅದನ್ನು ವಿಕಾಸ ಮಾಡುತ್ತಲೇ ಜನಸಾಮಾನ್ಯರಿಗೂ ಅದರ ಸೌಂದರ್ಯನು ಭೂತಿಯಾಗುವಂತೆ ಮಾಡಿದರು. ಇದರ ಪ್ರಭಾವದ ತೀವ್ರತೆ ಎಷ್ಟೆಂದರೆ ಸಾಮಾನ್ಯರಲ್ಲಿ ಶ್ರೀಸಾಮಾನ್ಯರೂ ಸಹ ಮುಂದೆ ಕೀರ್ತನಕಾರರಾಗಿ, ಕವಿಗಳಾಗಿ, ವಾಗ್ಗೇಯಕಾರರಾಗಿ, ಅನುಭಾವಿ ತತ್ವಪದಕಾರರಾಗಿ ಸಮಾಜಕ್ಕೆ ಆಧ್ಯಾತ್ಮಿಕ ಮಾರ್ಗದರ್ಶನ ಮಾಡುವಂತಹ ಪರಿಸರ ನಿರ್ಮಾಣವಾಯಿತು. ತಾಳ, ಮೇಳಗಳಿದ್ದು, ಪ್ರೇಮವಿಲ್ಲದ ಗಾನ ಭಗವಂತ ತಾಳುವುದಿಲ್ಲ, ಕೇಳುವುದಿಲ್ಲ ಎಂದು ಹೇಳಿ ಸಂಗೀತವನ್ನು ನಾದೋಪಾಸನೆಯಾಗಿ ಪರಿವರ್ತಿಸಿದವರು ಹರಿದಾಸರು. ಪುರಂದರ ದಾಸರಂತೂ ಸಂಗೀತ ಶಿಕ್ಷಣ ಕ್ರಮವನ್ನು ನಿರ್ಮಿಸಿಕೊಟ್ಟರಲ್ಲದೆ, ಕರ್ನಾಟಕ ಶಾಸ್ತ್ರೀಯ ಸಂಗೀತಕ್ಕೆ ಪಿತಾಮಹರೆನಿಸಿದರು.

ಅಂಬಿಗ ನಾನಿನ್ನ ನಂಬಿದೆ
ಜಗದಂಬಾರಮಣ ನಿನ್ನ ನಂಬಿದೆ
ತುಂಬಿದ ಹರಿಗೋಲಂಬಿಗ ಆದ
ಕೊಂಬತ್ತು ಛಿದ್ರ ನೋಡಂಬಿಗ
ಸಂಭ್ರಮದಿಂದ ನೋಡಂಬಿಗ ಅದ
ರಿಂಬು ನೋಡಿ ನಡೆಸಂಬಿಗ (ಪುರಂದರದಾಸರು)

ಪುರಂದರದಾಸರ ಈ ಗೀತೆ ಎಷ್ಟು ಜನಪ್ರಿಯತೆ ಗಳಿಸಿತ್ತೆಂದರೆ ಇದೇ ಹಾಡನ್ನು ಹಲವರು ತಮ್ಮ ತತ್ವ ವಿಚಾರಗಳಿಗೂ ಬಳಸಿಕೊಂಡಿದ್ದರು. ತಮ್ಮದೇ ಸ್ವಂತ ಪಾಠಗಳಿಗೂ ಕಾರಣೀಭೂತರಾಗಿದ್ದರು. ಒಬ್ಬ ಅಜ್ಞಾತ ತತ್ವಪದಕಾರನು ದಾಸರ ಈ ಪದವನ್ನೇ ತಿರುಚಿ ಈ ರೀತಿ ಹೇಳಿದ್ದಾನೆ.

'ಅಂಬಿಗ ನಾ ನಿನ್ನ ನಂಬಿದೆ ಜಗ
ದಂಬಿಕೆ ರಮಣನ ಹೊಂದಿದೆ
ಒಂದು ಹರುಗೋಲಿಗಂಬಿಗ ಅದ
ಕೊಂಬತ್ತು ದ್ವಾರಗಳಂಬಿಗ

ಇಂಬ ನೋಡಿ ನಡೆಸಂಬಿಗ ಬಹಳ
ಸಂಭ್ರಮದಿಂದಲಂಬಿಗ'

(ಅಜ್ಞಾತ ತತ್ವಪದಕಾರ)

ಹಾಗೆ ದಾಸರ ಎಷ್ಟೋ ರಚನೆಗಳು ತತ್ವಪದಗಳಾಗಿ ಪರಿವರ್ತನೆ ಆಗಿರುವುದನ್ನು ನೋಡಬಹುದು.

(ಇದೇ ರೂಪದ ರಚನೆಯು ಅಕ್ಕಮಹಾದೇವಿ ಹಾಗೂ ಜಿಗುನಿ ಮುರುಳಾರಾರ್ಧ್ಯರ 'ನಂಬಿದೆ ಗುರುವೇ ನಂಬಿದೆ' ಹಾಡುಗಳಲ್ಲಿ ಕಾಣಬಹುದು. ಕೈವಾರ ನಾರೇಯನರ 'ನಿನ್ನ ನಂಬಿದೆನೊ' ತತ್ವಪದವನ್ನು ಗಮನಿಸಬಹುದು. ತತ್ವಪದಗಳು ಪ್ರಾತಿನಿಧಿಕ ಸಂಕಲನ)

ಅನುಭಾವ ಮತ್ತು ಅಂತರಂಗದ ಅರಿವಿನ ಮೂಲಭೂತ ತತ್ವಗಳನ್ನು ನಿರೂಪಿಸುವುದರ ಕಡೆಗೆ ಒಲವು ತೋರಿದ, ಶಿವತತ್ವಾನುಭಾವಿ, ಸಂಗೀತ ಪರಂಪರೆಯ ತತ್ವ ಪದಗಳ ಹರಿಕಾರ ಆದ್ಯ ಪ್ರವರ್ತಕನೆಂದು ಪ್ರಸ್ತುತ ಗುರುತಿಸಲ್ಪಟ್ಟಿರುವವರು ನಿಜಗುಣ ಶಿವಯೋಗಿಗಳು. ಇವರು ಬಹುಶಃ ಹರಿದಾಸ ಸಾಹಿತ್ಯದ ಸಮೃದ್ಧಕಾಲ 15ನೇ ಶತಮಾನ (ಕ್ರಿ.ಶ. 1500) ದಲ್ಲಿ 12ನೇ ಶತಮಾನದ ಶರಣರು ಹುಟ್ಟು ಹಾಕಿದ, ತತ್ವಗಹನವಾದ, ಉದಾತ್ತವಾದ, ಆಧ್ಯಾತ್ಮಿಕ ತತ್ವಗೀತೆಗಳ ಸಾರವನ್ನು ಸರಳವಾಗಿ, ಸುಂದರವಾದ ರೀತಿಯಲ್ಲಿ ಹಾಡಿದರು. ತತ್ವಪದಗಳಿಗೆ ಸೀಮಿತವಾದ ಗೀತಸಂಕಲನಗಳನ್ನು ಹೊರತಂದರು. (ಕೈವಲ್ಯಪದ್ಧತಿ ಪರಮಾನುಭವದ ಬೋಧೆ, ಅನುಭವಸಾರ, ಪರಮಾರ್ಥಗೀತೆ, ವಿವೇಕ ಚಿಂತಾಮಣಿ, ಪರಮಾರ್ಥ ಪ್ರಕಾಶಿಕೆ) ಅವರ ಈ ಸರಳ ಶೈಲಿಗೆ ಸಂಗೀತದ ಸುಲಭ ರಾಗ ಸಂಯೋಜನೆಗೆ ಶರಣರಿಗಿಂತ ದಾಸರೇ ಹೆಚ್ಚು ಪ್ರೇರಣೆ ಎನ್ನಬಹುದು. ಆದರೆ ಶಿವಯೋಗ ತತ್ವಗಳ ಪ್ರತಿಪಾದನೆಯಲ್ಲಿಯಂತೂ ಶರಣ ಮಾರ್ಗಾವಲಂಬಿಯಾಗಿ ಮುಂದುವರೆದವರು. ಈ ನಿಜಗುಣ ಶಿವಯೋಗಿಗಳು. ಇವರಿಗಿಂತ ಹಿಂದೆ ಪ್ರೌಢದೇವರಾಯನ ಕಾಲದಲ್ಲಿ ಕರಸ್ಥಲದ ನಾಗಿದೇವ, ಗುರುಬಸವಾದಿಗಳಲ್ಲಿ ತತ್ವಪದ ಹುಲುಸಾಗಿ ಬೆಳೆಯಿತಾದರೂ ನಿಜಗುಣ ಶಿವಯೋಗಿಗಳ ಕೈಯಲ್ಲಿ ಕೈವಲ್ಯಕ್ಕೇರಿತೆನ್ನಬಹುದು.

ಸಾಂಸ್ಥಿಕ ಧರ್ಮ ಸಂಸ್ಥೆಗಳಲ್ಲಿದ್ದು, ವ್ಯವಸ್ಥಿತ ಶಿಕ್ಷಣವನ್ನು ಪಡೆದು ತತ್ವಪದ ಪರಂಪರೆಯಲ್ಲಿ ಗುರುತಿಸಿಕೊಳ್ಳುವ ನಿಜಗುಣ ಶಿವಯೋಗಿಗಳು, ಅನಂತರದ ಶಿವಯೋಗಿಗಳೆಲ್ಲದರ ತತ್ವಪದಗಳೂ ಸಂಗೀತ ಪ್ರಧಾನವಾಗಿಯೇ ಇದೆ. ನಿಜಗುಣ ಶಿವಯೋಗಿಗಳು ಸ್ವತಃ ಸಂಗೀತಜ್ಞರು, ಅರಸರು ಆಗಿ

ಭಕ್ತಿ, ಜ್ಞಾನ, ವೈರಾಗ್ಯ ಸಂಪನ್ನರು. ಅವರ ವಿವೇಕ ಚಿಂತಾಮಣಿಯು ಸಂಗೀತಕ್ಕೆ ಸಂಬಂಧಿಸಿದ ಅನೇಕ ವಿಷಯಗಳನ್ನೊಳಗೊಂಡ ಒಂದು ಪುಟ್ಟ ವಿಶ್ವಕೋಶವಾಗಿದೆ. ತತ್ವಪದಗಳಿಗೆ ಸಂಗೀತವೂ ಹಾಸುಹೊಕ್ಕಾಗಿದೆ. ಹಾಡು-ಹಾಡುತ್ತಲೇ ಹುಟ್ಟಿಕೊಂಡ ತತ್ವಪದಗಳನ್ನು ಸಂಗೀತದಿಂದ ಬೇರ್ಪಡಿಸಲಾಗದು. ಅದಕ್ಕಾಗಿ ಇಂದಿಗೂ ಭಕ್ತರ ತಂಡದವರು ತತ್ವಪದಗಳನ್ನು 'ಏಕತಾರಿ'ಯ ಮೂಲಕ ಹಾಡುವುದನ್ನು ಕಾಣುತ್ತೇವೆ.

1. **ಜ್ಯೋತಿ ಬೆಳಗುತಿದೆ ವಿಮಲ ಪರಂಜ್ಯೋತಿ ಬೆಳಗುತಿದೆ**
   ಮಾತು ಮನಂಗಳಿಂದತ್ತ ಮೀರಿದ
   ಸಾತಿಶಯದ ನಿರುಪಾಧಿಕ ನಿರ್ಮಲ – ॥ಪ॥
   (ನಾದ ರಾಮಕ್ರಿಯೆ ರಾಗ)

2. **ಕೋಗಿಲೆ ಚೆಲ್ವ ಕೋಗಿಲೆ ಮುದ್ದು**
   ಕೋಗಿಲೆ ಜಾಣ ಕೋಗಿಲೆ ॥ಪ॥

ನಿಜಗುಣ ಶಿವಯೋಗಿಗಳ ಸ್ವರಪ್ರಧಾನ ಹಾಡುಗಳ ಪಲ್ಲವಿಗಳು ಇವು.

ಬಸವಾದಿ ಶರಣರು, ನಿಜಗುಣ ಶಿವಯೋಗಿಗಳು ಮಾತ್ರವಲ್ಲ ಮುಪ್ಪಿನ ಷಡಕ್ಷರಿ, ಸರ್ಪಭೂಷಣ ಶಿವಯೋಗಿ, ಬಲಯೋಗಿ ಮಹಾಂತ ಶಿವಯೋಗಿ, ಘನಮಠದಾರ್ಯ, ಕಡಕೋಳ ಮಡಿವಾಳಪ್ಪ, ಕುಡಲೂರು ಬಸವಲಿಂಗಪ್ಪ, ರಾಮಪುರವ ಬಕ್ಕಪ್ಪ ಮುಂತಾಗಿ ಬಹುಜನ ತತ್ವಪದಕಾರರಿಗೆ ಅಪಾರವಾದ ಸಂಗೀತ ಜ್ಞಾನವಿದ್ದುದು ಸ್ಪಷ್ಟವಾಗಿದೆ. ರೇಗುಪ್ತಿ, ನಾದರಾಮಕ್ರಿಯೆ, ಶರಂಕರಾಭರಣ, ಭೋಗಷ್ಟಪದಿರಾಗ, ಯಾಲಪದ, ಬಿಲಹರಿ ಸೌರಾಷ್ಟ್ರ, ತೋಡಿ, ದೇಶಿ ಮೊದಲಾದ ರಾಗನಿರ್ದೇಶನಗಳಲ್ಲಿ ತತ್ವಪದಕಾರರು ತಮ್ಮ ಹಾಡುಗಳನ್ನು ರಚಿಸಿ ಹಾಡಿರುವುದನ್ನು ಗಮನಿಸಬಹುದು.

1. **ಗಡಗಿ ತೊಳೆದು ಅಡುಗಿ ಮಾಡಮ್ಮಾ ತನಿ**
   ಗಡಗಿ ತಳೆದು ಅಡುಗಿ ಮಾಡಮ್ಮಾ ॥ಪ॥
   ಅನುಭಾವದಡಿಗೆಯ ಮಾಡಿ ಯಡಿಯಮಾಡಮ್ಮಾ
   ದೇವರಿಗೆಡೆಯಮಾಡಿ ಗಂಡಗುಣಿಸಮ್ಮ ॥ಅ.ಪ.॥
   (ಕಡಕೋಳ ಮಡಿವಾಳಪ್ಪ)



2. **ಮನವೆಂಬ ಮರ್ಕಟನ ತಡೆಯಲಾರೆನುದೇವಾ**
   ಎನಿತಿದರ ಚಪಲ ಚೇಷ್ಟೆಗಲ ವರ್ಣಿಸಲಿ

(ಕೇತಾರಗೌಳರಾಗ–ಸರ್ಪಭೂಷಣ ಶಿವಯೋಗಿ)

ಸಾಹಿತ್ಯ ಸಂಗೀತದ ಸಂಬಂಧ ಅನ್ಯೋನ್ಯತೆಯಿಂದ ಕುಡಿಕೊಳ್ಳಲು ಸಾಮಾನ್ಯವಾಗಿ ತತ್ವಪದ ಪರಂಪರೆಯಲ್ಲಿ ಒಂದು, ಎರಡು, ಮೂರು ಅಥವಾ ನಾಲ್ಕು ಸಾಲುಗಳ ಸಂಗೀತ ನಿರ್ದೇಶಿತ ಪಲ್ಲವಿ ಬೆಳೆದು ಬಂದಿದೆ. ಕೆಲವೊಂದು ವಿಶೇಷಾರ್ಥಗಳನ್ನು ಸೂಚಿಸಲು ಅನುಪಲ್ಲವಿಗಳು ಇರುವುದೂ ಉಂಟು. ಪ್ರತಿ ನುಡಿಯ ಮೊದಲು ಆವರ್ತನವಾಗುವ ಈ ಪಲ್ಲವಿಯು ಪದ್ಯದ ಸಾರವನ್ನು ಹೇಳುತ್ತದೆ. ನುಡಿಯಿಂದ ನುಡಿಗೆ ಕೊಂಡಿಯಾಗಿ ನಿಂತು ಭಾವವನ್ನು ಬೆಸೆದು ಅರ್ಥ ಸಾಧ್ಯತೆಯನ್ನು ವಿಸ್ತಾರಗೊಳಿಸುತ್ತದೆ. ತತ್ವಪದದ ಕೊನೆಯಲ್ಲಿ ರಚನೆಕಾರನ ಅಂಕಿತವು ತಪ್ಪದೆ ಇರುತ್ತದೆ. ಕೆಲವೊಮ್ಮೆ ಇಂತಹ ಅಂಕಿತವು ಪಲ್ಲವಿಯಲ್ಲಿ ಮತ್ತು ಪ್ರತಿ ನುಡಿಯ ಕೊನೆಯಲ್ಲಿ ಗೋಚರಿಸುವುದುಂಟು.

1. **ಹಾಕಿದ ಜನಿವಾರವಾ ಸದ್ಗುರುನಾಥಾ**
   ಹಾಕಿದ ಜನಿವಾರವಾ ॥ಪ॥
   ಹಾಕಿದ ಜನಿವಾರ ನೂಕಿದ ಭವಭಾರ
   ಬೇಕೆನುತಲಿ ಬ್ರಹ್ಮಜ್ಞಾನ ಉಚ್ಚರಿಸೆಂದು ॥ಅ.ಪ.॥

(ಶಿಶುನಾಳ ಶರೀಫ)

ತತ್ವಪದ ಸಂಗೀತ ಪರಂಪರೆಗೆ ಜನಪದ ಭಾವಗೀತಾತ್ಮಕ ಸೊಲ್ಲುಗಳು ಅನೇಕ ರೀತಿ ಪ್ರೇರಣೆ ನೀಡಿವೆ. ಹಲವು ದಾಟಿಗಳು ಜನಪದ ಶೈಲಿಯಲ್ಲಿವೆ. ಆನಪದರು ಹುಟ್ಟು ಕ್ರಿಯಾಶೀಲರು. ಸ್ವರ–ತಾಳವೆ ಅವರ ಬದುಕಾಗಿದೆ. ಗರತಿಯರು

ನಾರಾಯಣಾ ನಿನ್ನ ನಾಮದ ಬೀಜವ
ನಾನೆಲ್ಲಿ ಭಿತ್ತಿ ಬೆಳೆಯಲಿ । ನಿನ್ನ ನಾಮ
ನಾಲೀಗಿಮೇಲೆ ಬೆಳದೇನಾ

ಎಂದು ರಾಗಿ ಬೀಸುವಾಗ ದೇವರ ಪದ ಹಾಡಿದಾಗ ಆ ಕಲ್ಲೆ ಸ್ವರ–ತಾಳ ಮೂಲವಾಗುತ್ತದೆ. ಅವರ ಚಟುವಟಿಕೆಯ ಲಯವೇ ಸಂಗೀತವಾಗುವುದುಂಟು. ಅವರ ಮಾತೇ ಸರಸಸಾಹಿತ್ಯವಾಗುವುದುಂಟು. ಅಂತಹ ಗ್ರಾಮೀಣ ಜನಪದರು ಹುಟ್ಟು ಹಾಕಿದ ಅದೆಷ್ಟೋ ರಾಗಗಳು ತತ್ವಪದ ಸಂಗೀತ

ಸಂಪ್ರದಾಯದಲ್ಲಿದೆ. ಪರಾಕುಗಳು, ಜೋಗುಳ, ಗೊಂದಲ, ದುಂದುಮೆ, ಕಣಿ, ಚಂದಮಾಮ, ಕೋಲುಪದ, ಉಯ್ಯಾಲೆ, ಡಂಗೂರ, ಬುಡಬುಡಿಕ್ಯಾ, ಸೋಭಾನೆ, ಚೌಡಕಿ, ಗೀಗೀಪದ, ಮಂಗಳಾರತಿಯ ದಾಟಿಗಳಲ್ಲಿಯೂ ತತ್ವಪದಕಾರರು ಹಾಡಿದ್ದಾರೆ.

ಉದಾಹರಣೆ:

1. **ಸೋಬಾನೆವೆನ್ನೀರೆ ಸೋಬಾನೆವೆನ್ನೀರೆ**
   ಸೋಬಾನವೆನ್ನಿ ಶಿವಯೆನ್ನಿ ಸೋಬಾನವೆ ॥ಪ॥
   ಸೋಬನದ ಸೋಬಗನ್ನ ನರರೇನು ಬಲ್ಲರು
   ತಾ ಬಲ್ಲ ತನ್ನ ತಿಳಿದಂತೆ ಸೋಬಾನವೆ
   ಧರೆಯ ರಕ್ಷಣೆಗಾಗಿ ನರನರೂಪವ ಧರಿಸಿ
   ಧರಣಿಗುಪಕಾರ ಗುರುರಾಯ ಸೋಬಾನವೆ

   (ಅಜ್ಞಾತ ತತ್ವಪದಕಾರ–
   ತತ್ವಪದಗಳು ಪ್ರಾತಿನಿಧಿಕ ಸಂಕಲನ, ಎಸ್.ಎಂ.)

2. **ಕೋಲುಕೋಲೆನ್ನಿರೆ**
   ಸದ್ಗುರುವಿನ ಕೀಲಮೇಲೆನ್ನರೆ ॥ಪ॥

   (ರಾಮಪುರ ಬಕ್ಕಪ್ಪ)

3. **ಕೇಳಕ್ಕಯ್ಯ ನಾ ಮಾಡಿದ ಮದುವೆ ಮನಸಿಗೆ ಬರುತದೆ**
   ಕೇಳಕ್ಕಯ್ಯ ನಾ ಮಾಡಿದ ಮದುವೆ ಮನಸಿಗೆ ಬರುತದ ॥ಪ॥
   ಮುಂಡಕೆ ದಂಡೆಯ ಮುಡಿಸಿದೆ
   ಮುಸಕಿಲೆ ಸೋಬಾನ ಹಾಡಿದೆ.
   ಮುಂಡಕೆ ರುಂಡವ ಕೂಡಿಸಿದೆ
   ಮಂಗಳಾರತಿ ಬೆಳಗಿಸದೆ **(ಚಿದಾನಂದಾವಧೂತರು)**

ಕ್ರಿ. ಶ. ಸುಮಾರು ಹದಿನೇಳನೆ ಶತಮಾನದ ನಂತರ ಅಂದ್ರೆ 1701 ರಿಂದ 1900 ರವರೆಗಿನ ತತ್ವಪದ ಪರಂಪರೆಯು ಹಲವಾರು ದಾಟಿಗಳಿಗೆ ಒಗ್ಗಿಕೊಂಡಿರುವುದನ್ನು ಕಾಣಬಹುದು. ಈ ಕಾಲದ ವೀರಶೈವ ದಾರ್ಶನಿಕತೆಯ ಜೊತೆಗೆ ಅನುಭಾವಿಕ ಗುರಿಯನ್ನು ಹೊಂದಿದ್ದ, ಹೆಚ್ಚು ಸಾಮಾಜಿಕ ಪ್ರಜ್ಞೆಯನ್ನು ಒಡಮೂಡಿಸಿಕೊಂಡು ಸರಳವಾದ, ನೀತಿ ನಿರೂಪಣೆ, ಜನಪದ, ಭಾಷಾಶೈಲಿ, ವೈವಿಧ್ಯಮಯ ಸಂಗೀತದ ಬಳಕೆ ವೆಗ್ಗಳಗೊಂಡಿದೆ. ಹರಿದಾಸ, ಜೈನ, ಆರೂಢ, ಅವಧೂತ, ನಾಥ, ಸಿದ್ಧ, ಸೂಫಿ ಪಂಥಗಳ ಹಾಗೂ ಗುರುಶಿಷ್ಯ ಸಂಪ್ರದಾಯಗಳ ಜೊತೆಗೆ ಅನೇಕ ರೀತಿಯ ಕೊಡುಕೊಳ್ಳುವಿಕೆ ನಡೆಸಿದ ಪರಿಣಾಮವಾಗಿ ಇಲ್ಲಿ ಸಾಂಸ್ತಿಕತೆಯ ಮೂಲಕವಾಗಿಯೆ

ರಚನೆಗೊಳ್ಳುತ್ತಿದ್ದ ತತ್ವಪದ ಪರಂಪರೆಯಲ್ಲಿ ವೈವಿಧ್ಯತೆಗಳು ಬೆಳೆದಿವೆ. ಸರ್ವಜನಮಾನ್ಯ, ಜೀವನಪರ ತುಡಿತ ಮಿಗಿಲಾಗಿದೆ. ಭಾಷಾ ಬಳಕೆಯಲ್ಲಿ ಶೈಥಿಲ್ಯ, ಭಾವಪ್ರಕಟಣೆಯಲ್ಲಿ ತೀವ್ರತೆ ಅಧಿಕಗೊಂಡು ಎಲ್ಲಾ ವರ್ಗಗಳ ಜನಮಾನಸರನ್ನು ಸೂರೆಗೊಂಡಿದೆ. ತತ್ವಗುಂಭತೆ ಸ್ವಲ್ಪ ಹಿಂದೆ ಸರಿದು ಐತಿಹಾಸಿಕ ವಿವರಗಳು, ರಾಜಕೀಯ ಪ್ರಜ್ಞೆ, ಸಾಮಾಜಿಕ ಚಿಂತನೆ, ಸ್ವತಂತ್ರಮನೋಭಾವ, ಜನಪರ ಕಾಳಜಿ ಹೆಚ್ಚಾಗಿ ಪ್ರಾದೇಶಿಕತೆ, ಜನಪದ ಜೀವನವಿಧಾನ, ಪೌರಾಣಿಕ ಕಥಾನಕಗಳ ಬಳಕೆ ತತ್ವಪದ ಪರಂಪರೆಯ ಕೊನೆ ಕೊನೆಯಲ್ಲಿ ವಿಸ್ತರಿಸಿಕೊಂಡಿತು. ಇವೆಲ್ಲವುಗಳ ಪರಿಣಾಮ ಸಂಗೀತದ ಮೇಲೆಯು ಆಯಿತು.

1. **ಹಮ್ ತೋ ದೇಖಾ ಮೊಹಮ್ಮದ ನೂರೆಗಂವರ್**
   ರಮ್ತೇ ಜಾಕರ್ ಆತಸೆ ತವಾಫ್‌ಕರ್

   ಚಾರ ಆನಾಸಿರ್ ಘರ್ ಪುಕಾರೆ
   ಮಾರದಿಯೆ ಮಾಯೇ ಕೆ ಅಸರ್ **(ಶಿಶುನಾಳ ಶರೀಫ್)**

2. **ಅವರವರ ಭಕ್ತಿಗೆ ಅವರವರ ಭಾವಕ್ಕೆ**
   ಅವರವರ ತೆರನಾಗಿ ಇರುತಿಹನು ಶಿವಯೋಗಿ **॥ಪ॥**

   ಇರದೊಂದು ಕನ್ನಡಿಯ ನೂರಾರು ಜನಪಿಡಿಯೇ
   ಸರಳಾಗಿ ಅವರವರ ರೂಪು ಕಾಣೂವಂತೆ
   ಹರಿಯ ಭಕ್ತರಿಗೆ ಹರಿಹರನ ಭಕ್ತರಿಗೆ ಹರ
   ನರರೇನು ಭಾವಿಸುವರದರಂತೆ ತೋರುವೆನು **॥1॥**

   (ಬಾಲಲೀಲಾ ಮಹಾಂತ ಶಿವಯೋಗಿಗಳು)

ಶಿವದಾಸರ ಮತ್ತು ಹರಿದಾಸರ ದೈವೀವ್ಯಕ್ತಿತ್ವ ಮತ್ತು ಅವರ ನಡೆನುಡಿ, ಅವರ ಸಾಹಿತ್ಯ ಕೃತಿಗಳ ಹಿನ್ನಲೆ ತತ್ವಪದಗಳಿಗೆ ಮೂಲ ಆಶಯಗಳಾದರೂ ಅನ್ಯಪಂಥಗಳ ಜೊತೆಗಿನ ಒಡನಾಟ, ಸಾಮರಸ್ಯ ಎದ್ದು ತೋರುವಂತೆ ಕಾಣುವಂತೆ ಕಾಣೂತ್ತದೆ. ನಮ್ಮಲ್ಲಿ ದೇವರು ಧರ್ಮ ಹಲವಾದರೂ ಮನಷ್ಯನು ಅರಿವಿನಲ್ಲಿ ಅವನ ಅಂತಃರಂಗವನ್ನು ವಿಕಸಿಸುವಂತಹ ಜ್ಞಾನ ಎಲ್ಲಾ ಮೂಲಗಳಿಂದಲೂ ಒಂದೇ ಆಗಿದೆ ಎಂಬ ಅರಿವಿನ ಸಾಮರಸ್ಯದಿಂದ ಚರಿತ್ರೆ ಬರೆದವರು ತತ್ವೊಪದಕಾರರು.

1. **ಅಳಬೇಡ ತಂಗಿ ಅಳಬೇಡ ನಿನ್ನ**
   ಕಳುಹ ಬಂದವರಿಲ್ಲಿ ಉಳುಹಿಕೊಂಬುವರಿಲ್ಲ **॥ಪ॥**

2. ಬಿದ್ದಿಯಬೇ ಮುದುಕಿ
ನೀ ದಿನ ಹೋದಾಕಿ ಬಲುಜೋಕಿ
ಬಿದ್ದಿಯಬೇ ಮುದುಕಿ ॥ಪ॥
ಸದ್ಯಕ್ಕಿದು ಹುಲಗೂರ ಸಂತಿ (ಶಿಶುನಾಳ ಶರೀಫ)
....।

ತತ್ವಪದಗಳ ಅದೆಷ್ಟೋ ಹಾಡುಗಳು ಘಟನಾ ಪ್ರಧಾನವಾಗಿಯೇ ಹುಟ್ಟು ಪಡೆದಿವೆ. ಆನಪದ ಶೈಲಿಯ ಈ ಹಾಡುಗಳು ಆತ್ಮೀಯ ವ್ಯಕ್ತಿಯ ನಿಧನ ಇಲ್ಲವೇ ಭೇಟಿ, ತಾತ್ವಿಕ ಸಂಘರ್ಷ ಇಲ್ಲವೆ ಸಂವಾದಗಳಲ್ಲಿ ತೊಡಗಿಕೊಂಡಾಗ ಅನಾಯಾಸವಾಗಿ ಸೃಜನಗೊಂಡಿವೆ. ಶೈಲಿಯಲ್ಲಿ ನಾವೀನ್ಯತೆ, ಪರಿಣಾಮದಲ್ಲಿ ಪ್ರಸಾಧಿಕತೆ, ವಿವಿಧ ರಾಗಗಳ ರಂಜಿಕತೆಯಿಂದಾಗಿ ಹಾಡುಗಳು ಕೇಳುಗರ ಹೃದಯ ಗೆಲ್ಲುತ್ತವೆ. ವಿಚಾರವನ್ನು ಮಂಥಿಸುವ ಅನುಭಾವಕ್ಕೆ ತೊಡಗುವ, ಸತ್ಸಂಗದ ಸಂದರ್ಭಗಳಲ್ಲಿ ದೃಶ್ಯ ಮತ್ತು ಶ್ರವಣ ಪಾತಾಳಿಗಳೆರಡರ ಮೂಲಕ ತತ್ವಪದಗಳು ಸಹೃದಯರ ಅಂತರಂಗಕ್ಕೆ ಪ್ರವೇಶಿಸುತ್ತವೆ.

1. ಕ್ವಾಡಗನ ಕೋಳಿ ನುಂಗಿತ ಕೇಳಕ್ಕಯ್ಯಾ
ಕ್ವಾಡಗನ ಕೋಳಿ ನುಂಗಿತ ॥ಪ॥
(ಕಡಗೋಳ ಮಡಿವಾಳಪ್ಪ)

2. ಕೋಡಗನ ಕೋಳಿ ನುಂಗಿತ್ತ ನೋಡವ್ವಾ ತಂಗಿ
ಕೋಡಗನ ಕೋಳಿ ನುಂಗಿತ್ತ ॥ಪ॥
(ಶಿಶುನಾಳ ಶರೀಫ್)

ಅಧ್ಯಾಯ–3

ಶರೀಫರ ಬದುಕಿನ ವಿವಿಧ ಘಟ್ಟಗಳು

ಜನನ ಬಾಲ್ಯ:– ಶರೀಫ ಸಾಹೇಬರು 19ನೇಯ ಶತಮಾನದಲ್ಲಿ ಆಗಿಹೋದ ಅನುಭಾವಿಗಳು. ಇವರು ಶಿಶುನಾಳ ಎಂಬ ಗ್ರಾಮದಲ್ಲಿ ಜನಿಸಿದರು. ಶಿಶುನಾಳವು ಧಾರವಾಡ ಜಿಲ್ಲೆಯ ಶಿಗ್ಗಾಂವಿ ತಾಲ್ಲೂಕಿನ ಒಂದು ಸಣ್ಣಗ್ರಾಮ. ಗುಡಗೇರಿ ರೇಲ್ವೆ ನಿಲ್ದಾಣದಿಂದ ಸುಮಾರು ನಾಲ್ಕು ಮೈಲು ಅಂತರದಲ್ಲಿದೆ. ಈ ಸಣ್ಣ ಗ್ರಾಮದ ಸಾತ್ವಿಕ ಮುಸ್ಲಿಂ ಕುಟುಂಬವೊಂದರಲ್ಲಿ ಶರೀಫರು ಕ್ರಿ.ಶ. 1819ನೇಯ ಮಾರ್ಚ್ 7 ರಂದು ಜನ್ಮ ತಾಳಿದರು. ಅವರ ಪೂರ್ಣ ಹೆಸರು ಮಹಮ್ಮದ್ ಶರೀಫ್ ಎಂದಿದೆ. ಆದರೆ ಅವರು ಶರೀಫ ಸಾಹೇಬರೆಂದೇ ಪ್ರಸಿದ್ಧರಾಗಿದ್ದಾರೆ.

ಇವರ ತಂದೆ ಹಚರತ 'ಇಮಾಮ ಸಾಹೇಬ' ತಾಯಿಯ ಹೆಸರು ಹಾಜುಮಾ. ವೃತ್ತಿಯಲ್ಲಿ ವ್ಯವಸಾಯಗಾರರಾದ ಹಜರತ್ ಇಮಾಮರು ಸಾತ್ವಿಕ ಜೀವಿಗಳು. ಅಲ್ಲಾನ ಆದರ್ಶ ಭಕ್ತರು. ಸಮಾಜ ಸೇವೆ, ಸಮಾಜ ಕಲ್ಯಾಣ ಅವರ ಜೀವನದ ಹೆಗ್ಗುರಿಯಾಗಿತ್ತು. ಹಜರತ ಇಮಾಮ ಸಾಹೇಬರಿಗೆ ಬಹುಕಾಲದವರೆಗೆ ಮಕ್ಕಳಾಗದಿರಲು ದಂಪತಿಗಳೀರ್ವರೂ ಹುಲಗೂರಿನ ಸಂತ ಖಾದರ್‌ಷಾ ವಲಿಯವರ ಸಮಾಧಿಗೆ ಅನನ್ಯ ಭಕ್ತಿಯಿಂದ ಮಕ್ಕಳ ಫಲವನ್ನಪೇಕ್ಷಿಸಿ ಪ್ರಾರ್ಥಿಸಿದರು. ಮುಂದೆ ಕೆಲ ವರ್ಷಗಳಲ್ಲಿಯೇ ಇವರ ಪ್ರಾರ್ಥನೆ ಖಾದರಷಾರಿಗೆ ತಲುಪಿತೋ ಎಂಬಂತೆ ಹಾಜುಮ್‌ಗೆ ಜನ್ಮವಿತ್ತಳು. ಅಪರೂಪಕ್ಕೆ ಜನಿಸಿದ ಮಗುವಿಗೆ ಮೊಹಮ್ಮದ್ ಶರೀಫ್ ಎಂದು ಹೆಸರಿಟ್ಟರು.

ಶರೀಫರ ಬಾಲ್ಯ ಶಿಶುನಾಳ ಗ್ರಾಮದಲ್ಲಿಯೇ ಕಳೆಯಿತು. ಪ್ರಾಥಮಿಕ ಶಿಕ್ಷಣದ ವಿದ್ಯಾಭ್ಯಾಸವೂ ಇಲ್ಲಿಯೇ ಆಯಿತು. ಮೊದಲು ಅವರು ಕನ್ನಡ ಕೂಲಿಮಠದಲ್ಲಿ ಓದಿದರು. ಶರೀಫರ ವಿದ್ಯಾಭ್ಯಾಸವು ಕನ್ನಡ ಮುಲ್ಕಿಯವರೆಗೆ ಮಾತ್ರ ಆಯಿತು. ಆದರೂ ಉರ್ದು ಹಾಗೂ ಮೋಡಿಗಳನ್ನು ಸ್ವಪ್ರಯತ್ನದಿಂದ ಕಲಿತರು.

ಬಾಲ್ಯದಲ್ಲಿಯೇ ಇವರಿಗೆ ರಾಮಾಯಣ, ಮಹಾಭಾರತಗಳೆಂದರೆ ತುಂಬಾ ಪ್ರೀತಿ ಜೊತೆಗೆ ಅಭಿನಯದಲ್ಲಿಯೂ ತುಂಬಾ ಆಸಕ್ತಿಯಿದ್ದುದರಿಂದ ರಾಮಾಯಣ, ಮಹಾಭಾರತ, ಅಲ್ಲಮಪ್ರಭು, ಬಯಲಾಟಗಳಲ್ಲಿ ಪಾತ್ರವಹಿಸಿ ಪ್ರೇಕ್ಷಕರ ಕಣ್ಮನಗಳನ್ನು ತಣಿಸುತ್ತಿದ್ದರು. ಅಲ್ಲದೆ ಜಾತ್ರೆ, ಉತ್ಸವ

ಮೊದಲಾವುಗಲಲ್ಲಿ ಅನುಭಾವ ಕವಿಗಳಾದ ಸರ್ವಜ್ಞ, ನಿಜಗುಣ ಶಿವಯೋಗಿ, ಸರ್ಪಭೂಷಣ ಶಿವಯೋಗಿ ಮೊದಲಾದವರ ಕಾವ್ಯವಾಚನ ಮಾಡುತ್ತಿದ್ದರು. ಜನ್ಮ ಮುಸ್ಲಿಂ ಕುಟುಂಬದಲ್ಲಾದರೂ ಹಿಂದೂ ಪರಂಪರೆಯೊಂದಿಗೆ ಶರೀಫರ ಬಾಲ್ಯ ಬೆರೆತು ಹೋಗಿತ್ತು. ಮತ್ತೊಂದೆಡೆ ಇಸ್ಲಾಂ ಹಬ್ಬಗಳಾದ ಮೊಹರಂ, ಅಲಾವಿ, ಕರ್ಬಲಾ ಮೇಳದಲ್ಲಿ ಭಾಗವಹಿಸುತ್ತಿದ್ದರು. ಹೀಗೆ ಭಕ್ತಿ ಜ್ಞಾನ, ದಾಸೋಹ ಮೊದಲಾದ ಚಟುವಟಿಕೆಗಳಲ್ಲಿ ಇವರು ಮುಂದಾಳಾಗಿದ್ದರು.

ಆಘಾತ-ಅಪೂರ್ವ ಬದಲಾವಣೆ

ಶರೀಫರು ಪ್ರಾಯದವರಾಗಲು ಶಿಶುನಾಳ ಗ್ರಾಮದ ನೆರೆಯ ಹಳ್ಳಿ ಕಾರಡಗಿಯಲ್ಲಿ ಕನ್ನಡ ಉಪಾಧ್ಯಾಯರಾಗಿ ಕೆಲವು ದಿನ ಕೆಲಸ ಮಾಡಿದರು. ಆದರೆ ಆ ವೃತ್ತಿಯಲ್ಲಿಯೇ ಬಹುದಿನ ಉಳಿಯಲಿಲ್ಲ. ಉಪಾಧ್ಯಾಯರಾಗಿ ಇದ್ದಾಗಲೇ ಅವರ ವಿವಾಹವು ಕುಂದಗೋಳದ ಫಕೀರ ಸಾಹೇಬರ ಜ್ಯೇಷ್ಠಪುತ್ರಿ ಫಾತಿಮಾರೊಂದಿಗೆ ಆಯಿತು. ಕೆಲ ಕಾಲಾನಂತರ ಅವರಿಗೆ ಹುಟ್ಟಿದ ಏಕೈಕ ಪುತ್ರಿಯು ಕಾಲರಾ ರೋಗಕ್ಕೆ ಬಲಿಯಾದಳು. ಶರೀಫರ ನಡು ಹರೆಯದಲ್ಲಿಯೇ ಮಡದಿಯೂ ತೀರಿ ಹೋದಳು. ಆ ಮಗಳ ಮತ್ತು ಹೆಂಡತಿಯ ಮರಣಗಳಿಂದ ಶರೀಫರಿಗೆ ಸಹಿಸಲಾರದ ಆಘಾತವಾಯಿತು.

ಆದರೂ ಧೃಡಿಗೆಡದೆ ದೈವಭಕ್ತರಾದ ಶರೀಫರು ತಮಗಾದ ದುಃಖವನ್ನು ಸಾಧು-ಸತ್ಪುರುಷರ ಸಹವಾಸದಿಂದ ಕಡಿಮೆ ಮಾಡಿಕೊಳ್ಳತೊಡಗಿದರು. ತಮ್ಮ ಮನೆಯ ಮಗ್ಗುಲಲ್ಲೆ ಒಂದು ಕಟ್ಟೆಯ ಮೇಲೆ ಆಧ್ಯಾತ್ಮ-ಸುಬೋಧ-ಧರ್ಮ-ನೀತಿ ಮಾತುಗಳನ್ನು ಬೋಧಿಸುವ ಹವ್ಯಾಸದಿಂದ ದುಃಖವನ್ನು ದೂರಗೊಳಿಸಿದರು. ಈಗಲೂ ಈ ಬೋಧಪೀಠವು ಇದೆ ಇದನ್ನು ಜನರು ಪೂಜಿಸುವುದೂ ಉಂಟು.

ಸಾಧುಪುರುಷರ ಕೃಪೆಯನ್ನು ಪಡೆಯಲು ಮಠಮಾನ್ಯಗಳಿಗೆ ಹೋಗುತ್ತಿದ್ದರು. ವ್ರತ-ಮೌನ-ಪೂಜೆ ಅನುಷ್ಠಾನಗಳಲ್ಲಿ ಯಾಗ-ಯಜ್ಞ ಪ್ರಾರ್ಥನೆ, ಭಜನೆಗಳಲ್ಲಿ ವೇಳೆ ಕಳೆಯುತ್ತಿದ್ದರು. ಒಟ್ಟಿನಲ್ಲಿ ದೇವರ ಧ್ಯಾನ ಹಾಗೂ ಉಪಾಸನೆಗಳಲ್ಲಿ ತಮ್ಮ ಹೃದಯಕ್ಕಾದ ಪೆಟ್ಟನ್ನು ಮರೆಯಲು ಹವಣಿಸುತ್ತಿದ್ದರು.

ಗುರುಕೃಪೆ

ಹಿಂದೂ ಧರ್ಮದಲ್ಲಿ ಮಠಾಧಿಪತಿಗಳಿಗೆ, ಗುರುಗಳಿಗೆ ದೊಡ್ಡ ಸ್ಥಾನವಿದೆ. ಗುರುಗಳಲ್ಲಿ ಭಕ್ತಿ-ಭಾವವನ್ನು ತೋರಿ ನಡೆಯುವವರನ್ನು ಗುರುಪಂಥದವರೆಂದು ಕರೆಯುತ್ತಾರೆ. ಕರ್ನಾಟಕದಲ್ಲಿ ಗುರುಗಳಿಗೆ ಅಗ್ರಸ್ಥಾನವಿದೆ. ಆದ್ದರಿಂದಲೇ ಹರಿದಾಸರು "ಗುರುವಿನ ಗುಲಾಮನಾಗುವ ತನಕ, ದೊರೆಯದಣ್ಣ ಮುಕುತಿ" ಎಂದಿದ್ದಾರೆ. "ಶಿವಶರಣರು ಹರಪಥವರಿವೊಡೆ ಗುರುಪಥವೇ ಮೊದಲು" ಎಂದಿದ್ದಾರೆ. "ಹರ ಮುನಿದರೆ ಗುರು ಕಾಯ್ವ" ಎಂದು ಅಭಯ ರಕ್ಷೆಯನ್ನು ಹಿಂದೂಧರ್ಮದಲ್ಲಿ ಒತ್ತಿ ಹೇಳಲಾಗಿದೆ.

ಗೋವಿಂದ ಭಟ್ಟರು ಕಳಸ ಗ್ರಾಮದವರು. ಬ್ರಾಹ್ಮಣ ಕುಲಜರು. ಅಲ್ಲದೇ ಜ್ಞಾನಿಗಳು, ವಿದ್ಯಾವಂತರು ಎಂದು ಖ್ಯಾತಿವೆತ್ತವರು. ಎತ್ತರದ ನಿಲುವು, ಕೆಂಪುವರ್ಣ, ಬರಿ ಮೈಯ, ಚರಮಮೂರ್ತಿಯಾದ ಗೋವಿಂದ ಭಟ್ಟರು ನಗುಮೊಗದ ಪ್ರಸಾದವಾಣಿಯ ದಿವ್ಯ ವ್ಯಕ್ತಿಗಳಾಗಿದ್ದರು. ಕೈಯಲ್ಲಿ ತಾಮ್ರದ ತಂಬಿಗೆ, ಹೆಗಲ ಮೇಲೆ ಪಂಚೆ ನಡುವಿನಲ್ಲಿ ಲಂಗೋಟೆ ಇವು ಅವರ ವೇಷಭೂಷಣಗಳಾಗಿದ್ದವು. ಗುರು ಗೋವಿಂದಭಟ್ಟರು ಪ್ರಾಪಂಚಿಕರು, ಸೌ॥ ಉಮಾಬಾಯಿ ಇವರ ಹೆಂಡತಿ, ಗುರು ಗೋವಿಂದರು ಶಕ್ತಿಯ ಉಪಾಸಕರಾಗಿದ್ದರು.

ಪವಾಡ ಪುರುಷರೆಂದು, ಗುರುಗಳ ಖ್ಯಾತಿ ಉದಾರ ಹೃದಯಿಗಳಾದ ಗೋವಿಂದ ಭಟ್ಟರು ಮಾನವ ಕುಲ ಒಂದೇ ಎಂಬ ಭಾವನೆಯುಳ್ಳವರಾಗಿದ್ದರು. ಜಾತಿಮತಗಳ ಬೇಧವೆಂದರೆ ಇವರಿಗಾಗದು. ಸ್ವಜಾತೀಯನಲ್ಲದ ತಮ್ಮ ಮುಸಲ್ಮಾನ ಶಿಷ್ಯನಿಗೆ ಅವರು ಮುಕ್ತ ಹೃದಯದಿಂದ ವಿದ್ಯಾ ದಾನ ಮಾಡಿದರು. ಗುರು-ಶಿಷ್ಯರಿಗೂ ಒಂದೇ ತಟ್ಟೆಯಲ್ಲಿ ಊಟ ಮಾಡುತ್ತಿದ್ದರೆಂಬ ಮೇಲೆ ಅವರಲ್ಲಿರುವ ಅನ್ಯೋನ್ಯತೆಯನ್ನು ಊಹಿಸಬಹುದು. ಆದುದರಿಂದಲೇ ಶರೀಫರು

ಶಿಶುನಾಳಧೀಶ ಪ್ರಕಾಶ ಗೋವಿಂದನ
ಅಸಮ ತೇಜೋರೂಪ ಕಿರಣದೊಳಗೆ ಬಂದು
"ದೊರಕಿದಾ ಗುರು ದೊರಕಿದಾ" ಎಂದೂ
ಸದ್ಗುರು ನಿನ್ನ ಮಾಯಕ್ಕೆ ಮರುಳಾದೆ
ಗುರುಗೋವಿಂದ ನೀ ಪರಮ ಗಾರುಡಿಗ

ಎಂದೂ ಭಕ್ತಿಯಿಂದ ಹಾಡಿದ್ದಾರೆ. ಜ್ಞಾನಪಿಪಾಸೆಯಿಂದ ಚಟಪಡಿಸುತ್ತಿದ್ದ ಜೀವಕ್ಕೆ ಈಗ ಗುರುಕೃಪೆಯಿಂದ ತೃಪ್ತಿಯಾಯಿತು. ಇದರಂತೆ ಅನೇಕ ಪದಗಳಲ್ಲಿ ಶರೀಫರು ಗುರು ಮಹಿಮೆಯನ್ನು ಸಾರಿದ್ದಾರೆ.

ಗುರು-ಶಿಷ್ಯರು ವಿಶೇಷವಾಗಿ ಕೂಡಿಕೊಂಡೇ ಇರುತ್ತಿದ್ದರು. ಗುಡಗೇರಿಯ ಕುಂಬಾರ ಮುದುಕಪ್ಪನ ಮನೆಗೆ ವಿಶೇಷವಾಗಿ ಬರುವುದು. ಅಲ್ಲಿಯೇ ಇರುವುದು, ಊಟ-ಉಪಚಾರಗಳನ್ನು ತೀರಿಸಕೊಳ್ಳುವ ರೂಢಿಯನ್ನಿಟ್ಟುಕೊಂಡಿದ್ದರು. ಶರೀಫರ ಅನುಭಾವ ಪದಗಳನ್ನು ಕುಂಬಾರ ಮುದುಕಪ್ಪನೇ ಬರೆದುಕೊಳ್ಳುತ್ತಿದ್ದನು. ಶರೀಫರು ಆನಂದಲಹರಿಯಲ್ಲಿ ನಾದಬ್ರಹ್ಮನೊಂದಿಗೆ ಒಂದಾಗಿ ಮೈಮರೆತು ಹಾಡುತ್ತಿರುವಾಗ ಆ ಹಾಡುಗಳನ್ನು ಮುದುಕಪ್ಪನು ಬರೆದುಕೊಳ್ಳುತ್ತಿದ್ದರು.

ಕುಂಬಾರ ಮುದುಕಪ್ಪನಿಗೆ ಓರ್ವ ಮಗಳಿದ್ದಳು. ಆಕೆಯ ಹೆಸರು ಬಸಮ್ಮ. ಮುದ್ದು ಬಾಲಿಕೆಯಾದ ಇವಳು ಶರೀಫರಿಗೆ ಆಟದ ಗೊಂಬೆ ಆಗಿದ್ದಳು. ಅಲ್ಲದೇ ಲುಟು, ಲುಟು ಓಡಾಡುತ್ತ ಶರೀಫರ ಹಾಗೂ ಗುರುಗಳ ಆತಿಥ್ಯ ಮಾಡುತ್ತಿದ್ದಳು. ಶರೀಫರಿಗೆ ದಿವ್ಯಸ್ಫೂರ್ತಿ ಬಂದಾಗ ಬಸಮ್ಮನನ್ನು ಕರೆದು, "ಏ ಗುಂಡೀ ಬಾ ಇಲ್ಲಿ ಕೇಳು, ಇದನ್ನು ಹಾಡಿ ತೋರಿಸು" ಎಂದು ಹೇಳುತ್ತಿದ್ದರು. ಅನಕ್ಷರಸ್ಥೆಯಾದ ಇವಳು ಶರೀಫರ ನೂರಾರು ಹಾಡುಗಳನ್ನು ಚಾಚೂ ತಪ್ಪದೇ ಮೊನ್ನಿನವರೆಗೂ ಹೇಳುತ್ತಿದ್ದಳು. ಶರೀಫರ ದಿವ್ಯ ವ್ಯಕ್ತಿತ್ವವನ್ನು ಅವಳು ಚಿತ್ರವತ್ತಾಗಿ ಹೇಳುತ್ತಿದ್ದಳು.

ಶರೀಫರ ವ್ಯಕ್ತಿತ್ವ

ಗುಡಗೇರಿ ಹಾಗೂ ಶಿಶುನಾಳ ಗ್ರಾಮಗಳಲ್ಲಿ ಶರೀಫ ಸಾಹೇಬರನ್ನು ನೋಡಿದವರು ಇನ್ನೂ ಅನೇಕ ಜನ ಸಿಕ್ಕುತ್ತಾರೆ. ಶರೀಫರು ಸುಂದರ ಪ್ರತಿಮೆಯಂತೆ ದೇಹ ರಚನೆಯುಳ್ಳವರಿದ್ದರು. ತಾಮ್ರಗೆಂಪಿನ ವರ್ಣ, ದುಂಡನೆಯ ಮುಖ, ನೀಳವಾದ ತಕ್ಕ ಮೂಗು, ಅಗಲವಾದ ಕಿವಿ, ಹರವಾದ ಕಣ್ಣುಗಳು, ವಿಶಾಲವಾದ ಹಣೆಯಿಂದ ಕೂಡಿದ ಇವರು ಆಕರ್ಷಕ ವ್ಯಕ್ತಿಗಳಾಗಿದ್ದರು. ಪಾದ ಮುಚ್ಚುವಂತೆ ನಿರಿಗೆ ಹೊಯ್ದು ದಡೀ ಧೋತರವನ್ನುಡುತ್ತಿದ್ದರು. ತಲೆಯ ಮೇಲೆ ದುಂಡು ದುಂಡಾಕಾರದ ಮುಂಡಾಸದಂತೆ ರುಮಾಲನ್ನು ಸುತ್ತುತ್ತಿದ್ದರು. ಕೊರಳಿಗೆ ಚಕ್ರಾಕಾರವಾಗಿ ಉಪ್ಪರಣೆ ಹೊರುತ್ತಿದ್ದರು. ಅವರ ಉಡುಗೆ-ತೊಡುಗೆಗಳು ಒಳ್ಳೇ ಅಚ್ಚುಕಟ್ಟಾಗಿಯೂ, ಓರಣವಾಗಿಯೂ ಇರುತ್ತಿದ್ದವು. ಇಸ್ಲಾಂ ಪದ್ಧತಿಯಂತೆ ಗಡ್ಡವನ್ನು ಬಿಡುತ್ತಿರಲಿಲ್ಲ. ಕಾಲಲ್ಲಿ ಮೂಚ್ಚೆ ಜೋಡು ಧರಿಸುತ್ತಿದ್ದರು. ಶರೀಫರು ಜಾತಿಯಿಂದ ಮುಸಲ್ಮಾನರಾಗಿದ್ದರೂ, ಮಾಂಸಾಹಾರಿಗಳಾಗಿರದೇ ಸಾತ್ವಿಕ

ಆಹಾರವನ್ನಷ್ಟೇ ಸೇವಿಸುತ್ತಿದ್ದರು. ಮಾದಕ ಪೇಯ ಹಾಗೂ ಭಂಗಿ ತಂಬಾಕುಗಳನ್ನು ಮಾತ್ರ ಸೇವಿಸುತ್ತಿದ್ದರು.

ಈ ಸೇವನೆಗಾಗಿ ಇವರಿಗೂ ಇವರ ಗುರುಗಳಾದ ಗೋವಿಂದಭಟ್ಟರೂ ಅಂದಿನ ಸಮಾಜವು ಬಹಿಷ್ಕಾರ ಹಾಕಿತ್ತು. ಅಲ್ಲದೇ ಕೆಲವು ಅಪವಾದಗಳನ್ನು ಹೊರಿಸಿ ಊರ ಹೊರಗಿಟ್ಟಿದ್ದರು. ಪಶ್ಚಾತ್ತಾಪಗಳಾಗಿ ಶರಣಾಗತರಾದವರ ಉದಾಹರಣೆಗಳಿಗೇನೂ ಕಡಿಮೆಯಿರಲಿಲ್ಲ. ಸಾಮಾನ್ಯವಾಗಿ ಹಾಳು ದೇವಾಲಯ ಮತ್ತು ಸಾರ್ವಜನಿಕ ಗುಡಿಗುಂಡಾರಗಳೇ ಶರೀಫರ ವಸತಿ ಸ್ಥಾನಗಳಾಗಿದ್ದವು.

ತೂರ್ಯಾವಸ್ಥೆಯಲ್ಲಿ ಶರೀಫರು ಶರೀರದ ಮೇಲಿನ ಸ್ಮೃತಿ-ಪ್ರಜ್ಞೆಗಳನ್ನು ಕಳೆದುಕೊಂಡು ದೇವೋನ್ಮಾದದಲ್ಲಿ ಲೀನವಾಗುತ್ತಿದ್ದರು. ನಿಷ್ಠೂರ ಸ್ವಭಾವದವರಾಗಿದ್ದರಿಂದ ಯಾರ ದಯಾ-ದಾಕ್ಷಿಣ್ಯಗಳಿಗೂ ಒಳಗಾಗುತ್ತಿರಲಿಲ್ಲ. ಸಮಾಜದ ತಪ್ಪು ನಡೆಗಳನ್ನು ತೀಕ್ಷ್ಣವಾಗಿ ತಿದ್ದಿ ಮಾನವ ಕುಲದ ಹಿತವನ್ನು ಬಯಸುತ್ತಿದ್ದರು. ಆದುದರಿಂದ ಶರೀಫರು ಸ್ಪಟಿಕದಂತಹ ಸ್ವಭಾವದವರಾಗಿದ್ದರು. ಪ್ರಪಂಚದ ಲೌಕಿಕ ವ್ಯವಹಾರದಲ್ಲಿ ಪಾರದರ್ಶಕರಾಗಿದ್ದರು. ಒಮ್ಮೊಮ್ಮೆ ಉಪವಾಸವಿರುವ ಪ್ರಸಂಗ ಬಂದರೂ, ಬೇಡಿ ತಿಂದರೆ ಋಣಭಾರದಲ್ಲಿ ಸಿಲುಕಬೇಕಾಗುವುದಲ್ಲಾ ಎಂದು ಉಪವಾಸವಿರುತ್ತಿದ್ದರು. ಮನೆಯಲ್ಲಿ ಹೆಂಡತಿ ಬಾಣಂತಿಯಾಗಿ ಉಪವಾಸವಿದ್ದರೂ ಯಾರಲ್ಲಿಯೂ ಇವರು ಯಾಚಿಸಿರಲಿಲ್ಲ. ಯಾರಾದರೂ ಪ್ರೀತಿಯಿಂದ ಕರೆದಾಗ ನೀಡಿದ್ದೇ ಪ್ರಸಾದವೆಂದು ಸ್ವೀಕರಿಸುತ್ತಿದ್ದರು. ಗುಡಗೇರಿ ಕುಲಕರ್ಣಿಯವರು ಶರೀಫರ ಮೇಲಿನ ವಿಶೇಷ ಪೂಜ್ಯ ಭಾವನೆಯಿಂದ ಇವರಿಗೆ ದವಸಧಾನ್ಯಗಳನ್ನು ಕೊಟ್ಟು ಕಳಿಸುತ್ತಿದ್ದರು.

ಶರೀಫರು ಶಿಶುನಾಳದಿಂದ ಕಳಸಕ್ಕೆ ಬಂದರೆ ಶ್ರೀ ಅಂಖಡೇಶ್ವರ ಮಠ ಪುಣ್ಯಕ್ಷೇತ್ರವೆಂದು ತಿಳಿದು ತಮ್ಮ ಕಾಲಿನ ಜೋಡು (ಚಪ್ಪಲಿ)ಯನ್ನು ಕೈಯಲ್ಲಿ ಹಿಡಿದುಕೊಂಡು ಕಳಸ ಗ್ರಾಮವನ್ನು ಪ್ರವೇಶಿಸುತ್ತಿದ್ದರೆಂದು ನನ್ನ ಅಜ್ಜ (ತಾತ) ದಿವಂಗತ ಶ್ರೀ ಬಸವಂತಪ್ಪ ತಿ. ಹೊಸಮನಿ ನನಗೆ ಎಷ್ಟೋ ಬಾರಿ ಹೇಳಿದ್ದಾರೆ.

ನಾನು ಸಹ ನನ್ನ ತಾತನ ಜೊತೆ 9 ಮೈಲು ನಡೆದುಕೊಂಡು ಪ್ರತಿ ಅಮವಾಸ್ಯೆಯ ದಿನ ಶಿಶುನಾಳಕ್ಕೆ ಹೋಗಿ, ಮುತ್ತಮ ಸಕ್ಕರೆಯನ್ನು ಅಗರಬತ್ತಿಯನ್ನು ಬಾಳೆ ಹಣ್ಣನ್ನು ಶರೀಫರ ಗದ್ದುಗೆಯಲ್ಲಿ ಓದಿಕೆಯನ್ನು ಅವರ ಮೊಮ್ಮಕ್ಕಳಾದವರು ಓದಿಸಿ ಕೊಡುತ್ತಿದ್ದರು. ನವಿಲು ಗರಿಯನ್ನು ತಲೆಗೆ ತಾಕಿಸುತ್ತಿದ್ದರು. ಒಂದು ಕಡೆ ಹಿಂದೂ ಧರ್ಮದ ಪ್ರಕಾರ ಪೂಜೆ, ಪುನಸ್ಕಾರವು

ಪಕ್ಕದಲ್ಲಿಯೇ ನಡೆಯುತ್ತದೆ. ಪೂಜೆಯ ನಂತರ "ಶರೀಫ ನಾನಾಕಿ ದೋಸ್ತಗಾರ್ ಹೈದೀನ್" ಎಂಬ ವಾಣಿಯಿಂದ ಕೂಗುತ್ತಾರೆ. ಇಂದಿಗೂ (ಜೈಗೋಶ) ನಡೆಯುತ್ತಿದೆ. ನಾನು ಸುರೇಶ ಎಸ್. ಹೊಸಮನಿ, ಎಂ.ಫಿಲ್, ವಿದ್ಯಾರ್ಥಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ ನನ್ನ ಸ್ವಗ್ರಾಮ ಕಳಸದ ಗುರುಗೋವಿಂದ ಭಟ್ಟರ ಜನ್ಮಸ್ಥಳ ಶ್ರೀಗುರು ಗೋವಿಂದ ಭಟ್ಟರ ಗುಡಿಯು ನಮ್ಮ ಹಳೆಯ ಮನೆಯ ಹಿಂದೆ ಇದೆ. ನಾನು "ಪ್ರೌಢಶಾಲೆಯು ನ್ಯೂ ಹೈಸ್ಕೂಲ ಕಳಸ." ದೇವಸ್ಥಾನದ ಆವರಣದಲ್ಲಿಯೇ ಇತ್ತು (1985) 8ನೇ ತರಗತಿಯನ್ನು ಓದುತ್ತಿದ್ದೇ.

ಶ್ರೀಗೋವಿಂದ ಭಟ್ಟರ ವಂಶಸ್ಥರಾದ ಶ್ರೀಶ್ಯಾಮ ಭಟ್ಟ ಜೋಶಿ, ಶ್ರೀಗೋವಿಂದ ಭಟ್ಟರ ಮೊಮ್ಮಗರಾಗಿದ್ದರಂತೆ. ಇವರನ್ನು ನಾನು ಸಹ ನೋಡಿದ್ದೇನೆ. ಶ್ಯಾಮಭಟ್ಟರು ಜ್ಯೋತಿಷ್ಯವನ್ನು ಹೇಳುತ್ತಿದ್ದರು. ಇವರನ್ನು ಸಹ ನಮ್ಮ ಊರಿನ ಜನ ಅಪಾರಭಕ್ತಿಯಿಂದ ಕಾಲಿಗೆ ಬಿದ್ದು ನಮಸ್ಕರಿಸುತ್ತಿದ್ದೆವು. ನನ್ನ ಗ್ರಾಮದಲ್ಲಿ ಹಿಂದೂ-ಮುಸಲ್ಮಾನರು ಇದ್ದಾರೆ. ಜನಸಂಖ್ಯೆ ಹದಿನಾಲ್ಕು ಸಾವಿರ.

70.30. ಮುಸಲ್ಮಾನರು ಇದ್ದಾರೆ. ಹಿಂದೂ-ಮುಸಲ್ಮಾನರು ಒಟ್ಟಿಗೆ ಸೇರಿ ಮೊಹರಂ ಹಬ್ಬವನ್ನು, ಅಲಾವಿ ಕುಣಿತವನ್ನು ಈಗಲೂ ಜೊತೆಗೂಡಿ ಕುಣಿಯುತ್ತಾರೆ. ನಾನು ಮೌಲಾಲಿ ದೇವರನ್ನು ಹಿಡಿದುಕೊಂಡು ಬೆಲ್ಲವನ್ನು (ಮುತ್ತುಮ ಸಕ್ಕರಿ) ಒಣಗೊಬ್ಬರಿಯನ್ನು ತಿಂದಿದ್ದೇನೆ. ಮೈಮೇಲೆ ದೇವರು ಬಂದ ಹಾಗೆ ಮಾಡಿ, ಭವಿಷ್ಯವನ್ನು ಹೇಳುತ್ತಾರೆ. ಮೊಹರಂ ಹಬ್ಬದ ವಿಶೇಷ ಅಡುಗೆ ಗೋಡೆ ಚೊಂಗೆಯನ್ನು ಮಾಡುತ್ತಾರೆ. ಆಗ ಹಿಂದೂಗಳು ಈ ಅಡುಗೆಯನ್ನು ಮಾಡಿ ಎಡೆಯನ್ನು ಕೊಡುವ ಸಂಪ್ರದಾಯವಿದೆ. ಓದಿಕೆಯನ್ನು ಮಾಡಿಸಿ ಕೆಂಪುಬಣ್ಣದ ಲಾಡಿಯನ್ನು ಕೈಗೆ ಹಾಕುತ್ತಾರೆ. ಮೊಹರಂ ಕೊನೆ ದಿನ ಕೆಂಡವನ್ನು ಹಾಯುವುದು, ಹಿಂದೂಗಳು ಕೆಂಡವನ್ನು ಹಾಯಿದು ತಮ್ಮ ಈ ಇಷ್ಟಾರ್ಥವನ್ನು ಪೂರೈಸಿಕೊಳ್ಳುತ್ತಾರೆ.

ಕೆಂಪು ಲಾಡಿಯನ್ನು ಕೆಂಡದೊಳಗೆ ಹಾಕುತ್ತೇವೆ. ಬೆಳಿಗ್ಗೆ 5 ಘಂಟೆಗೆ ಹೊಳಗೆ ಹೋಗುತ್ತಾರೆ. 'ಭೀಪಾತಾಮಾ' ಮೌಲಾಲಿ ದೇವರು.

ಕಳಸದಲ್ಲಿ ಶ್ರೀಗುರು ಗೋವಿಂದ ಭಟ್ಟರ ಕಿರಿಯ ಮೊಮ್ಮಕ್ಕಳಾದ ಶ್ರೀಪಾದ ಜೋಷಿ, ಗುರುಭಟ್ಟ ಜೋಶಿ, ಹನುಮಂತ ಜೋಶಿ. ಬೆಂಗಳೂರು ದೂರದರ್ಶನ ನಿವೃತ್ತ ನಿರ್ದೇಶಕರಾದ ಶ್ರೀ ಮಹೇಶ ಜೋಶಿಯವರು. 200 ವರ್ಷಗಳ ದ್ವಿಶತಮಾನೋತ್ಸವವನ್ನು ಚಂದನ ಟಿ.ವಿ. ಮುಖಾಂತರ

“ತತ್ವಪದಗಳ ರಸಾಯನ” ಎಂಬ ಕಾರ್ಯಕ್ರಮವನ್ನು ಕರ್ನಾಟಕದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಮಾಡಿಸಿ ಯಶಸ್ವಿಯಾಗಿದ್ದಾರೆ. ಮಹೇಶ ಜೋಶಿಯವರು ಮತ್ತು ಡಾ॥ ಮನು ಬಳಿಗಾರ, ಕನ್ನಡ ಸಾಹಿತ್ಯ ಪರಿಷತ್ತು, ಅಧ್ಯಕ್ಷರು ಸಹ. ನಮ್ಮ ಪಕ್ಕದ ಹಳ್ಳಿ ಶಿಗ್ಲಿಯವರು. ತಾ॥ ಶಿರಹಟ್ಟಿ, ಜಿ॥ ಗದಗ. ಇವರು ಸಹ **“ಬೋದವೊಂದೆ ಬ್ರಹ್ಮನಾದವೊಂದೆ”** ಎಂಬ ನೂರೊಂದು ತತ್ವಪದ ಸಂಗ್ರಹವನ್ನು ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಮುದ್ರಣವನ್ನು ಮಾಡಿಸಿದ್ದಾರೆ. 2001 ರಲ್ಲಿ (ಮುದ್ರಣ ವರ್ಷ) ಪ್ರತಿಗಳು 1000.

ಪ್ರಾರಬ್ಧ ಕರ್ಮದ ಮೇಲೆ ಶರೀಫರಿಗೆ ವಿಶ್ವಾಸ ಬಹಳವಿತ್ತು. ಗುಡಗೇರಿ ಕುಲಕರ್ಣಿಯವರ ಮನೆಯಲ್ಲಿಯೂ, ಕುಂದಗೋಳದ ನಾಡಗೇರ ಗೌಡಸಾನಿಯಲ್ಲಿಯೂ ಬಿಚ್ಚು ಮನಸ್ಸಿನಿಂದ ಸಲುಗೆಯಿಂದ ಊಟ-ವಸತಿ ಮಾಡುತ್ತಿದ್ದರೆಂದು ತಿಳಿದು ಬರುತ್ತದೆ. ಸಾಲದ ಭಾರ ಹೆಚ್ಚಾಗಲು ಶರೀಫರು ಶಿಶುನಾಳ ಗ್ರಾಮದಲ್ಲಿದ್ದ ಮನೆ ಹೊಲಗಳನ್ನು ಕ್ರಿ.ಶ. 1888 ರಲ್ಲಿ ಮಾರಾಟ ಮಾಡಿದ ಉಲ್ಲೇಖಗಳಿವೆ. ಸುತ್ತಲಿನ ಗ್ರಾಮಗಳಿಗೆ ಹೋಗಿ ಅಲ್ಲಿಯ ಜನರ ತಿಳುವಳಿಕೆಯ ಮಟ್ಟದಲ್ಲಿ ಬೆರೆತು ಉಪದೇಶ ಮಾಡುತ್ತಿದ್ದರು.

ಶರೀಫರು ಸಂದರ್ಶಿಸಿದ ಕ್ಷೇತ್ರಗಳು

ಶರೀಫರು ಪಾವನ ಕ್ಷೇತ್ರಗಳು, ಮಠ ಮಂದಿರ, ಮಸೀದಿ, ಗದ್ದುಗೆಗಳನ್ನು ಸಂದರ್ಶಿಸಿದ್ದಾರೆ. ಅಲ್ಲಿ ನಡೆಯುವ ಉತ್ಸವ, ಜಾತ್ರೆ, ತೇರು ಮೊದಲಾದ ಸಮಾರಂಭಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಾರೆ. ಉಳವಿ, ಎಲ್ಲಮ್ಮನ ಗುಡ್ಡ, ಮುಕ್ತಿ ಮಂದಿರ, ಹುಲಗೂರು, ಹುಬ್ಬಳ್ಳಿ ಮಠಗಳು ಮೊದಲಾದ ಕ್ಷೇತ್ರಗಳಿಗೆ ಹೋಗಿದ್ದಾರೆ. ನೂಲ್ವಿಯ ಗುರುಗೋವಿಂದ ಗುರುಗಳ ಸಮಾಧಿಗೂ , ಗುರ್ಲ ಹೊಸೂರ, ಮುರಗೋಡ ಯಾಗಗಳಿಗೂ ನಿಯತವಾಗಿ ಹೋಗುತ್ತಿದ್ದರು. ಹೀಗೆ ಶರೀಫರು ಉತ್ತರ ಕರ್ನಾಟಕದ ಕ್ಷೇತ್ರಗಳನೇಕಕ್ಕೆ ಭೇಟಿಯಿತ್ತಿದ್ದಾರೆ. ಈ ಎಲ್ಲ ಕ್ಷೇತ್ರಗಳ ಮಹಿಮೆಯನ್ನು ತಮ್ಮ ಹಾಡುಗಳಲ್ಲಿ ಸೆರೆ ಹಿಡಿದಿದ್ದಾರೆ.

ಶರೀಫರ ಸಮಕಾಲೀನರು

ಗುರ್ಲ ಹೊಸರೂರಿನ ಶ್ರೀ ಚಿದಂಬರ ದೀಕ್ಷಿತರು, ಶ್ರೀ ಬಾಲಲೀಲಾ ಮಹಾಂತ ಶಿವಯೋಗಿಗಳು, ಗುಡಗೇರಿ, ಕಲ್ಮಠದ ಸಂಗಮೇಶ್ವರರು, ಅಂಕಲಗಿಯ ಶ್ರೀ ಅಡವಿ ಸ್ವಾಮಿಗಳು,

ಅಗಡಿ ಶ್ರೀ ಶೇಷಾಚಲ ಸ್ವಾಮಿಗಳು, ಗದುಗಿನ ಶ್ರೀ ಶಿವಾನಂದರ, ಗರಗದ ಶ್ರೀ ಮಡಿವಾಳಪ್ಪನವರು, ನವಿಲುಗುಂದದ ನಾಗಲಿಂಗಪ್ಪನವರು, ಅವರಾದಿ ಫಲಾಹಾರ ಸ್ವಾಮಿಗಳು, ವಿಶ್ವಕರ್ಮದ ಪ್ರಭುಸ್ವಾಮಿಗಳು, ಹುಬ್ಬಳ್ಳಿಯ ಶ್ರೀ ಸಿದ್ಧಾರೂಢರು ಮೊದಲಾದವರೆಲ್ಲ ಶರೀಫ ಸಾಹೇಬರ ಸಮಕಾಲೀನರಾಗಿದ್ದಾರೆ. ಇವರೆಲ್ಲರ ಪ್ರಭಾವವು ಶರೀಫರ ಮೇಲೆ ಆಗಿದ್ದು, ಇವರಲ್ಲಿ ಕೆಲವರು ಹಿರಿಯ ಸ್ಥಾನದಲ್ಲಿಯೂ ಇದ್ದಾರೆ. ಶರೀಫರ ಹಾಡುಗಳಲ್ಲಿ ಸಮಕಾಲೀನ ಹಿರಿಕಿರಿಯರೆಲ್ಲರ ಉಲ್ಲೇಖಗಳಿವೆ. ಅವರು ತುಳಿದ ನೆಲ ಮಿಂದ ಜಲಗಳನ್ನು ಮುಕ್ತ ಕಂಠದಿಂದ ಹೊಗಳಿದ್ದಾರೆ.

ಅವಸಾನ

ಇಂತು ಸತ್ಪುರುಷರ ಸಹವಾಸದಲ್ಲಿ ಬೆಳೆದು ದಿವ್ಯಮಾನವರಾಗಿ ಬಾಳಿದ ಶರೀಫರು ಜನನ ಸ್ಥಳವಾದ ಶಿಶುನಾಳ ಗ್ರಾಮದಲ್ಲಿ 1889 ನೇಯ ಮಾರ್ಚ್ ತಿಂಗಳ 7ನೇಯ ದಿನಾಂಕದಂದು ಅವಸಾನ ಹೊಂದಿದರು. ಅವರ ಅಂತ್ಯವು ಶಾಂತಿಯುತವಾಗಿತ್ತು. ಮರಣಕ್ಕೆ ಮುಂಚೆ ಶರೀಫರು ಗುರುಗೋವಿಂದರನ್ನು ಹಿರಿಯರನ್ನೂ ಸ್ಮರಿಸಿದರು. ಶಿಶುನಾಳಾಧೀಶನಿಗೆ ನಮೋ ಎಂದರು. ಖಾದರಲಿಂಗಕ್ಕೆ ನಮೋ ಎಂದರು. ಅವಸಾನಕ್ಕೆ ಕೆಲ ನಿಮಿಷಗಳ ಮುಂಚೆ ಅವರಿಗೆ ದಿವ್ಯಸ್ಫೂರ್ತಿಯುಂಟಾಗಿ, "ಬಿಡತೇನಿ ದೇಹ, ಬಿಡತೇನಿ ಭೂಮಿಗೆ ಕೊಡತೇನಿ, ದೇಹ ಬಿಡತೇನಿ" ಎಂದು ಹಾಡಿದರು. ಅಪೂರ್ವ ಅನುಭಾವ ಜೀವವೊಂದು ಪರತತ್ವದ ಧ್ಯಾನದಲ್ಲಿಯೇ ಶಿವಸಾನಿಧ್ಯವನ್ನು ಹೊಂದಿತು. "ಶರಣರ ಸಾವು ಮರಣದಲ್ಲಿ ನೋಡು" ಎಂಬಂತೆ.

ಶರೀಫರು ಬದುಕಿದ್ದಾಗ ಅವರ ಬೆಲೆ ಯಾರೀಗೂ ತಿಳಿಯಲಿಲ್ಲ. ಮರಣದಲ್ಲಿ ನೋಡು ಎಂಬಂತೆ ಶರೀಫರು ಬದುಕಿದ್ದಾಗ ಅವರ ಬೆಲೆ ಯಾರಿಗೂ ತಿಳಿಯಲಿಲ್ಲ. ಮರಣಾನಂತರ ಅವರ ಘನತೆ ಲೋಕಕ್ಕೆ ಅರಿವಾಯಿತು. ಜಾನಪದ ಅನುಭಾವಿ ಕವಿಗೆ ನಾಡಿಗೆ ನಾಡೆ ಬಾಷ್ಪಾಂಜಲಿಯನ್ನು ಅರ್ಪಿಸಿತು.

ಕರ್ನಾಟಕದ ಕಬೀರರೆಂದು ಹೆಸರುವಾಸಿಯಾದ ಶರೀಫರು ಕಾಲವಶರಾದಾಗ ಹಿಂದೂ–ಮುಸ್ಲಿಂ ಸಮಾಜದವರು ತಮ್ಮ ತಮ್ಮ ಸಂಪ್ರದಾಯಗಳಂತೆ. ಶವಸಂಸ್ಕಾರ ನಡೆಸಲು ಮುಂದಾದರು. ಅಪೂರ್ವ ಸ್ಥಿತಿಯಲ್ಲಿ ಶವಸಂಸ್ಕಾರವು ನಡೆಯಿತು. ಶವದ ಒಂದು ಕಡೆಗೆ ಖುರಾನಿನ ಪಠಣ ನಡೆಯಿತು. ಮತ್ತೊಂದು ಕಡೆಗೆ ವೇದಮಂತ್ರ ಪಠಣ ನಡೆಯಿತು. ಒಂದೆಡೆ "ಅಲ್ಲಾಹೋ ಅಕ್ಬರ್" ಎಂಬ ಉಗ್ಗಡವಿದ್ದರೆ, ಮತ್ತೊಂದೆಡೆ "ಹರ ಹರ ಮಹಾದೇವ" ಎಂಬ ಉದ್ಘೋಷವು ಕೇಳಿ

ಬರುತ್ತಿತ್ತು. ಹೀಗೆ ಎರಡು ಪರಂಪರೆಗಳ ಅನ್ವಯ ಶರೀಫ ಅಂತ್ಯ ಸಂಸ್ಕಾರವು ನಡೆಯಿತು. ಅಪಾರ ಜನಸ್ತೋಮ ಪಾಲ್ಗೊಂಡು ದಾರ್ಶನಿಕ ಕವಿಗೆ ಅಶ್ರುತರ್ಪಣ ಮಾಡಿತು.

ಸಾಹಿತ್ಯ ನೀತಿಬೋಧೆ

ಶರೀಫರು ಜನಪದ ಕವಿ, ದಿನಬಳಕೆಯ ಭಾಷೆ ಇವರ ಹಾಡುಗಳಲ್ಲಿ ಕಂಡುಬರುತ್ತದೆ. ಧರ್ಮ ಸಮನ್ವಯ ದೃಷ್ಟಿ ಏಕೋಭಾವ ಈ ಎಲ್ಲ ಪದಗಳ ಲಕ್ಷಣಗಳಾಗಿವೆ. ಆದುದರಿಂದ ಇವುಗಳನ್ನು ಅನುಭಾವ ಪದಗಳ ಪರಂಪರೆಯಲ್ಲಿ ಸೇರಿಸುವುದು ವಿಹಿತ. ಶರೀಫರನ್ನು ಅನುಭಾವಿಗಳೆಂದು ಕರೆದು ಶಿವಶರಣರ ಹರಿದಾಸರ ಪಂಕ್ತಿಯಲ್ಲಿ ಸೇರಿಸುವುದು ಉಚಿತ. ಜೀವನದ ಪ್ರತಿಯೊಂದು ಚಿಕ್ಕ ಘಟನೆಯಲ್ಲೂ ಶರೀಫರು ದೈವೀ ಸ್ವರೂಪವನ್ನು ಕಂಡಿದ್ದಾರೆ. ಅನುಭವದ ತಾಣದಲ್ಲಿ ಒಂದೊಂದು ನುಡಿಮುತ್ತು ಚೆಲ್ಲಿದ್ದಾರೆ. ಈ ಮುತ್ತು ಮಾಸುವುದಿಲ್ಲ, ಒಡೆಯುವುದಿಲ್ಲ, ಅದರ ಬೆಲೆಯೂ ಅಸದಳವಾದದ್ದು. ಇವರ ಎಲ್ಲ ಪದಗಳಲ್ಲೂ "ಶಿಶುನಾಳಧೀಶ", "ಶಿಶುನಾಳೇಶ" ಎಂಬ ಅಂಕಿತವಿದೆ.

ವಚನಕಾರರು, ಹರಿದಾಸರಂತೆ, ಶರೀಫರೂ ಶಿಶುನಾಳಾಧೀಶ ಎಂಬ ಮುದ್ರಿಕೆಯನ್ನು ಬಳಸಿವುದರಲ್ಲೊಂದು ವಿಶೇಷವಿದೆ. ಶಿಶುನಾಳಾಧೀಶ ಎಂಬುದು ಶರೀಫರ ಹುಟ್ಟೂರಾದ ಶಿಶುನಾಳ ಗ್ರಾಮದ ಗ್ರಾಮದೇವತೆಯ ಸಂಕೇತ. ಈ ಗ್ರಾಮದ ಮಧ್ಯದಲ್ಲಿ ಕಳಸ, ಮೇಲ್ಮಾಳಿಗೆಗಳಿಲ್ಲದ ಒಂದು ಬಸವ ಮಂದಿರವಿದೆ. ಈ ಬಸವ ವಿಗ್ರಹವು ಸ್ತಂಭಮೂರ್ತಿಯಾಗಿದ್ದು ಗಿಡಮರಗಳ ನೆರಳಲ್ಲಿದೆ ಗ್ರಾಮದ ಸ್ತಂಭಮೂರ್ತಿಯಾಗಿದ್ದು, ಗಿಡಮರಗಳ ನೆರಳಲ್ಲಿದೆ ಗ್ರಾಮದ ಸತ್ಯದೇವತೆಯೆಂದು. ಇಂದಿಗೂ ಪೂಜೆಗೊಳ್ಳುತ್ತಿರುವ ಈ ದೇವರೇ ಶರೀಫರ ಆರಾಧ್ಯ ದೇವತೆಯಾಗಿರಬೇಕು. ಶಿಶುನಾಳಾಧೀಶನ ಪ್ರೇರಣೆಯಿಂದಲೇ ಕಾವ್ಯಗಂಗೆಯನ್ನು ಹರಿಸುವ ದಿವ್ಯಸ್ಫೂರ್ತಿ ಬಂದಿದೆಯೆಂದು ಶರೀಫರು ಸರ್ವಾರ್ಪಣಾಭಾವದಿಂದ ಹೇಳಿದ್ದಾರೆ. ಅನುಭಾವಿ ಅಕ್ಕಮಹಾದೇವಿಯಂತೆ ಸತಿ–ಪತಿಭಾವವು ಶರೀಫರ ಹಾಡುಗಳಲ್ಲಿ ವ್ಯಕ್ತವಾಗಿದೆ. ಉದಾಹರಣೆ,

ಎಲ್ಲರಂಥವನಲ್ಲ ನನ ಗಂಡಾ
ಬಲ್ಲಿದನು ಪುಂಡಾ
ಶಿಶುನಾಳದಿಂದ ಕಾಂತೆ ಬಾರೆಂದು ಕರೆದೇ
ಕಾಂತ ಮಂದಿರದೊಳಗೊಯ್ದು
ಭ್ರಾಂತಿ ಭವದುರಿತವನು ಪರಿಹರಿಸಿ
ಚಿಂತೆಯನು ಮರೆಸಿಬಿಟ್ಟಾ

ಈ ಪದದಲ್ಲಿ ವ್ಯಕ್ತವಾದ ಅನುಭಾವ, ಶೃಂಗಾರ ಮೆಚ್ಚತಕ್ಕುದಾಗಿದೆ. ಇದೇ ಭಾವನೆಯನ್ನು ಇನ್ನೂ ಕೆಲವು ಪದ್ಯಗಳಲ್ಲಿ ಕಾಣಬಹುದು.

ಸದ್ಗುರು ಸಾಕಿದ ಮದ್ದಾನಿ ಬರುತಿದೆ
ಎದ್ದು ಹೋಗಿರಿ ಇದ್ದ ನಿಂದಕರು

ಎಂದು ನಿಂದಕರಿಗೆ ಎಚ್ಚರವಿತ್ತು. ಗುರುಗೋವಿಂದ ಭಟ್ಟರನ್ನು ಸದ್ಗುರುವಿಗೂ ತಮ್ಮನ್ನು ಮದ್ದಾನೆಗೂ ಹೋಲಿಸಿಕೊಂಡಿದ್ದಾರೆ. ನಿಂದಕರು ತ್ರಿಕಾಲದಲ್ಲೂ ಇರುವವರೇ ಇಂಥ ಕುಹಕಿಗಳು ಶರೀಫರನ್ನು ಕುರಿತು ನಿಂದೆ ಮಾಡಿರಬೇಕು. ಅಂಥವರಿಗೆ ತಕ್ಕ ಉತ್ತರವನ್ನು ಈ ಹಾಡಿನಲ್ಲಿ ನೀಡಿದ್ದಾರೆ.

ಶರೀಫರ ಸ್ನೇಹಿತರ ಮಗಳು ಮದುವೆಯಾಗಿ ಗಂಡನ ಮನೆಗೆ ಹೋಗುವಾಗ ಬಿಕ್ಕಿ ಬಿಕ್ಕಿ ಅಳುತ್ತಿರುವಾಗ ಶರೀಫರು ಅವಳಿಗೆ ಸಮಾಧಾನ ಹೇಳುತ್ತಾ,

ಅಳಬೇಡ ತಂಗಿ, ಅಳಬೇಡ,
ನಿನ್ನ ಕಳುಹ ಬಂದವರಲ್ಲಿ ಉಳುಹಿಕೊಂಬುವರಿಲ್ಲ.

ಎಂದು ಸೊಗಸಾಗಿ ಹಾಡಿದ್ದಾರೆ. ಸ್ತ್ರೀ ನೀತಿಯನ್ನು ಬೋಧಿಸುವ ಈ ಹಾಡನ್ನು ಉತ್ತರ ಕರ್ನಾಟಕದಲ್ಲಿ ಇಂದಿಗೂ ಹಲವೆಡೆ ಹಾಡುತ್ತಾರೆ.

ಶರೀಫರು ಪದ ರಚನೆಯ ಹದವನ್ನು ಚೆನ್ನಾಗಿ ಅರಿತಿದ್ದರು. ಪದಕ್ಕೆ ಮೊದಲು ಸ್ಫೂರ್ತಿ ಬರಬೇಕೆಂದು ಅವರ ಅಭಿಮತವಾಗಿತ್ತು. ಆದುದರಿಂದಲೇ ಭಾವದ 'ಕುದಿ ಉಕ್ಕಿ' ಬಂದಾಗಲೇ ಪದ ರೂಪುಗೊಳ್ಳುತ್ತದೆಯೆನ್ನುತ್ತಾರೆ. ಪದ ರಚನೆ, ಅಡಿಗಣ, ಪ್ರಾಸ, ಗುರು-ಲಘುಗಳ ವಿನ್ಯಾಸ ಇವುಗಳಂತೆ ಬೋಧವು ಭಾವಾವೇಶದೊಡನೆ ಹೊಮ್ಮಿದಾಗ ಲಯ ಪ್ರಾಸಗಳು, ಸ್ವಾಭಾವಿಕವಾಗಿಯೇ ಬರುತ್ತವೆನ್ನುತ್ತಾರೆ ಇದನ್ನೇ ಅವು,

ಸದಮಲ ಜ್ಞಾನದಿ ಕುದಿವುಕ್ಕಿ ಬರುವಾಗ
ಚದುರನಾದರೆ ತಿಳಿ ಹೃದಯಕಮಲದೊಳು-ಎಂದಿದ್ದಾರೆ.

ಆದುದರಿಂದ, ಅವರ ಪದಗಳೆಲ್ಲವೂ "ಲಯ ಪ್ರಳಯ"ಗಳಿಗೂ ಒಳಗಾಗದೆ ಕಾಲವನ್ನು ಮೀರಿ ನಿಂತಿವೆ. ಇಲ್ಲಿ ಲಯವೇನೆಂದರೆ ಶಾಶ ಎಂದಿಟ್ಟುಕೊಳ್ಳಬೇಕು.

ಶರೀಫರ ನುಡಿ ನಿರಾಡಂಬರವಾದುದು, ಸರಳವಾದುದು. ಆದರೆ ಅಷ್ಟೇ ಮಾರ್ಮಿಕವಾದದ್ದು. ಮುಕ್ತಿಗೊಡೆಯನಾದ ಪರಮಾತ್ಮನ ಚಾಕರಿಗೆ ಜೀವಾತ್ಮನನ್ನು ಕರೆಯುತ್ತ

ನಡಿಯೋ ದೇವರ ಚಾಕರಿಗೆ ಮುಕ್ತಿ

ಒಡೆಯ ಖಾದರಲಿಂಗ ನೆಲೆಸಿರ್ಪ ಗಿರಿಗೆ, ಎಂದು ಹೇಳಿ ಜೀವಪರ ಮರು ಒಂದುಗೂಡಲು ಭಕ್ತಿಯ ಸೇವೆಯೊಂದೇ ಸಾಧನವೆಂದು ನಿರೂಪಿಸಿದ್ದಾರೆ. ಈ ಮಾತಿನಲ್ಲಿ ಅನುಭವವು ಸೂಸಿದ ಹೊಸತನವಿದೆ. ಜೊತೆಗೆ ಇಂಥ ಪದಗಳಲ್ಲಿ ಬಳಸುವ "ಚಾಕರಿ, ಮೋಜಲಿ" ಮೊದಲಾದ ದೇಶಿ ಪದಗಳ ಬಳಕೆಯಾದರೂ ಹಿತಮಿತವಾಗಿದೆ.

ನಿರಾಕಾರವನ್ನು ಸಾಕಾರಗೊಳಿಸುವ ಕಲೆ ಶರೀಫರಿಗೆ ಕರಗತವಾಗಿದೆ. ಜಗದ ಜಂಜಡದಲ್ಲಿ ಸಿಲುಕಿದ ಹಳೆಯ ಜೀವವನ್ನು ಸಂಬೋಧಿಸುತ್ತಾ, ಅದನ್ನು ಮುದುಕಿಗೆ ಹೋಲಿಸಿ,

ಬಿದ್ದಿಯಬೇ ಮುದುಕಿ,
ನೀ ದಿನ ಹೋದಾಕಿ ಬಲು ಜೋಕಿ

ಮೋಜನಿಂದ ರೂಪಕಕ್ಕೆ ತಿರುಗಿಸಿದ್ದಾರೆ. ಹುಲಗೂರು ಸಂತೆಯಲ್ಲಿ ಕವಿ ಕಂಡ ನೋಟವು ಈ ಪದಕ್ಕೆ ವಿಷಯ ಸಾಮಗ್ರಿಯನ್ನು ಒದಗಿಸಿರಬೇಕು. ಶರೀಫರ ಚಿತ್ರ ಶೈಲಿಗೆ ಈ ಪದ ಉದಾಹರಣೆಯಾಗಿದೆ. ಜನಪದದ ನಿಚ್ಚಳವಾದ ನುಡಿಯ ಬೆಡಗನ್ನು ಇಲ್ಲಿ ಕಾಣಬಹುದು.

ಜೀವನವೊಂದು ನಿರಂತರ ಹೋರಾಟ, ಸಮಾಜವೇ ಈ ಹೋರಾಟದ ರಣರಂಗ, ಹೊಟ್ಟೆಯೇ ಕೇಂದ್ರವಾಗಿದ್ದು, ಮಾನವನು ಬೆಳಗಿನಿಂದ ಬೈಗಿನವರೆಗೆ ಸವೆದು ಸಣ್ಣಾಗುತ್ತಿದ್ದಾನೆ. ತನ್ನ ಹುಟ್ಟು ತನ್ನ ನೆಲೆಬೆಲೆಗಳನ್ನು ಘನತೆ-ಗೌರವಗಳನ್ನು ಅರಿಯದೆ ವ್ಯರ್ಥವಾಗಿ ಹಣ್ಣಾಗುತ್ತಿರುವ ಮನುಷ್ಯನ ಬಾಳನ್ನು ಕಂಡ ಕವಿ, ಮನ ಕರಗಿ,

ಹೋಗುತಿಹುದು ಕಾಯ ವ್ಯರ್ಥ, ಇದರ
ಲಾಗವ ತಿಳಿಸುವ ಯೋಗಿ ಸಮರ್ಥ

ಎಂದು ನುಡಿದು ಬೋಗಿ ಲಂಪಟದಲ್ಲಿ ಮೈಮರೆತು ತನ್ನನ್ನು ತಾನು ಅರಿಯದ ಅರಹುಗೇಡಿಗೆ ಶರೀಫರು ಮಾರ್ಗ ತೋರಿದ್ದಾರೆ. ಬದುಕನ್ನು ಹಸಾದವಾಗಿಸುವ, ಹಗುರಾಗಿಸುವ ಗುಟ್ಟನ್ನು ಹೇಳಿದ್ದಾರೆ. ಸಾಮಾನ್ಯ ಬದುಕಿನಾಚೆಗೂ ಒಂದು ಬದುಕುಂಟು. ಅದರೆಡೆಗೆ ಕೈಚಾಚು ಎಂದು ಹೇಳುವ ಈ ಕವನವು ತುಂಬ ಹೃದಯಸ್ಪರ್ಶಿಯಾಗಿದೆ.

ನೀತಿಬೋಧಕ ಪದ್ಯಗಳದು. ಒಂದು ರೀತಿಯ ಮೋಡಿಯಾದರೆ, ಶರೀಫರ ವರ್ಣನಾತ್ಮಕ ಪದ್ಯಗಳದು. ಮತ್ತೊಂದು ಮೋಡಿಯಾಗಿದೆ. ಪಾರಿವಾಳದ ಆಟವನ್ನು, ವರ್ಣಿಸುವುದು. ಶೀಗೀ ಹುಣ್ಣಿಮೆಯ ವೈಭವದ ವರ್ಣನೆ, ಅಲ್ಲಿ ಕೇರಿಯ ವರ್ಣನೆ ಮೊದಲಾದವುಗಳು ಓದುಗರನ್ನು ಮಂತ್ರಮುಗ್ಧರನ್ನಾಗಿ ಮಾಡುತ್ತವೆ.

ತಮಗಾದ ಅನುಭಾವವನ್ನು ಸಲುಗೆಯ ಒಲುಮೆಯಿಂದ ಹೇಳುವುದು, ಅನುಭಾವಿಗಳ ರೀತಿಗಳಲ್ಲಿ ಒಂದು ಬೆಡಗು-ಬಿನ್ನಾಣದ ಬಗೆಯಲ್ಲಿ ಅನುಭಾವಿ ಸಂಬೋಧಿಸುವ ಜೀವ ಆಗಾಗ ಮಾನಿಯೋ ಪ್ರಿಯತಮೆಯೋ ಆಗಿ ರೂಪಕದಲ್ಲಿ ರೂಪ ತಾಳುವುದುಂಟು. ಈ ಬಗೆಯ ಸಂಬೋಧನೆ

ಹಾವು ತುಳಿದೆನೆ ಮಾನಿನಿ
ಹಾವು ತುಳಿದು ಹಾರಿ ನಿಂತೆ
ಜೀವ ಕಳವಳಿಸಿತು ಗೆಳತಿ
ದೇಹತ್ರಯದ ಸ್ಮತಿಯು ತಪ್ಪಿ
ದೇವಾ ನೀನೆ ಗತಿಯ ಎಂದು.

ಎಂಬಲ್ಲಿದೆ ಇಲ್ಲಿ ಹಾವು ಸಂಸಾರದ ಸಂಕೇತವಾಗಿದೆ. ಈ ಸಾಂಕೇತಿಕ ಹಾವನ್ನು ತುಳಿದರೂ, ಶರೀಫರು ಕಾಲಿಯಾ ಮರ್ದನದಂತೆ ಕೃಷ್ಣಲೀಲೆಯಿಂದ ಮೆರೆದಿದ್ದಾರೆ. ಈ ಪದವು ಉತ್ಸಾಹ ಛಂದೋಲಯದಲ್ಲಿದೆ. ಗತಿಗತ್ತುಗಳಲ್ಲಿ ವಿಷಯದಲ್ಲಿ ಹೊಂದಾಣಿಕೆಯಿದೆ.

ಇದರಂತೆ ಶರೀಫರ ಸಾಹಿತ್ಯ ಶ್ರೀಮಂತವಾದುದಾಗಿದೆ. ಪ್ರತಿಯೊಂದು ಪದವೂ ತನ್ನದೇ ಆದ ಭಾವ ವೈಖರಿಯಿಂದ ಕೂಡಿದ್ದು, ಜಾನಪದ ಮಿಡಿತವನ್ನು ಹೊಂದಿದೆ. ಶರಣರು ಬೋಧಿಸುವ ಕಾಯಕದ ಮಹತ್ವ ಎಲ್ಲ ಪದ್ಯಗಳ ಬೆನ್ನೆಲುಬಾಗಿದೆ. ಜೀವನ-ಪರಿಶುದ್ಧತೆ ಚಾರಿತ್ರ್ಯ ನಿರ್ಮಾಣಗಳೇ ಇವರ ನೀತಿಬೋಧದ ಸಾರವಾಗಿವೆ. ಶರೀಫರು ಬೋಧಿಸುವ ಸ್ತ್ರೀ-ನೀತಿಯಾದರೂ

ಮಾರ್ಮಿಕವಾದದ್ದಿದೆ. ಈ ಯೋಗಿ-ಕವಿಯಿಂದಾಗಿ ಶಿಶುನಾಳ ಗ್ರಾಮಕ್ಕೊಂದು ನೆಲೆ-ಬೆಲೆ ಬಂದಿದೆ. ಸಾಹಿತಿಗಳಿಗೆ ರಸಿಕರಿಗೆ ಕಲೋಪಾಸಕರಿಗೆ ಯಾತ್ರಾ ಸ್ಥಳವಾಗಿದೆ. ಶಿಶುನಾಳದಲ್ಲಿ ಒಂದು ಸ್ಮಾರಕವನ್ನು ಕಟ್ಟಲು ಭಕ್ತರು ಪ್ರಯತ್ನಿಸುತ್ತಿದ್ದಾರೆ. ಪದಗಳ ರಾಗ-ತಾಳಗಳಾದರೂ ಜನರಾಡುವ ರಾಗ-ತಾಳಗಳಲ್ಲಿಯೇ ಇವೆ. ಆದುದರಿಂದ ಶರೀಫರು ಜನಸಾಮಾನ್ಯರ ವರಕವಿಗಳಾಗಿದ್ದಾರೆ.

ಒಟ್ಟಿನಲ್ಲಿ ಶರೀಫರು ಸಿದ್ಧಪುರುಷರು, ಇವರ ಹಿಂದೆ ತಪಸ್ಸಿದೆ, ಸಿದ್ಧಿಯಿದೆ, ಪ್ರಸಾದವಾಣಿಯಿದೆ. ಶಬ್ದಗಳಲ್ಲಿ ಪೌರುಷವಿದೆ, ಪ್ರಭಾವವಿದೆ, ದೇವೋನ್ಮಾದದ ಸ್ಫೂರ್ತಿಯಿದೆ. ಪ್ರಪಂಚ-ಪರಮಾರ್ಥಗಳೆರಡಕ್ಕೂ ಈ ಪದಗಳು ಸೇತುವೆಯಂತಿವೆ. ಶರೀಫರಿಂದ ಪಡೆದ ಮಾರ್ಗದರ್ಶನಕ್ಕಾಗಿ ಕನ್ನಡ ಮಾನವ ಕೋಟಿ ಅವರಿಗೆ ಋಣಿಯಾಗಿದೆ.

ಅಧ್ಯಾಯ-4

ಶಿಶುನಾಳ ಶರೀಫರ ಅನುಭಾವ ನೆಲೆ

ಶರೀಫರ ತತ್ವಪದಗಳಲ್ಲಿ ಸಮಾಜ

ಶರೀಫರ ಪದಗಳು 1915ರಲ್ಲಿ ಪ್ರಕಟವಾಗಿದ್ದರೂ ಸರಿಸುಮಾರು 1980ರ ಹೊತ್ತಿಗೆ ಹೆಚ್ಚು ಪ್ರಚಾರ ಪಡೆದುಕೊಂಡಿತು. ಇದಕ್ಕೆ ಶರೀಫರ ಹೆಚ್ಚಿನ ಪಾಲು ಗೀತೆಗಳು 'ಬರಕೋ ಪದ ಬರಕೋ' ಸಂಗ್ರಹದಲ್ಲಿ ದೊರಕುವಂತಾಗಿದ್ದು, ಅಶ್ವತ್ಥರು ಸಂಗೀತ ಸಂಯೋಜನೆ ಮಾಡಿದ ಶರೀಫ ಗೀತೆಗಳ ಕ್ಯಾಸೆಟ್ ಹೊರಬಂದಿದ್ದು ಹಾಗೂ ಕನ್ನಡದ ಪ್ರಮುಖ ಪತ್ರಿಕೆಗಳು ತಮ್ಮ ವಿಶೇಷಾಂಕಗಳಲ್ಲಿ ಶರೀಫರ ಕುರಿತು ಲೇಖನಗಳನ್ನು ಪ್ರಕಟಿಸಿದ್ದು ಇದಕ್ಕೆ ಕಾರಣವಿದ್ದಿರಬಹುದು. ಇದರ ಫಲವಾಗಿ ಹತ್ತೊಂಬತ್ತನೇ ಶತಮಾನದ ಶರೀಫ್ ಸಾಹೇಬರು (1819-1889) ಕರ್ನಾಟಕದ ಜನಮನದಲ್ಲಿ ನೆಲೆ ನಿಂತರು. ನಂತರದಲ್ಲಿ ಅವರ ಜೀವನ ಬಿಂಬಿಸುವ ಚಲನಚಿತ್ರ ನಿರ್ಮಾಣಗೊಂಡು ಬಿಡುಗಡೆಯಾಯಿತು.

ಇಪ್ಪತ್ತನೇ ಶತಮಾನದಲ್ಲಿ ಕರ್ನಾಟಕದ ಸಾಮಾಜಿಕ ಜೀವನದಲ್ಲಿ ಹಿಂದೂ ಮತ್ತು ಮುಸಲ್ಮಾನರು ಅಪನಂಬುಗೆ, ಅನುಮಾನ, ಅವಿಶ್ವಾಸ ಮತ್ತು ಒಂದು ಬಗೆಯ ಅಸಹನೆಯಿಂದ ಪರಸ್ಪರ ವೈರಿಗಳಂತೆ ಕಾಣುತ್ತಿದ್ದ ಪರಿಸರವಿತ್ತು. ಈ ಮನಸ್ಥಿತಿ ಇಂದಿನ ದಿನಮಾನದಲ್ಲಿ ಇನ್ನೂ ಹೆಚ್ಚುಗುತ್ತ ಸಾಗಿದೆ. ಇಂಥ ಸಂದರ್ಭದಲ್ಲಿ ವೈದಿಕ ಭಟ್ಟರೊಬ್ಬರು ಮುಸ್ಲೀಮನೊಬ್ಬನನ್ನು ಶಿಷ್ಯನನ್ನಾಗಿ ಸ್ವೀಕರಿಸಿ ಅವನನ್ನು ಅಪ್ರತಿಮ ಸಾಧಕನನ್ನಾಗಿ ಮಾಡಿದ್ದು ಅಥವಾ ಮುಸ್ಲೀಮ್ ಸಾಧಕನೊಬ್ಬ ಬ್ರಾಹ್ಮಣ ಗುರುವನ್ನು ಪಡೆದುಕೊಂಡಿದ್ದು ಅಸಂಗತವಾದ ಸಂಗತಿಯಾಗಿತ್ತು ಅನ್ಯ ಧರ್ಮೀಯರಲ್ಲಿ ಗುರುಶಿಷ್ಯ ಸಂಬಂಧ ಏರ್ಪಟ್ಟಿದ್ದು ಹೇಗೆ? ಮತ ಸಂಕುಚಿತತೆ ಮತ್ತು ಮೂಲಭೂತವಾದ ಕಲ್ಪನೆಯಾಚೆ ಬಹು ಸಮುದಾಯ ಕೇಂದ್ರಿತ ಆಸಕ್ತಿ ಕುಡಿಯೊಡೆದಿದ್ದು ಹೇಗೆ? ಇದು ಶರೀಫರಲ್ಲಿ ಕುತೂಹಲ ಕೆರಳಲು ಕಾರಣವಾಗಿತ್ತು.

ಶರೀಫರು ಜೀವಿಸಿದ್ದು ಹತ್ತೊಂಬತ್ತನೆಯ ಶತಮಾನದ ಭಾರತದಲ್ಲಿ ಬ್ರಿಟಿಷರು ತಮ್ಮ ವ್ಯಾಪಾರಿ ಸಂಸ್ಥೆಯಾದ ಕಂಪನಿ ಆಡಳಿತದ ಸರಕಾರವನ್ನು ಸಾಮ್ರಾಜ್ಯಶಾಹಿ ಆಡಳಿತದ ಸರಕಾರವನ್ನಾಗಿ ಬದಲಿಸುವ ಹಂತದಲ್ಲಿದ್ದರು. ಆದಿಲ್‌ಶಾಹಿಗಳು ಆಳಿದ್ದ ಬಿಜಾಪುರದ ಶಿಶುನಾಳ

ಮತ್ತು ಅದರ ಸುತ್ತಲ ಪ್ರದೇಶದ ಗ್ರಾಮಗಳಲ್ಲಿ ವೀರಶೈವ ಮತ್ತು ಮುಸ್ಲಿಂ ಸಮುದಾಯಗಳು ಪ್ರಧಾನವಾಗಿದ್ದವು. ಅಲ್ಲದೆ ಬ್ರಾಹ್ಮಣರು, ವೀರಶೈವರು ಮತ್ತು ಮುಸ್ಲಿಮರು ಪರಸ್ಪರ ನಂಬುಗೆ ಮತ್ತು ಸ್ನೇಹಭಾವದಲ್ಲಿ ಸಹಜೀವನ ನಡೆಸುತ್ತಿದ್ದರು.

ಇದರ ಪರಿಣಾಮವಾಗಿ ತಂದೆಯ ಮೂಲಕ ಇಸ್ಲಾಂ ಧರ್ಮದ ಅರಿವು ಪಡೆದ ಶರೀಫರು ವೀರಶೈವರ ಕೂಲಿ ಮಠದಲ್ಲಿ ಆರಂಭಿಕ ಕಲಿಕೆಯನ್ನೂ ಕಳಸದ ಗೋವಿಂದಭಟ್ಟರ ವೈದಿಕ ಶಾಲೆಯಲ್ಲಿ ಹೆಚ್ಚಿನ ವಿದ್ಯೆಯನ್ನೂ ಪಡೆಯಲು ಅವಕಾಶ ಒದಗಿತು. ಅಲ್ಲದೆ ತಮ್ಮ ಸಮಕಾಲೀನ ಅನುಭಾವಿ ಸಾಧಕರಾದ ಚಿದಂಬರ ದೀಕ್ಷಿತ, ಗರಗದ ಮಡಿವಾಳಪ್ಪ, ಹುಬ್ಬಳ್ಳಿಯ ಸಿದ್ಧಾರೂಢರು, ಅಗಡಿಯ ಶೇಷಾಚಲ, ನವಲಗುಂದದ ನಾಗಲಿಂಗ ಸ್ವಾಮಿ, ಗುಡಗೇರಿಯ ಸಂಗಮೇಶ್ವರ ಸ್ವಾಮಿ, ಹುಲಗೂರಿನ ಚನ್ನವೀರಸ್ವಾಮಿ, ಅಂಕಲಗಿಯ ಅಡವಿಸ್ವಾಮಿ, ಸಕ್ಕರಿ ಬಾಳಾಚಾರ್ಯರೊಂದಿಗೆ ಸಂವಾದ ನಡೆಸುತ್ತಿದ್ದರು. ಇವರಲ್ಲಿ ಬಹುಪಾಲು ಶಕ್ತಿ ವಿಶಿಷ್ಟಾದ್ವೈತ ಹಿನ್ನೆಲೆ ಉಳ್ಳವರಾಗಿದ್ದು; ಬಹು ಸಮುದಾಯಗಳ ಸಮಾಜದಲ್ಲಿ ಅಂದು ವೀರಶೈವ ಮತ ಪ್ರಭಾವಶಾಲಿಯಾಗಿತ್ತು. ಶರೀಫರು ಗುರುಗೋವಿಂದ ಭಟ್ಟ, ಬಸವಣ್ಣ ಮತ್ತು ಅಲ್ಲಮ ಪ್ರಭುಗಳ ಪ್ರಭಾವಳಿಯೊಳಗೆ ತಮ್ಮ ವ್ಯಕ್ತಿತ್ವ ರೂಪಿಸಿಕೊಂಡಿದ್ದರು ಎಂದು ಬಹುಪಾಲು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ.

ಹತ್ತೊಂಬತ್ತನೆಯ ಶತಮಾನದಲ್ಲಿ ಕೋಮುಭಾವನೆಯನ್ನು ರಾಜಕಾರಣದಲ್ಲಿ ದಾಳವಾಗಿ ಬಳಕೆ ಮಾಡಿರಲಿಲ್ಲ. ಬಹು ಸಮುದಾಯಗಳ ಸಮಾಜದಲ್ಲಿ ಅಂದು ಮುಸ್ಲಿಂ ಸಮುದಾಯವೂ ಒಂದು ಸಮುದಾಯವಾಗಿ ಸೇರಿಹೋಗಿತ್ತು. ಇದರಿಂದ ಶರೀಫರು ಮುಸ್ಲಿಂ ಕುಟುಂಬದಲ್ಲಿ ಹುಟ್ಟಿದರೂ ಭಾರತೀಯ ತತ್ವ ದರ್ಶನಗಳನ್ನು ರಕ್ತಗತ ಮಾಡಿಕೊಳ್ಳಲು, ಬಹುಸಮುದಾಯಗಳ ನಡುವೆ ಸಮನ್ವಯ ಸಾಧಿಸಲು, ಸಮುದಾಯ ಪ್ರತ್ಯೇಕತೆ ಮೀರಿ ಮಾನವ ಸಮುದಾಯ ಕಟ್ಟಲು ಸಾಧ್ಯವಾಯಿತು. ಉತ್ತರ ಕರ್ನಾಟಕದ ಬಹು ಸಮುದಾಯಗಳಿಂದ ಆರಾಧನೆಗೆ ಒಳಗಾಗಿರುವ ಉಳವಿಯ ಚನ್ನಬಸವೇಶ್ವರ, ಸವದತ್ತಿಯ ಎಲ್ಲಮ್ಮ, ಹಂಪೆಯ ವಿರೂಪಾಕ್ಷ, ಶಿರಹಟ್ಟಿಯ ಮೈಲಾರ ಮುಂತಾದ ದೈವಗಳೊಂದಿಗೆ ಭಾವನಾತ್ಮಕ ಸಂಬಂಧ ಹೊಂದಲು ಸಾಧ್ಯವಾಯಿತು. ಈ ಭಾಗದ ಸಾಂಸ್ಕೃತಿಕ ಜೀವನದಲ್ಲಿ ಕೇಂದ್ರ ಬಿಂದುವಾಗಲು ಕಾರಣವಾಯಿತು ಎಂದು ಹೇಳಬಹುದು. ಆದರೂ ಶರೀಫರ ಈ ತುಡಿತಕ್ಕೆ ಅವರ ವ್ಯಕ್ತಿತ್ವವನ್ನು ರೂಪಿಸಿದ ಮೂಲತತ್ವ ಯಾವುದು ಎಂಬ ಪ್ರಶ್ನೆ

ನನ್ನನ್ನು ಕಾಡಿದೆ. ಶರೀಫರ ಪದಗಳು/ರಚನೆಗಳ ಮೂಲಕ ಇದಕ್ಕೆ ಉತ್ತರ ಕಂಡುಕೊಳ್ಳುವ ಪ್ರಯತ್ನ ಮಾಡಲಾಗುವುದು.

ಶರೀಫರು ಗುರುಗೋವಿಂದ ಭಟ್ಟರಲ್ಲಿ ಕೇವಲ ವೈದಿಕ ಪುರಾಣ ಇತಿಹಾಸಗಳನ್ನು ಮಾತ್ರ ಕಲಿಯಲಿಲ್ಲ. ಅದರೊಂದಿಗೆ ಅವರಿಗೆ ಅದ್ವೈತ ತಳಹದಿಯೂ ದೊರಕಿತು. ಶಾಕ್ತ ಪಂಥದ ಸಾಧಕ ಮನೋಪ್ರವೃತ್ತಿಯೂ ಬೆಳೆಯಿತು. ಈ ಅಂಶವನ್ನು ಪ್ರಸ್ತಾಪಿಸುವಲ್ಲಿ ವಿದ್ವಾಂಸರಲ್ಲಿ ಭಿನ್ನಾಭಿಪ್ರಯಾ ಕಂಡು ಬರದು. ಶಾಕ್ತಪಂಥದ ಶ್ರೀ ಚಕ್ರ ಕಲ್ಪನೆ ಆಧಾರಿತ ಸಾಧನೆಯ ಕ್ರಮಗಳು ಮತ್ತು ನಾಥಪಂಥದ ಕುಂಡಲಿನಿ ಕಲ್ಪನೆ ಆಧಾರಿತ ಸಾಧನೋಪಕ್ರದ ಹಂತಗಳು ಸಾಮ್ಯತೆಯನ್ನು ಹೊಂದಿವೆ. ಇದಕ್ಕೆ ಕಾರಣವನ್ನು ಸಾಧಕ ಪಂಥಗಳ ಚಾರಿತ್ರಿಕ ಬೆಳವಣಿಗೆಯಲ್ಲಿ ಕಂಡುಕೊಳ್ಳಬಹುದು. ಒಂದು ಕಾಲಕ್ಕೆ ನಾಥ ಪಂಥದ ಇಂಥ ಸಾಧನಾ ಮಾರ್ಗದ ಆಚರಣೆಗಳು ವಾಮಾಚಾರ ಎಂಬ ಹೆಸರಿನಿಂದ ಕರೆಯಿಸಿಕೊಂಡು ಶಿಷ್ಟ ಸಮಾಜದ ಅವಕೃಪೆಗೆ ಒಳಗಾಗಿ ದೂರವುಳಿದಿತ್ತು ಎಂಬುದನ್ನು ಇಲ್ಲಿ ಮರೆಯುವಂತಿಲ್ಲ. ಏಕೆಂದರೆ ಶಕ್ತಿ ವಿಶಿಷ್ಟಾದ್ವೈತ ಆಧಾರಿತ ವೀರಶೈವವೂ ತನ್ನ ಷಟ್‌ಸ್ಥಲ ಸಿದ್ಧಾಂತವೆಂಬ ಸಾಧನಮಾರ್ಗವನ್ನು ರೂಪಿಸಿಕೊಂಡಿದ್ದು ತನಗೆ ಪ್ರೇರಣೆಯೂ ಆಧಾರವೂ ಒದಗಿಸಿದ ನಾಥ ಪಂಥದ ಕುಂಡಲಿನಿ ಕಲ್ಪನೆಯ ಪರಿಷ್ಕರಣೆಯಿಂದ ಎಂಬುದನ್ನು ನೆನಪಿಟ್ಟುಕೊಳ್ಳಬೇಕು. ಶರೀಫರಿಗೆ ಇಸ್ಲಾಂ ಏಕೇಶ್ವರ ಕಲ್ಪನೆ, ಅದ್ವೈತ, ಶಾಕ್ತ, ಶಕ್ತಿ ವಿಶಿಷ್ಟಾದ್ವೈತ ಕಲ್ಪನೆಗಳು ತಮ್ಮ ಜೀವದುಸಿರಾಗಿತ್ತು. ಇವೆಲ್ಲದರ ಬೇರು ನಾಥ ಪಂಥದಲ್ಲಿ ಆಂಶಿಕವಾಗಿಯೋ ಪರಿಷ್ಕರಣ ರೂಪದಲ್ಲಿಯೋ ಸಾಮ್ಯತೆಯ ರೂಪದಲ್ಲೋ ನೆಲೆಸಿತ್ತು ಎಂಬುದರ ಕಡೆ ಗಮನ ಸೆಳೆಯಬೇಕಿತ್ತು. ಮತ್ತೊಂದು ಮುಖ್ಯ ಅಂಶವೆಂದರೆ ಶಾಕ್ತ ಮತ್ತು ನಾಥ ಪಂಥಗಳು ತಾತವಿಕವಾಗಿ ಅವೈದಿಕ ಸಾಂಖ್ಯ ದರ್ಶನಕ್ಕೆ ಋಣಿಯಾಗಿರುವುದು.

ನಾಥ, ಶಾಕ್ತದಂತಹ ಸಿದ್ಧ, ಸಾಧಕ ಪಂಥಗಳು ತಮ್ಮ ಪಂಥದ ಆಚಾರ, ವಿಚಾರ, ತತ್ವ ಕಲ್ಪನೆಗಳನ್ನು ತಮ್ಮ ಮುಂದಿನ ಪರಂಪರೆಗೆ ದಾಟಿಸುವಲ್ಲಿ ಜನ ಬಳಕೆಯ ಭಾಷಾ ಪದ್ಧತಿಯನ್ನು ಬಳಸದೆ ತಮ್ಮವೇ ಆದ ಪ್ರತ್ಯೇಕ ಸಂಕೇತ ಭಾಷಾ ಪದ್ಧತಿಯನ್ನು ರೂಢಿಸಿಕೊಂಡು ಬಳಕೆ ಮಾಡುತ್ತಿದ್ದವು. ಈ ಸಂಕೇತ ಭಾಷೆಯನ್ನು 'ಸಂಧಾ' ಎಂದು ಕರೆಯಲಾಗುತ್ತಿತ್ತು. ಪಂಥದ ಆಚಾರ ವಿಚಾರಗಳ ವಿಷಯದಲ್ಲಿ ಗೌಪ್ಯತೆಯನ್ನು ಕಾಪಾಡುವುದು ಮತ್ತು ತನ್ನ ಪರಂಪರೆಯನ್ನು ಉಳಿಸಿ ಬೆಳೆಸುವ ದೃಷ್ಟಿ ಈ ಸಂಕೇತ ಭಾಷೆಯ ಉದ್ದೇಶವಾಗಿತ್ತು. ಸಂಕೇತ ಭಾಷಾ ಬಳಕೆಯ

ಮುಂದುವರೆದ ರೂಪವಾಗಿ ಬೆಡಗು ರಚನೆಗಳು ಮೈತಳೆದದ್ದು ಕಾಣುತ್ತೇವೆ. ಶಿಷ್ಯ ಸಮಾಜದ ಅಪವ್ಯಾಖ್ಯಾನಗಳಿಂದ ತಪ್ಪಿಸಿಕೊಳ್ಳಲು ಸಿದ್ಧಪಂಥಗಳಿಗೆ ಸಂಧಾಭಾಷೆಯ ಬಳಕೆ ಅನಿವಾರ್ಯವಾಗಿದ್ದಿರಬಹುದು. ಇಂಥ ಸಂಕೇತ ಭಾಷೆಯ ಅರಿವು ಶರೀಫರಿಗಿತ್ತು ಎಂಬ ಸುಳುಹು ಅವರ 'ಕೊಡಗನ ಕೋಳಿ ನುಂಗಿತ್ತ' ಗೀತೆಯ ರಚನಾ ಕೌಶಲ್ಯದಿಂದ ತಿಳಿದುಬರುತ್ತದೆ.

ಕೋಡಗನ ಕೋಳಿ ನುಂಗಿತ್ತ
ನೋಡವ್ವ ತಂಗಿ

ಆಡು ಆನೆಯ ನುಂಗಿ
ಗೋಡೆ ಸುಣ್ಣವ ನುಂಗಿ
ಆಡಲು ಬಂದ ಪಾತರದವಳ ಮದ್ದಳೆ ನುಂಗಿತ

ಇದು ಅಸಾಧ್ಯ ಮತ್ತು ಅಸಾಮಾನ್ಯ ಬಣ್ಣನೆಯಾಗಿ ಸಾಮಾನ್ಯ ಲೋಕದ ಜೀವಿಗಳಿಗೆ ಕಂಡು ಬರುತ್ತದೆ. ಆದರೆ ಸಾಧಕ ಲೋಕದ ಜೀವಿಗಳಿಗೆ ಸಾಧನೆಯ ಕ್ರಮ ಮತ್ತು ವಿಧಾನವನ್ನು ತಿಳಿಸುವ ಸಂಗತಿಯಾಗಿದೆ. ಆದರೂ ಇದು ಗುಪ್ತ ಭಾಷೆಯಲ್ಲಿ ರಚಿತವಾದ ಪದವಲ್ಲ. ಗುಪ್ತ ಭಾಷೆಯ ನಿಗೂಢತೆ ಮತ್ತು ರಹಸ್ಯಮಯತೆ ಈ ರಚನೆಯ ಅಲಂಕಾರಿಕ ಭಾಷೆಯಲ್ಲಿ ಮಾತ್ರವಿದೆ, ಹೊರತು ಸಂಕೇತ ಭಾಷೆಯ ಮಟ್ಟದಲ್ಲಿಲ್ಲ. ಹಾಗಾಗಿಯೇ ಶರೀಫರ ಈ ರಚನೆಗೂ ಅಲ್ಲಮಪ್ರಭು ಬೆಡಗಿನ ವಚನಗಳಿಗೂ ಕನಕದಾಸರ ಮುಂಡಿಗೆಗಳಿಗೂ ಸ್ಪಷ್ಟ ವ್ಯತ್ಯಾಸಗಳನ್ನು ಗುರುತಿಸಬಹುದು. ಸಂಧಾ ಭಾಷೆಯ ಮಾದರಿಯನ್ನು ಇಲ್ಲಿ ಕಾವ್ಯ ಭಾಷೆಯ ಚಮತ್ಕಾರ ಗುಣ ಸಾಧಿಸಲು ಬಳಸಿಕೊಳ್ಳಲಾಗಿದೆ. ಈ ಮೂಲಕ ಕೇಳುಗರಲ್ಲಿ ಕುತೂಹಲ ಉಂಟು ಮಾಡಿ ತನ್ನ ಕಡೆ ಗಮನ ಕೇಂದ್ರೀಕರಿಸುವಂತೆ ಒಂದು ಉಪಾಯವಾಗಿ ಅಥವಾ ಒಂದು ತಂತ್ರವಾಗಿ ಬಳಕೆ ಮಾಡಿಕೊಂಡಿದೆ. ಅಜ್ಞಾನದ ಅಗಾಧತೆಯನ್ನು ಸಣ್ಣ ಪ್ರಮಾಣದ ಅರಿವು ಹೇಗೆ ಅತ್ಯಾಶ್ಚರ್ಯಕರವಾದ ರೀತಿಯಲ್ಲಿ ಹೋಗಲಾಡಿಸುತ್ತದೆ ಎಂಬ ಇಲ್ಲಿನ ಕ್ರಮ ವಿವರ ಶರೀಫರು ಸಿದ್ಧ ಪಂಥಗಳ ಗರಡಿಯಲ್ಲಿ ಪಳಗಿದವರೆಂಬ ಅಂಶವನ್ನು ಹೊರಗೆಡಹುತ್ತದೆ.

ಶರೀಫರು ಏಕೇಶ್ವರ ವಾದ ಮತ್ತು ನಿರ್ಗುಣ ದೈವಾರಾಧನೆಯನ್ನು ಬಲ್ಲವರು. ಅದ್ವೈತವನ್ನು ಅಪ್ಪಿದವರು. ಶಕ್ತಿ ವಿಶಿಷ್ಟಾದ್ವೈತವನ್ನು ಸುತ್ತಲ ಪರಿಸರದಲ್ಲಿ ಮನಗಂಡವರು. ಇವೆಲ್ಲದರಲ್ಲಿ ಗುಪ್ತವಾಗಿ ಹರಿದಿರುವ ಶಾಕ್ತ, ನಾಥ, ಸಾಂಖ್ಯ ದರ್ಶನಗಳ ಸಾಧನೆಯ ಹಾದಿಯಲ್ಲಿ ನಡೆದವರು. ಇವನ್ನೆಲ್ಲ ಏಕತ್ರಗೊಳಿಸಿ ಬೋಧ' ಕಲ್ಪನೆಯಲ್ಲಿ ಕಂಡಿರುವ ಕ್ರಮವನ್ನು ಕೆಳಗಿನ ರಚನೆಯಲ್ಲಿ ಕಾಣಬಹುದು.

ಬೋಧ ಒಂದೇ ಬ್ರಹ್ಮ
ನಾದ ಒಂದೇ
ಸಾಧನ ಮಾಡುವ ಹಾದಿ ಒಂದೇ
ಆದಿ ಪದ ಒಂದೇ

ಸಾಧನೆಯ ಈ ಅದ್ವೈತ ದೃಷ್ಟಿ ಶಕ್ತಿ ವಿಶಿಷ್ಟಾದ್ವೈತದ ಚಹರೆ ಪಡೆದಾಗ ಉಂಟಾಗುವ ಸ್ಥಿತಿ ವೀರಶೈವ ಮಾದರಿಯ ಷಟ್‌ಸ್ಥಲಗಳನ್ನು ಅನುಸರಿಸದ ಶಾಕ್ತ ಪಂಥದ ಶ್ರೀಚಕ್ರ ಮಾದರಿಯನ್ನು ಅನುಸರಿಸುತ್ತದೆ. ಇದನ್ನು 'ಸ್ನೇಹ ಮಾಡಬೇಕಿಂಥವಳ' ವರ್ಣಿಸುತ್ತದೆ.

ಸ್ನೇಹ ಮಾಡಬೇಕಿಂಥವಳ ಒಳ್ಳೆ
ಮೋಹದಿಂದಲಿ ಬಂದು ಕೂಡುವಂಥವಳ
ಚಂದ್ರಗಾದಿ ಶೀರಿಯನುಟ್ಟು
ಕೆಂದಾವರಿಯ ಕುಪ್ಪಸ ತೊಟ್ಟು
ಬಂದಳೋ ಮಂದಿರ ಬಿಟ್ಟು ನಾಲ್ಕು
ಮಂದಿಯೊಳಗ ಬಂದು ನಾಚುವಳೆಷ್ಟು

ಶಾಕ್ತದ ಪರಿಷ್ಕೃತ ಮಾದರಿಯಲ್ಲಿ ನಾಥದ ಗುಪ್ತ ಸಾಧನೆಯ ಕ್ರಮ ಇಲ್ಲಿದೆ. ಇದರ ಸೂಕ್ಷ್ಮತೆ ಈ ಎರಡೂ ಮಾದತಿಗಳ ಕ್ರಮ ವ್ಯತ್ಯಾಸ ಬಲ್ಲವರಿಗೆ ಮನವರಿಕೆಯಾಗುತ್ತದೆ. ಹಾಗಾಗಿ ಇಲ್ಲಿ ಸಾಧನೆಯ ಸಂಗಾತಿಯಾದ ಶಕ್ತಿಯನ್ನು ದೈವತ್ವಕ್ಕೇರಿಸದೆ ಶಾಕ್ತದಂತೆ, ಪ್ರಿಯತಮೆಯಾಗಿ ಕಂಡು ನಡೆಸಿಕೊಂಡಿದೆ. ಅಲ್ಲದೆ ಸಾಂಖ್ಯ ದರ್ಶನದ ಪ್ರಕೃತಿ ಪುರುಷ ಕಲ್ಪನೆಗಳು ಬೇರೆ ಬೇರೆಯಾಗಿರದೆ ಒಂದರೊಳಗೊಂದು ಇದ್ದು ಪರಸ್ಪರ ಅವಲಂಬನೆಯಲ್ಲೇ ತಮ್ಮ ಪರಮಸ್ಥಿತಿಯನ್ನು ಉಳಿಸಿಕೊಂಡಿರುವ ಕ್ರಮವನ್ನು ಅರಸಲಾಗಿದೆ.

"ಜೀವ-ಶಿವರ ಮಿಲನವನ್ನು ಸ್ತ್ರೀ-ಪುರುಷ ಸಂಗದ ಚಿತ್ರದ ಮೂಲಕವೇ ಶರೀಫ್ ನೀಡುತ್ತಾರೆ. 'ಮುಕ್ತಿ' ಅಥವಾ 'ನಿರ್ಮಾಣ'ದ ಅನುಭವವನ್ನು ಮಿಲನದ ಉತ್ಕಟ ರತ್ಯಾಸಕ್ತಿಯ ಮೂಲಕವೇ ಕೊಡಬಯಸುತ್ತಾರೆ.

ಈ ಮೇಲಿನ ಪದದಲ್ಲಿ ಮುಕ್ತಿಯನ್ನು ಹೆಣ್ಣಿಗೆ ಹೋಲಿಸಿ, ಅವಳ ಮಧುರ ಸಂಗಕ್ಕಾಗಿ ಹಾತೊರೆಯುವ ಪ್ರೇಮಿಯೊಬ್ಬನು ಅವಳನ್ನು ವರ್ಣಿಸುವ ರೀತಿಯಲ್ಲಿಯೇ ಬಣ್ಣನೆ ಮಾಡಿದ್ದನ್ನು ಕಾಣಬಹುದು. ಶರೀಫರ ದೃಷ್ಟಿಯಲ್ಲಿ ಭಕ್ತನಾದವನಿಗೆ ಈ 'ಮುಕ್ತಿ ಲಲನೆ'ಯ ಸಂಗ

ಸಾಧ್ಯವಾಗುವುದು ಭಗವಂತನ ಅನುಗ್ರಹದಿಂದಲೇ. ಭಗವಂತನ ಲೀಲಾವಿನೋದಗಳನ್ನು ಅರಿತು ಉಭಯ ಭೇದಗಳನ್ನು ಮರೆಯಬಲ್ಲ ಹಂತ ತಲುಪಿದವನಿಗೆ ಈ ಮುಕ್ತಿ ಕಾಂತೆಯ ಸುಖ ದೊರಕುತ್ತದೆ.

ಜೀವನೂ ಶಿವನೂ ಬೇರೆಯಲ್ಲ. ಶಿವನ ಮಾಯಾಶಕ್ತಿಯು ಸೃಷ್ಟಿಸಿದ ಆವರಣದಿಂದಾಗಿ ತಾನು ಬೇರೆಯೆಂದು ತಿಳಿದುಕೊಳ್ಳುತ್ತಾನೆ. ಶಿವನ ಶಕ್ತಿಯೇ ಮಾಯೆಯಾಗಿ ಜೀವ-ಶಿವರಿಗೆ ಭೇದವನ್ನುಂಟು ಮಾಡುತ್ತದೆ. ಆದರೂ ಈ ಮಾಯೆಯ ನಿಜವಾದ ಅರಿವು ಉಂಟಾದ ಮೇಲೆ ಈ ಶಕ್ತಿಯೇ ಭಕ್ತಿಯಾಗಿ ಜೀವನನ್ನು ಶಿವನೊಡನೆ ಸಮರಸಗೊಳಿಸುತ್ತದೆ. ಜೀವನಿಗೆ ತಾನೇ ಶಿವನೆಂಬುದು ಅರಿವಾದಾಗ ಅವನಿಂದ ಬೇರೆಯಾಗಿ ಕಂಡ ಮಾಯಾಶಕ್ತಿಯು ಅವನಲ್ಲಿಯೇ ಲೀನವಾಗುತ್ತದೆ. ಈ ಸ್ವಸ್ವರೂಪ ದರ್ಶನವೇ ಮುಕ್ತಿ ಅಥವಾ ಮೋಕ್ಷ. ಜೀವನಿಗೆ ತಾನೇ ಶಿವನೆಂದು ತಿಳಿದ ಮೇಲೆ ತನ್ನದೇ ಶಕ್ತಿಯನ್ನು ತನ್ನೊಳಗೆ ಒಳಗೊಳ್ಳುವ ಕ್ರಿಯೆಯನ್ನೇ ಶರೀಫರು ರತಿಭಾವದಿಂದ ವರ್ಣಿಸಿರಬೇಕು" ಎಂಬ ಆರ್.ಪಿ. ಹೆಗಡೆಯವರ ಬಿಚ್ಚುನೋಟದಲ್ಲಿ ಪೌರಾಣಿಕ ಆಯಾಮವಿದೆ. ಜೀವ-ಶಿವ ಕಲ್ಪನೆಯನ್ನು ಇವರು ಸಾಂಖ್ಯದ ಪ್ರಕೃತಿ-ಪುರುಷ ಕಲ್ಪನೆಗೆ ಪರ್ಯಾಯವಾಗಿ ಬಳಕೆ ಮಾಡಿದ್ದಾರೆ. ಮಾನವ ದೇಹದಲ್ಲಿ ಪ್ರಕೃತಿ ನಿಯಮಕ್ಕೊಳಪಟ್ಟು ನಡೆಯುವ ದೇಹ ಮತ್ತು ಇಚ್ಚಾಶಕ್ತಿಯನ್ನು ಉಳ್ಳ ಮನಸ್ಸು - ಇವು ಸಾಂಖ್ಯದರ್ಶದಲ್ಲಿ ಪ್ರಕೃತಿ-ಪುರುಷ ಕಲ್ಪನೆಯಲ್ಲಿ ಪ್ರತೀಕಗಳಾಗಿವೆ. ಇಷ್ಟನ್ನು ಸ್ಪಷ್ಟಪಡಿಸಿಕೊಂಡರೆ, ಸಾಧನಾ ಮಾರ್ಗದಲ್ಲಿ ಅನುಸರಿಸುವ ನಿಗ್ರಹ ಮತ್ತು ಶಕ್ತಿ ಸಂಚಯ ಕಲ್ಪನೆಯ ಸಾಮಾಜಿಕ ವಾಸ್ತವ ಮತ್ತು ಅದರ ಇತರ ಆಯಾಮಗಳ ಉಪಯುಕ್ತತೆ ಅಂಶಗಳು ತೆರೆದುಕೊಳ್ಳುತ್ತವೆ. ದೇಹ ಮತ್ತು ಮನಸ್ಸುಗಳ ಪರಸ್ಪರ ಸಂಬಂಧ ಮತ್ತು ಅವನ್ನು ನಿಯಂತ್ರಣಕ್ಕೊಳಪಡಿಸದೆ ಹಿಡಿತದಲ್ಲಿಟ್ಟುಕೊಳ್ಳುವ ಸಾಮಾಜಿಕ ಉಪಯುಕ್ತತೆ ಮಾನವನ ನಾಗರಿಕ ನಡವಳಿಗೆ ಮತ್ತು ವ್ಯಕ್ತಿತ್ವದೊಂದಿಗೆ ಮೇಳಗೊಂಡಿವೆ.

ಅವೈದಿಕ ಸಾಂಖ್ಯದರ್ಶನದ ಮುಂದುವರೆದ ಹಂತ ಅವೈದಿಕ ನಾಥ ಪಂಥವಾಗಿರುವಂತಿದೆ. ಸಾಂಖ್ಯದಂತೆ ನಾಥವೂ ಮಾನವ ದೇಹದೊಳಗೆ ಜೀವ ಚೈತನ್ಯ ಶಕ್ತಿಯನ್ನು ಕಂಡರಸುತ್ತದೆ. ಶರೀಫರ 'ಗುಡಿಯ ನೋಡಿರಣ್ಣ' ಈ ವಿಚಾರವನ್ನು ಕಟ್ಟಿಕೊಡುತ್ತದೆ. ಇದರೊಂದಿಗೆ ಮಾನವ ದೇಹದಲ್ಲಿ ಸ್ಥಾವರ-ಜಂಗಮ ಕಲ್ಪನೆ ಕಟ್ಟಿಕೊಡುವ ಬಸವಣ್ಣನವರ 'ಉಳ್ಳವರು ಶಿವಾಲಯವ

ಮಾಡುವರು' ವಚನ ನೆನಪಿಗೆ ಬರುತ್ತದೆ. ಬಸವಣ್ಣನವರ ಸ್ಥಾವರ-ಜಂಗಮ ಕಲ್ಪನೆಯಂತೆಯೇ ಶರೀಫರು ದೇಹದ ಜೀವ ಚೈತನ್ಯ ತತ್ವವನ್ನು 'ಪರಾತ್ಪರ ಬ್ರಹ್ಮರೂಪ'ವೆಂದು ಬಣ್ಣಿಸಿದ್ದಾರೆ.

ಗುಡಿಯ ನೋಡಿರಣ್ಣ
ದೇಹದ ಗುಡಿಯ ನೋಡಿರಣ್ಣ
ಗುಡಿಯ ನೋಡಿರಿದು
ಪೊಡವಿಗೆ ಒಡೆಯನು
ಅಡಗಿಕೊಂಡು ಕಡುಬೆಡಗಿನೊಳಿರುತಿಹ
ಗುಡಿಯ ನೋಡಿರಣ್ಣ

ಶರೀಫರು ದೇಹವನ್ನು ಸಾಮಾನ್ಯತ್ವ, ಸಾಧನತ್ವ ಮತ್ತು ದೈವತ್ವದ ಭಾಗವಾಗಿ ಕಂಡಿದ್ದಾರೆ. ಇಂಥದೆ ಮತ್ತೊಂದು ರಚನೆ 'ಏನ ಕೊಡ ಏನ ಕೊಡವೆ'. ಮಾನವ ದೇಹವನ್ನು ಅಲ್ಲಿ ಗುಡಿಯೊಂದಿಗೆ ಹೋಲಿಸಿ ದೈವಾಂಶವನ್ನು ಕಂಡಿದ್ದರೆ ಇಲ್ಲಿ ಕೊಡದೊಂದಿಗೆ ಸಮೀಕರಿಸಿ ಸಾಮಾಜಿಕಾಂಶವನ್ನು ಮನಗಾಣಲಾಗಿದೆ.

ಏನ ಕೊಡ ಏನ ಕೊಡವ
ಹುಬ್ಬಳ್ಳಿ ಮಾಟ ಏನ ಚೆಂದುಳ್ಳ ಕೊಡವ
ತಿಕ್ಕಿಲ್ಲ ಬೆಳಗಿಲ್ಲ ತಳತಳ ಹೊಳಿತದ
ಕಂಚಿಂದಲ್ಲ ತಾಮ್ರದ್ದಲ್ಲ ಮಿರಿಮಿರಿ ಮಿಂಚತದ

ಆರು ಮಂದಿ ಅಕ್ಕತಂಗಿಯರನ್ನು ಮೀರಿ ಮಿಂಚಿದ ಕೊಡವೆಂಬ ಈ ದೇಹ ಷಟ್‌ಸ್ಥಲ ಅಥವಾ ಕಾಮಕ್ರೋಧ ಲೋಭ ಮೋಹ ಮದ ಮತ್ಸರ ಗುಣಗಳನ್ನು ಮೀರಿದುದೆಂದು ಹೇಳಿದೆ. ಮೂರು ಮಂದಿ ಮುತ್ತೈದೆಯರು ಅಂದರೆ ದೇಹದ ಸ್ಥೂಲಸೂಕ್ಷ್ಮ ಸಂಬಂಧಿತ ಕಾರಣ ಶರೀರಗಳು ಇದರ ಹಿಡಿತದಲ್ಲಿದ್ದಿತೆಂದು ಹೇಳಿದೆ. ಇಲ್ಲಿ ಮತ್ತೊಂದು ಎಚ್ಚರಿಕೆ ನೀಡಿದ್ದು, ಮಾನವದೇಹ ತನ್ನ ಆರು ಗುಣಗಳನ್ನು ಕಳೆದುಕೊಂಡು ಬಿಟ್ಟರೆ ಅಸ್ತಿತ್ವ ಕಳೆದುಕೊಳ್ಳುತ್ತದೆಂದು ಗಂಭೀರವಾಗಿ ಗಮನ ಸೆಳೆದಿದೆ. ಇದು ಈ ಗುಣಗಳನ್ನು ನಾಶಪಡಿಸದೆ ಹಿಡಿತದಲ್ಲಿ ಇಟ್ಟುಕೊಳ್ಳಬೇಕು ಎಂಬುದರ ಸೂಚನೆ. ಇಲ್ಲಿ ವೈದಿಕ ಶೈವ ಪಂಥ ಅವೈದಿಕ ನಾಥಪಂಥದ ವಿಚಾರ ಕಲ್ಪನೆಗಳಿಂದ ಪ್ರಭಾವಿತವಾಗಿ ಸ್ವೀಕರಿಸಿರುವುದನ್ನು ಪರೋಕ್ಷವಾಗಿ ಸ್ವೀಕರಿಸಿರುವುದನ್ನು ಪರೋಕ್ಷವಾಗಿ ಸೂಚಿಸಿದೆ. ದೇಹವನ್ನು ತೇರಿಗೆ ಸಂಕೇತಿಸಿರುವ ಇಂಥದೇ ಮತ್ತೊಂದು ರಚನೆ 'ತೇರನೆಳೆಯುತಾರೆ ತಂಗಿ'.

ತೇರನೆಳುಯುತಾರೆ ತಂಗಿ
ನೋಡಲಿಕ್ಕೆ ಹೋಗುನು ಬಾರೆ

ಸಾಧನತ್ವದಿಂದ ದೇಹ ದೈವೀ ನೆಲೆಗೆ ಅಥವಾ ಪೂಜ್ಯ ಭಾವನೆಗೆ ಒಳಗಾಗುತ್ತದೆ. ಆಗ ಅದು ಸಮುದಾಯದ ಭಾಗವಾಗುತ್ತದೆ ಎಂದಿಲ್ಲಿ ಸೂಚಿತವಾಗಿದೆ. ಸಾಧನತ್ವ ಕಳೆದುಕೊಂಡ ದೇಹ ಹೇಗೆ ಸಾಮಾನ್ಯತ್ವದಿಂದ ಅಧೋಗತಿಗೆ ಇಳಿಯುತ್ತದೆ ಎಂಬುದನ್ನು 'ಸೋರುತಿಹುದು ಮನೆಯ ಮಾಳಿಗೆ' ರಚನೆ ಕಾಣಿಸುತ್ತದೆ.

ಸೋರುತಿಹುದು ಮನೆಯ ಮಾಳಿಗೆ ಅಜ್ಞಾನದಿಂದ
ಸೋರುತಿಹುದು ಮನೆಯ ಮಾಳಿಗೆ

ಇದು ಬಸವಣ್ಣನ 'ಮನೆಯೊಳಗೆ ಮನೆಯಿಡೆಯನಿದಾನೊ ಇಲ್ಲವೊ' ವಚನನ್ನು ನೆನಪಿಸುತ್ತದೆ. ಇವೆರಡೂ ರಚನೆಗಳು ದೇಹದಲ್ಲಿ ಚೈತನ್ಯ ಶಕ್ತಿ ನೆಲೆಸಿರುವುದನ್ನು ಒಪ್ಪಿತ ನೆಲೆಯಲ್ಲಿ ಪ್ರಸ್ತಾಪಿಸಿಯೂ ಸಾಧನೆಗೆ ಒಳಗಾಗದ ಕ್ರಿಯಾಸೀನ ಸ್ಥಿತಿಯಲ್ಲಿ ನಿಷ್ಫಲತೆಗೆ ಸಂದಿರುವುದನ್ನು ಕಾಣಿಸುತ್ತದೆ. ಆದರೂ ಶರೀಫರ ಪದದಲ್ಲಿ ದೈವಾನುಕೃಪೆಯ ಭರವಸೆ, ಆಶಾವಾದಿತನ ವ್ಯಕ್ತವಾಗಿರುವುದು ವಿಶೇಷವಾಗಿದೆ.

ಹಾದಿ ತಪ್ಪಿದ ಸಾಧಕನ ಸರಿದಾರಿ ಯಾವುದರೆಂದು ಗುರುಸ್ಥಾನದಲ್ಲಿ ಒಬ್ಬ ಕುಳಿತು ಸೂಕ್ತ ಮಾರ್ಗದರ್ಶನ ಮಾಡುವ, ತಪ್ಪುಗಳನ್ನು ತಿದ್ದುವ ಕ್ರಮ 'ತರವಲ್ಲ ತಗಿ ನಿನ್ನ ತಂಬೂರಿ' ರಚನೆಯಲ್ಲಿದೆ.

ತರವಲ್ಲ ತಗಿ ನಿನ್ನ ತಂಬೂರಿ
ಸ್ವರ ಬರದೆ ಬಾರಿಸದಿರು ತಂಬೂರಿ
ಸರಸ ಸಂಗೀತದ ಕುರುಹುಗಳರಿಯದೆ
ಕರದೊಳ್ಹಿಡಿಬಾಡ ತಂಬೂರಿ

ಸಂಗೀತ ಶಾಧನೆಯ ಅಡೆತಡೆಗಳು, ಸುಗಮತೆಗಳು ಮೂಲಕ ಸಿದ್ಧಿ ಸಾಧನೆಯ ರೀತಿ-ನೀತಿ, ಇತಿ-ಮಿತಿಗಳನ್ನು ತಿಳಿಯಪಡಿಸಲಾಗಿದೆ. ಸಂಗೀತ ಸಾಧನೆ ಅನ್ಯವಿದ್ಯೆ ಸಾಧನೆಗಳಿಗಿಂತ ಭಿನ್ನವಾಗಿರುವ ಹಾಗೆಯೇ ಸಿದ್ಧಿ ಸಾಧನೆ ಕೂಡ ಲೌಕಿಕ ಸಾಧನಗಿಂತ ಬೇರೆ ಬಗೆಯದಾಗಿದೆ. ಸಾಧನೆಯ ದೀಕ್ಷೆ ತೊಡದ ಸಾಮಾನ್ಯರಿಗೆ ಸಾಧನೆ ದಕ್ಕುವಂತಹುದಲ್ಲ. ಸಾಧಕರು ಸಾಮಾನ್ಯರಂತೆ

ಅಪಸ್ವರ ಹೊರಡಿಸಿದರೆ 'ತತ್ವಬೋಧ ದೊಳಗಿದ್ದು ಭವಬಾಧೆಯನು ಗೆದ್ದ' ಹಾದಿಯಲ್ಲಿ ಮುಂದುರೆಯಲು ಸಾಧ್ಯವಿಲ್ಲ. ಹೀಗೆ ಸಾಧನೆಯ ವಿಧಿ ವಿಧಾನಗಳನ್ನು ಬಿಡಿಸಿಟ್ಟಿದೆ.

ಈ ವಿಧಿ ವಿಧಾನಗಳನ್ನು ಅನುಸರಿಸಿ ದೇಹ-ಜೀವ ತತ್ವ ಸಾಧನೆ ಮಾಡಿದರೆ ಬಿದಿರುಕೊಳಲು ಆಗುವಂತೆ ಸಾಮಾನ್ಯನು ಸಿದ್ಧಿ ಸಾಧನಕನಾಗಿ ಪರಿವರ್ತನೆ ಹೊಂದುತ್ತಾನೆಂದು 'ಬಿದಿರು ನಾನಾರಿಗಲ್ಲದವಳು' ರಚನೆ ಕಾಣಿಸುತ್ತದೆ.

ಬಿದಿರು ನಾನಾರಿಗಲ್ಲದಳು
ಹುಟ್ಟುತ ಹುಲ್ಲಾದೆ
ಬೆಳೆಯುತ ಮರವಾದೆ
ಸುಂದರ ಸ್ತ್ರೀಯರಿಗೆ ಕೇರುವ ಮರವಾದೆ
ಮುದುಕಗೆ ಬಡಿಗ್ಯಾದೆ
ಮುತ್ಯಾಗ ಬೆತ್ತವಾದೆ
ದೊಡ್ಡ ದೊಡ್ಡ ಮಹಾತ್ಮರಿಗ ಕೈಯೊಳಗೆ ಬೆತ್ತವಾದೆ

ಬಿದಿರು ಮಾನವ ದೇಹದ ಸಂಕೇತವಾಗಿದೆ. ಬಿದಿರಿನ ಸಾಮಾಜಿಕ ಉಪಯುಕ್ತತೆಯ ಮೂಲಕ ದೇಹದ ಉಪಯುಕ್ತತೆಯನ್ನು ಹೇಳಿದೆ. ಅಲ್ಲದೆ ಅನುಭಾವ ಸಾಧನೆಯಲ್ಲಿ ಇವೆರಡೂ ಸಲಕರಣವಾಗುವುದನ್ನು ಒತ್ತಿ ಹೇಳಿ ನಾಥ ಪಂಥದ ಸಾಧನೆಯ ಕಲ್ಪನೆಯನ್ನು ತನ್ನ ರಚನೆಯ ನೇಯ್ಗೆಯ ಭಾಗ ಮಾಡಿಕೊಂಡಿದೆ.

ಈ ಎಲ್ಲ ಅಂಶಗಳು ಶರೀಫರಲ್ಲಿ ಮುಖ್ಯವಾಗಿ ಕಾಣುವ ಮತಧರ್ಮಗಳಾಚೆಗಿನ ನಿಲುವಿಗೆ ಅವರು ಹುಟ್ಟಿದ ಪ್ರದೇಶದ ಸಾಮಾಜಿಕ ಮತ್ತು ರಾಜಕೀಯ ಪರಿಸರ ಮಾತ್ರ ಕಾರಣವಾಗಿರದೆ ಅದ್ವೈತ, ಶಾಕ್ತ, ನಾಥ, ಸಾಂಖ್ಯ ದರ್ಶನದ ಬೇರುಗಳು ಹೇಗೆ ಮೂಲಾಧಾರವಾಗಿವೆ ಎಂದು ಕಾಣಿಸುತ್ತವೆ.

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ದಾಖಲಾಗದೆ ಅವಜ್ಞೆಗೆ ಒಳಗಾಗಿರುವ ಕವಿಗಳಲ್ಲಿ ಶಿಶುನಾಳ ಶರೀಫರೂ ಒಬ್ಬರು. ಸೂಕ್ಷ್ಮವಾಗಿ ಗಮನಿಸಿದರೆ ಇಂಥ ಅಜ್ಞಾತ ಕವಿಗಳೇ ಕನ್ನಡ ಸಾಹಿತ್ಯವನ್ನು ಜನರಿಗೆ ತಲುಪಿಸಲು ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ್ದಾರೆ. ಶಿಷ್ಟ ಕವಿಗಳಿಂದ ಭಿನ್ನವಾಗಿ ನಿಂತ ಇವರು ಸಮಾಜದ ಮೂಲ ಆಶಯಗಳಿಗೆ ವಿಮುಖವಾಗುವವರ ವಿರುದ್ಧ ಬಂಡೆದ್ದು, ಅದನ್ನು ಸಾಹಿತ್ಯದಲ್ಲಿ ಅಭಿವ್ಯಕ್ತಿಸಿ, ಜನರ ನಡುವೆ ಅವು ಓಡಾಡುವಂತೆ ಮಾಡಿದರು. ಆ ಮೂಲಕ

ಪ್ರಾದೇಶಿಕವಾಗಿ ತಮ್ಮ ಪ್ರಭಾವವನ್ನು ಬೀರಿದರು. ಇವರಿಗೆ ರಾಜಮಹಾರಾಜರ ಹಂಗಿರಲಿಲ್ಲ. ಸಮಾಜದ ಭಯ ಸನಿಹ ಸುಳಿಯಲಿಲ್ಲ; ಜ್ಞಾನಕ್ಕೆ ಬರವಿರಲಿಲ್ಲ; ಅಭಿವ್ಯಕ್ತಿಗೆ ಕೊನೆಯಿರಲಿಲ್ಲ; ತಮ್ಮ ಗುರಿ ಮತ್ತು ದಾರಿಯನ್ನು ತಾವೇ ಕಂಡುಕೊಂಡು, ತಮ್ಮನ್ನು ತಾವೇ ಅರಿತುಕೊಂಡು, ತಮಗಿಷ್ಟವಾದ ದೇವರಿಗೆ ಭಕ್ತಿಯನ್ನು ಪ್ರಕಟಮಾಡುತ್ತ, ಮನದ ತಳಮಳ, ತುಮುಲ, ಚಿಂತೆ ಸಿಟ್ಟುಸೆಡವು, ಅಸಹಾಯಕತೆಗಳನ್ನು ಗುರು–ದೈವದಲ್ಲಿ ನಿವೇದಿಸಿಕೊಳ್ಳುತ್ತ, ಚಿಂತನೆಯ ಆಳಕ್ಕಿಳಿದು, ಪಡೆದ ಅನುಭವದ ಮೂಸೆಯಲ್ಲಿ ಅವುಗಳನ್ನು ಮಸೆದು ಸಾಹಿತ್ಯ ಕೃಷಿಯಲ್ಲಿ ತೊಡಗಿದರು. ಅದು ವಚನವಾಯಿತು, ಕೀರ್ತನೆಯಾಯಿತು, ತತ್ವಪದವಾಯಿತು, ಅನುಭವದ ಅಭಿವ್ಯಕ್ತಿಯಾಗಿ ಹರಳುಗೊಂಡಿತು.

ಮೇಲುನೋಟಕ್ಕೆ ಅನುಭಾವಿಗಳು ತಮ್ಮನ್ನು ಒಂದು ದೇವರಿಗೆ ಒಳಗು ಮಾಡಿಕೊಂಡಂತೆ ಕಂಡುಬಂದರೂ, ಆಂತರ್ಯದಲ್ಲಿ ಅದನ್ನೂ ಮೀರಿ ನಿಲ್ಲುವ ದಿಟ್ಟತನ ಅವರದಾಗಿತ್ತು. ತಾವು ಕಂಡುಕೊಂಡ ಸತ್ಯಕ್ಕೆ ಸಾಹಿತ್ಯದ ಸ್ಪರ್ಷವನ್ನು ನೀಡುವಾಗ ಶೀಲ–ಅಶ್ಲೀಲಗಳ ಹಂಗನ್ನು ಹಲವರು ಹರಿದುಕೊಂಡಿರುವುದನ್ನು ಗುರುತಿಸಬಹುದಾಗಿದೆ. ವ್ಯವಸ್ಥೆಯಲ್ಲಿನ ಹುಳುಕುಗಳಿಗೆ ಪ್ರತಿಭಟನೆಯ ದನಿಯಾಗುವ ನೆಲೆಯಲ್ಲಿ ಅವರ ಕೆಲ ರಚನೆಗಳು ನಿಲ್ಲುತ್ತವೆ. ಮೌಲ್ಯ ಪ್ರತಿಪಾದನೆಗೆ ಒತ್ತು ನೀಡುತ್ತಲೇ ಅಧಿಕಾರ ಕೇಂದ್ರಗಳಿಂದ ದೂರ ಉಳಿಯುವ ಅನುಭಾವ ಪರಂಪರೆ ಬದುಕನ್ನು ನಿರಾಕರಿಸಲಿಲ್ಲ. ಕೌಟುಂಬಿಕ ಸಂಸರ್ಗದಲ್ಲಿದ್ದುಕೊಂಡೇ ಅನುಭಾವದ ಅಡುಗೆಯನ್ನು ಮಾಡಿ ಸಾಮಾಜಿಕರಿಗೆ ಜ್ಞಾನದ ಊಟ ಬಡಿಸಿದ ಇವರು ಆ ಕಾರ್ಯವನ್ನು ನಿರ್ವಂಚನೆಯಿಂದ ಮಾಡಿದ್ದಾರೆ. ಜನಪದರ ನಾಡಿಮಿಡಿತದ ಶೃತಿಯನ್ನಿಡಿದು ಅವರನ್ನು ತಮ್ಮತ್ತ ಸೆಳೆದು ವಿಚಾರ ಪ್ರಚಾರ ಕಾರ್ಯದಲ್ಲಿ ತೊಡಗಿಕೊಂಡಿದ್ದರು. ತಮ್ಮನ್ನು ಬಿಂಬಿಸಿಕೊಳ್ಳು ಅನುಭಾವಿಗಳು ಯಾರ ಹಂಗಿಗೂ ಒಳಗಾಗಲಿಲ್ಲ ಎಂಬುದು ಗಮನಾರ್ಹ ಸಂಗತಿಯಾಗಿದೆ.

ಕರ್ನಾಟಕದ ಇತಿಹಾಸದಲ್ಲಿ ಹತ್ತೊಂಭತ್ತನೆಯ ಶತಮಾನವು ರಾಜಕೀಯ ದಾಸ್ಯದಲ್ಲಿದ್ದುದರಿಂದ ಸಾಹಿತ್ಯ ಕೃಷಿಗೆ ನೀರು, ಗೊಬ್ಬರಗಳಿಲ್ಲದೆ ಸೊರಗುವ; ಪ್ರತಿಭಾ ಸಂಪತ್ತು ನರಳುವ ಸ್ಥಿತಿಗೆ ದೂಡಲ್ಪಟ್ಟಿತ್ತು. ಇದರ ಜೊತೆಗೆ ಆಧುನಿಕತೆಯ ಗಾಳಿ ಬೀಸಲಾರಂಭಿಸಿ ಸಾಮಾಜಿಕ, ರಾಜಕೀಯ, ಧಾರ್ಮಿಕ ಶೈಕ್ಷಣಿಕ, ಔದ್ಯಮಿಕ, ಆರ್ಥಿಕ ರಂಗಗಳು ತಮ್ಮ ಮೂಲ ಆಶಯಗಳಿಗೆ ಹೊಸತನಗಳನ್ನು ಪಡೆದುಕೊಳ್ಳಲು ಸನ್ನದ್ಧವಾಗಿದ್ದವು. ಸಾಹಿತ್ಯದಲ್ಲೂ ಸಂಕ್ರಮಣ ಸ್ಥಿತಿ

ನಿರ್ಮಾಣಗೊಂಡು ನವೀನತೆಗೆ ಇಂಬುಕೊಡಲು ಸಜ್ಜುಗೊಂಡಿತ್ತು. ಇಂಥ ಸಂದರ್ಭದಲ್ಲಿ ಶಿಶುನಾಳ ಶರೀಫರು ಕರ್ನಾಟಕದಲ್ಲಿ ಕಾಣಿಸಿಕೊಂಡರು. ಕನ್ನಡಿಗರು ಪ್ರಾಚೀನ ಕಾಲದಿಂದ ಧರ್ಮ ಸಮನ್ವಯತೆಯನ್ನು ಕಾಪಾಡಿಕೊಂಡು ಬಂದಿರುವರೆಂದು ತಿಳಿಯುತ್ತದಾದರೂ ಪ್ರಭುತ್ವಕ್ಕೆ ಒಪ್ಪಿತವಾಗುವ ಧರ್ಮವೇ ಪ್ರಜೆಗಳ ಧರ್ಮವಾಗಿ ಪರಿಣಮಿಸುತ್ತಿದ್ದ ನಿದರ್ಶನಗಳೂ ನಮಗೆ ದೊರಕುತ್ತವೆ. ಶಿಶುನಾಳ ಶರೀಫರು ಹುಟ್ಟಿನಿಂದ ಮುಸ್ಲಿಂರಾದರೂ ತಾವಿದ್ದ ಪರಿಸರಕ್ಕೆ ಹೊಂದಿಕೊಂಡು, ತಮ್ಮ ಮೂಲಧರ್ಮಕ್ಕೂ ಭಿನ್ನವಾದ ಧಾರ್ಮಿಕ ಆಚರಣೆಗಳಿಗೆ ಒಗ್ಗಿಕೊಂಡು ಧರ್ಮ ಹಾಗೂ ಕೋಮು ಸಹಿಷ್ಣುತೆಗೆ ಸಾಕ್ಷಿಯಾಗಿ ನಿಂತರು. ಜನತೆಯ ಕಣ್ಣಿನಲ್ಲಿ ಸಂತರಾಗಿ ಕಾಣಿಸಿಕೊಂಡ ಶರೀಫರು ಸಾಮಾನ್ಯತ್ವವನ್ನು ಮೀರಿ ನಿಂದರು. ಅವರ ಈ ನಡವಳಿಕೆಗೆ ಅವರ ಗುರುವಾದ ಗೋವಿಂದಭಟ್ಟರು ಪ್ರಮುಖ ಕಾರಣರಾಗುತ್ತಾರೆ. ಗೋವಿಂದ ಭಟ್ಟರೂ ತಮ್ಮ ಮೂಲ ಧಾರ್ಮಿಕ ನಂಬಿಕೆಗಳಿಗೆ ವಿರುದ್ಧವಾದ ಜಾತ್ಯಾತೀತ ಧೋರಣೆಯನ್ನು ಹೊಂದಿದ್ದರಿಂದಲೇ ಶಿಷ್ಯನನ್ನು ಬೆಳೆಸುವಾಗ ಅವನ ಹಿನ್ನೆಲೆಯಲ್ಲಿ ನೋಡದೆ ಅವನಲ್ಲಿರುವ ವಿದ್ವತ್ತಿಗೆ ಮನ್ನಣೆಕೊಟ್ಟಿದ್ದರು. ಈ ದೃಷ್ಟಿಯಿಂದ ಗುರು-ಶಿಷ್ಯರಿಬ್ಬರೂ ಸಮಾನ ಮನಸ್ಕರಾಗಿ ತಮಗೆ ಸರಿಕಂಡದ್ದನ್ನು ಮಾಡಿದರೆನ್ನಬಹುದು.

ಹನ್ನೆರಡನೆಯ ಶತಮಾನದ ಶಿವಶರಣರು ತಮ್ಮ ಅನುಭಾವದ ಅರಿವಿನಿಂದ ಸಮಾಜದ ಮೇಲೆ ಪ್ರಭಾವ ಬೀರುವಷ್ಟು ಪ್ರಬಲರಾಗಿದ್ದರು. ಅವರ ವಚನಗಳು ಸಾಮಾನ್ಯರಿಗೆ ದಾರಿದೀಪವಾಗಿದ್ದವು. ಅವರ ನಂತರ ಬಂದ ಹರಿದಾಸರು ತಮ್ಮ ಕೀರ್ತನೆಗಳ ಮೂಲಕ ಭಕ್ತಿಯನ್ನು ಜನ ಸಂಪರ್ಕದ ಶಕ್ತಿಯನ್ನಾಗಿಸಿಕೊಂಡು ಆಧ್ಯಾತ್ಮಿಕ ಔನ್ನತ್ಯಕ್ಕೇರಲು ಶ್ರಮಿಸಿದರು. ಇವರ ಕಾರ್ಯಕ್ಷೇತ್ರವೂ ಸಮಾಜವೇ ಆಗಿತ್ತು. ಅದೇ ಜಾಡನ್ನಿಡಿದು ಸಾಗಿದ ಶರೀಫರ ಬದುಕು ಒಂದು ನೆಲೆಯಲ್ಲಿ ಸಂತರಿಗೆ ಸಮನಾಯಿತು. ಶರಣರಂತೆ, ಹರಿದಾಸರಂತೆ ಸಾಮೂಹಿಕವಾಗಿ ಆಧ್ಯಾತ್ಮಿಕ ಚಿಂತನೆಗೆ ಸಂಘಟನಾತ್ಮಕವಾಗಿ ಇವರು ತೊಡಗದಿರಬಹುದು; ಆದರೆ ಜನರ ಮನದಾಳದಲ್ಲಿ ಶರೀಫರ ಗೀತೆಗಳು ನೆಲೆಗೊಂಡವು. ಈ ಹಿನ್ನೆಲೆಯಲ್ಲಿ ನೋಡಿದರೆ ವಚನಕಾರರು ಮತ್ತು ಕೀರ್ತನಕಾರರು ಯಾವುದನ್ನು ಸಾಮೂಹಿಕವಾಗಿ ಸಾಧಿಸಿದರೋ ಅದನ್ನು ಶರೀಫರ ಏಕಾಂಗಿಯಾಗಿ ಮಾಡಿ ತೋರಿಸಿದರು. ಜನಮುಖಿ ಚಿಂತನೆಯ ಆಳಕ್ಕಿಳಿದು ಚಿಕಿತ್ಸಕನಂತೆ ಸಾಮಾನ್ಯ ಸಂಗತಿಯಲ್ಲಿ ಅಸಾಮಾನ್ಯ, ಅದ್ಭುತ ಅರ್ಥಸ್ಫುರಿಸುವ ಗೇಯ ಗೀತೆಗಳನ್ನು ಕಟ್ಟಿಕೊಟ್ಟಿರುವ ಶರೀಫರ ಚಿಂತನೆಗಳು ಧರ್ಮದ ಚೌಕಟ್ಟನ್ನು ಮೀರುತ್ತವೆ. ಮಾನವೀಯ ಅನುಕಂಪ; ಅಂತಃಕರಣಗಳು ಗಟ್ಟಿಗೊಂಡಂತೆ

ಜನ ಶರೀಫರನ್ನು ತಾವಾಗಿಯೇ ಒಪ್ಪಿಕೊಂಡರು. ಅವರ ಸಾಹಿತ್ಯವನ್ನು ಅಪ್ಪಿಕೊಂಡರು. ದೇವರು, ಧರ್ಮಗಳ ಹೆಸರಿನಲ್ಲಿ ಪರಸ್ಪರ ಅಪನಂಬಿಕೆ, ಅನುಮಾನ, ದ್ವೇಷ, ಅಸೂಯೆಗಳು ಅಧಿಕಗೊಂಡು ಒಂದು ಧರ್ಮದವರು ಇನ್ನೊಂದು ಧರ್ಮದವರ ಮೇಲೆ ಕತ್ತಿಮಸೆಯುವ ವರ್ತಮಾನಕ್ಕೆ ಶರೀಫರ ಆಲೋಚನೆಗಳು ಪರಿಣಾಮಕಾರಿಯಾಗಿ ಒಪ್ಪುತ್ತವೆ.

ಗೋವಿಂದಭಟ್ಟರ ಮಾನಸಪುತ್ರನಾಗಿ ಮೆರೆದ ಶಿಶುನಾಳ ಶರೀಫರು ಜನ್ಮದಿಂದ ಮುಸ್ಲಿಂ, ಆಚರಣೆಯಿಂದ ಹಿಂದೂ, ಚಿಂತನೆಯಿಂದ ಅನುಭಾವಿ, ವೃತ್ತಿಯಿಂದ ಶಿಕ್ಷಕ, ಪ್ರವೃತ್ತಿಯಿಂದ ಸ್ವಭಾವ ಚಿಕಿತ್ಸಕ, ಶ್ರುತಿ ಹಿಡಿದ ಗಾಯಕ, ಮತ ಮೀರಿದ ನಾಯಕನಾಗಿ ಬಾಳಿದ ಅಪರೂಪದ ಸಂತಕವಿ. ಗ್ರಾಮೀಣರ ಆಂತರ್ಯವನ್ನರಿತು, ದೇಶೀ ಛಂದಸ್ಸಿನ ಭಾವಬಂಧುರವನ್ನು ದುಡಿಸಿಕೊಂಡು ಆಪ್ತ ಹಾಡುಗಳನ್ನು ರಚಿಸಿ ಚಿಂತನಶೀಲ ಸಾಹಿತಿಯಾದರು. ಧರ್ಮಾಂಧತೆಯ ಪಿತ್ತವನ್ನು ನೆತ್ತಿಗೇರಿಸಿಕೊಂಡು ಸಮಾಜದ ಶಾಂತಿಗೆ ಭಂಗ ತರಲು ಹವಣಿಸುವ ಹಿಸುಣರಿಗೆ ಶರೀಫರಂಥವರು ಆದರ್ಶವಾದರೆ ಮನದ ಕಲ್ಮಶ ಕಳೆದು ಅರಿವಿನ ಅಮೃತ ಸ್ಫುರಿಸಬಹುದು.

ಗುರುವಿನಿಂದ ಆಶೀರ್ವಾದ ಪಡೆದ ಸಂದರ್ಭವನ್ನು ಶರೀಫರು ತಮ್ಮ ಗೀತೆಗಳಲ್ಲಿ ಅರ್ಥವತ್ತಾಗಿ ಚಿತ್ರಿಸಿದ್ದಾರೆ. ಗುರುವಿಗೂ ಶಿಷ್ಯನಿಗೂ ಅಂಟಿದ ನಂಟನ್ನು ಕಂಡು ಸಾಮಾಜಿಕರಿಗೆ ಬೆರಗು. ಕೆಲವರಿಗಂತೂ ಅವರಿಬ್ಬರನ್ನು ಕೆಣಕಲು ಅದು ವಸ್ತುವೂ ಆಯಿತು. ಯಾವುದೇ ಪರಿಸ್ಥಿತಿಯನ್ನು ಎದುರಿಸಲು ಗುರು-ಶಿಷ್ಯರಿಬ್ಬರೂ ಸಿದ್ಧರಿದ್ದರು, ಎದುರಿಸಿದರು. ಗೋವಿಂದಭಟ್ಟ ತನ್ನ ಒರಟು ಸ್ವಭಾವದಿಂದಲೇ ಶಿಷ್ಯನನ್ನು ಕಂಡ ಕಂಡವರೊಡನೆ ಅಲೆದಿ ಧರ್ಮಲಂಡರ ಜತೆ ಯಾಕೆ ಬೆರೆದಿ? ಎಂದು ಪ್ರಶ್ನಿಸುವ ಹಿಂದಿನ ರಹಸ್ಯವನ್ನು ಶಿಷ್ಯನಾದ ಶರೀಫ ಇತ್ಯಾತ್ಮಕವಾಗಿ ಸ್ವೀಕರಿಸುವುದು ಗುರು-ಶಿಷ್ಯರ ಬೌದ್ಧಿಕ ಮಟ್ಟಕ್ಕೆ ಹಿಡಿದ ಕನ್ನಡಿಯಾಗಿದೆ. ಶಿಷ್ಯನೂ ಕಡಿಮೆಯೇನಲ್ಲ "ಗಂಡೆಂದರೀತನೇ ನೀವಲ್ಲ ಛೀ ಎಂದು ಹಾಕಿದ ಜನಿವಾರವ' ಎಂದು ಗುರುವಿನ ಧಾಟಿಯಲ್ಲೇ ಹೇಳುತ್ತಾನೆ. ಗುರುವಿನ ಗುಣವನ್ನು ಸೂಕ್ಷ್ಮವಾಗಿ ಅವಲೋಕಿಸಿದ್ದ ಶರೀಫರು ಸಂಪೂರ್ಣವಾಗಿ ತಮ್ಮನ್ನು ಗುರುವಿಗೆ ಸಮರ್ಪಿಸಿಕೊಂಡಿದ್ದರು. 'ಸೊಲ್ಲು ಸೊಲ್ಲಿಗೆ ಬೈದು ನನ್ನ ಎಲ್ಲಿಗ್ಹೋಗದ್ಹಾಂಗ ಮಾಡಿಟ್ಟ ಕಾಲ್‌ಮುರಿದುಬಿಟ್ಟ' ಎನ್ನುವ ಶರೀಫರು ಗುರುವನ್ನು ಹೊರತು ಅನ್ಯಮಾರ್ಗವಿಲ್ಲ ಎಂದು ಸಂಪೂರ್ಣವಾಗಿ ನಂಬಿಕೊಂಡಿದ್ದರು. ಎಲ್ಲಾ ಹಂಗುಗಳನ್ನು ಹರಿದುಕೊಳ್ಳುವ ಉಪಾಯವನ್ನು ತಿಳಿಸಿದ ಗೋವಿಂದಭಟ್ಟರು ಶರೀಫರಿಗೆ ಒತ್ತಾಯಪೂರ್ವಕ ಗರುವಾಗಿರಲಿಲ್ಲ ಬದಲಾಗಿ ಶಿಷ್ಯನೇ

ಒಪ್ಪಿ ಗುರುವನ್ನಾಗಿ ಸ್ವೀಕರಿಸಿದ ಎಂಬುದು ಶರೀಫರ 'ನನ್ನೊಳಗ ನಾ ತಿಳಕೊಂಡೆ ನನಗೆ ಬೇಕಾದ ಗಂಡನ್ನ ಮಾಡಿಕೊಂಡೆ' ಎನ್ನುವ ಸಾಲಿನಲ್ಲಿ ವ್ಯಕ್ತವಾಗಿದೆ. ಸಮಾಜದಲ್ಲಿ ಗುರುವಿನ ಸ್ಥಾನ ದೊಡ್ಡದೆಂದು ನಂಬಿದ್ದ ಅವರ ಗುರಿ ಸಾಧನೆಯ ಗುರುವನ್ನು ಊರುಗೋಲಾಗಿ ಮಾಡಿಕೊಂಡರು.

ವೃತ್ತಿಯಾಧಾರಿತ ಜಾತಿಗಳ ಮೂಲಕವೇ ಆಧ್ಯಾತ್ಮದ ಕಡೆಗೆ ಹೊರಳಬಹುದೆಂದು ಶರೀಫರು ಪ್ರತಿಪಾದಿಸಿದ್ದಾರೆ. ಕುರುಬ, ಕುಂಬಾರ, ರೈತ, ದರ್ಜಿ ಮುಂತಾದ ಜಾತಿಗಳು ಶರೀಫರ ಸಾಹಿತ್ಯದಲ್ಲಿ ವರ್ಣನೆಗೊಂಡಿದೆ. ವೃತ್ತಿ ಗೌರವ ಶರೀಫರಲ್ಲಿತ್ತು. ಯಾವ ವೃತ್ತಿಯೂ ಮೇಲು ಅಲ್ಲ; ಕೀಳೂ ಅಲ್ಲ ಎಂಬ ಸಂಗತಿಯನ್ನು ಅವರು ಅರ್ಥಮಾಡಿಕೊಂಡಿದ್ದರು. ವೃತ್ತಿನಿರತರಲ್ಲಿ ಸಾಮರಸ್ಯ ತರುವಂತೆ ಅವರನ್ನು ಅವರನ್ನು ಶರೀಫರು ಪದ ಕಟ್ಟಿ ಹಾಡಿದ್ದಾರೆ. ಶರೀಫರ ಧರ್ಮ ಸಮನ್ವಯ ದೃಷ್ಟಿ ಆ ಕಾಲದಲ್ಲಿ ಕೆಲವರಿಗೆ ಹಿಡಿಸದಿರಬಹುದು. ಆದರೆ ಇತರರಿಗಾಗಿ ಬಾಳುವುದಕ್ಕಿಂತ ತನಗೆ ಸರಿ ಕಂಡಂತೆ ಬದುಕುವುದನ್ನು ಅರಿತಿದ್ದ ಅವರು ಯಾವ ಧರ್ಮ, ಜಾತಿ, ಪಂಥಕ್ಕೂ ಜೋತುಬೀಳದೆ ತಮ್ಮದೇ ಆದ ನಿಲುವನ್ನು ವ್ಯಕ್ತಮಾಡಿದ್ದರು. 'ಬೋಕಿಯೊಳಗೆ ಮೂರು ಲೋಕ ಹುಟ್ಟಿತ್ತೋ ಆ ಕುಲ ಈ ಕುಲ ಎಲ್ಲಿತ್ತೋ? ಎಂದು ಪ್ರಶ್ನಿಸುವ ಅವರು 'ಬಲದಲವರಾದರೆ ಹೇಳಿರಿ ತಿಳಿದು ಮುಲ್ಲಾನ ಮಸೀದಿ ಎಲ್ಲಿತ್ತೋ?' ಎನ್ನುವ ಮೂಲಕ ಎಲ್ಲಾ ಆಚರಣೆಗಳು ಮಾನವನಿಂದಲೇ ರೂಪಿತವಾದದೆಂದು ಪ್ರತಿಪಾದಿಸುತ್ತಾರೆ. ಶರೀಫರನ್ನು ಒಪ್ಪಿದವರಷ್ಟೇ ಪ್ರಶ್ನಿಸುವವರೂ ಇದ್ದರೆಂಬುದು ಅವರ ಸಾಹಿತ್ಯವನ್ನು ಅವಲೋಕಿಸಿದಾಗ ತಿಳಿದುಬರುತ್ತದೆ. ಪ್ರಶ್ನೆಗಳ ಮೂಲಕ ಅವರನ್ನು ಕಟ್ಟಿಹಾಕಲು ಹವಣಿಸುತ್ತಿದ್ದರೆಂದು ಕಾಣುತ್ತದೆ. ಆದರೆ ಅದು ಸಾಧ್ಯವಾಗುತ್ತಿರಲಿಲ್ಲ. 'ನಾನೂ ದೇವರೇ?' ಎಂದು ಯಾರೋ ಕೇಳಿದ ಪ್ರಶ್ನೆಗೆ ಶರೀಫರು "ಹೌದಪ್ಪಾ ಹೌದೋ ನೀನು ದೇವರಾ ನಿಂದ ನೀ ತಿಳಿದರ ನಿನಗಿಲ್ಲೇ ದೂರಾ" ಎಂದು ಪದ್ಯದ ರೂಪದಲ್ಲಿ ಉತ್ತರಿಸುತ್ತಾರೆ. ಆತ್ಮವೇ ಪರಮಾತ್ಮ ಎಂಬ ನಂಬಿಕೆ ಶರೀಫರಲ್ಲಿ ಬಲವಾಗಿತ್ತೆಂದು ಹೇಳಬಹುದು.

ಶಿಶುನಾಳ ಶರೀಫರು ಸಂತ ಶ್ರೇಷ್ಠರಾಗಿದ್ದರು. ಅವರ ಜೀವನದ ಪರಮಗುರಿ ಸಮಾಜವನ್ನು ತಿದ್ದುವುದಾಗಿತ್ತು. ತಮ್ಮ ಕಣ್ಣ ಮುಂದೆ ನಡೆಯುವ ತಪ್ಪುಗಳಿಗೆ ತಕ್ಷಣ ಪ್ರತಿಕ್ರಿಯೆ ನೀಡುತ್ತಿದ್ದರು. ತಪ್ಪನ್ನು ತಪ್ಪೆಂದು ನಿರ್ಭಿಡೆಯಿಂದ ಹೇಳುವ ಗುಣ ಅವರಲ್ಲಿತ್ತು. ಇಂಥ ಸ್ವಭಾವದಿಂದ ನಾನು ಯಾರ ವಿರೋಧವನ್ನಾದರೂ ಕಟ್ಟಿಕೊಳ್ಳಬೇಕಾಗಬಹುದೆಂಬ ಭಯ ಅವರನ್ನು ಕಾಡಲಿಲ್ಲ. ಶರೀಫರಿಗೆ ಎಲ್ಲರೂ ಗೌರವ ನೀಡುತ್ತಿರಲಿಲ್ಲ ಎಂಬುದು ಅವರ ಸಾಹಿತ್ಯದಲ್ಲಿ ಸ್ಪಷ್ಟವಾಗುತ್ತದೆ. ಇವರ ಮಾತಿಗೆ

ಮನ್ನಣೆ ನೀಡುವವರೂ ಇದ್ದರು. ಶರೀಫರನ್ನು ಕುಳಿತುಕೊಳ್ಳಲೂ ಬಿಡದೆ 'ಎದ್ದು ಹೋಗು' ಎನ್ನುವವರಿಗೆ, "ಎದ್ದು ಹೋಗತೀನಿ ತಾಳೆಲೋ ಛೀ ಬುದ್ಧಿಗೇಡಿ ಎದ್ದು ಹೋಗುತೇನಿ ತಾಳೆಲೊ' ಎಂದು ಮುಖಕ್ಕೆ ಹೊಡೆದಂತೆ ಹೇಳುತ್ತಲೇ, 'ಹಟದಿ ನಮ್ಮನ್ಯಾಕೆ ನೋಡತಿ ಒಣ ಕಟಗಿಯಂತೆ ಸೆಟಿದು ನಿಂತು ಮಾತಾಡವೆ? ಚಿಟಕಿ ಹೊಡೆದು ಬೊಟ್ಟ ಕುಣಿಸಿ ಕಠಿಣ ಕಲಹದ ಗುಣವ ವೆಲರೆಸಿ ಕಟಕಿದೋಷ ತಟ್ಟಿ ತೋ ಹಿರಿ ಮಠದ ಪಾದಸಾಕ್ಷಿ' ಎಂದು ನಿಂದಿಸುತ್ತಾರೆ. ಸಮಾಜವನ್ನು ತಿದ್ದುವುದೆಂದರೆ ವ್ಯಕ್ತಿಯಲ್ಲಿನ ದುರ್ಗುಣಗಳನ್ನು ದೂರ ಮಾಡುವುದೆಂದು ಅರಿತಿದ್ದ ಶರೀಫರು ಅದರಿಂದ ತಮಗಾಗುವ ಮುಜುಗರ, ನಿಂದೆಗಳಿಗೆ ಮನಸ್ಸನ್ನು ವಿಕಾರ ಮಾಡಿಕೊಳ್ಳುತ್ತಿರಲಿಲ್ಲ. ತಮಗೊದಗಿದ ದಂಡುಗಗಳಿಗೆ ಶರೀಫರು ಎಂದೂ ಬೆನ್ನು ತಿರುಗಿಸಲಿಲ್ಲ. ಎಲ್ಲವನ್ನೂ ಸಕಾರಾತ್ಮಕವಾಗಿ ಸ್ವೀಕರಿಸಿ ಅವುಗಳನ್ನು ಎದುರಿಸಲು ಸಜ್ಜಾಗುತ್ತಿದ್ದರು. 'ಎಂಥೆಂಥಾದೆಲ್ಲನೂ ಬರಲಿ ಚಿಂತೆ ಎಂಬುಉ ಸಾವಿರ ಇರಲಿ ಎಂತೇನೆಂಬುದೆ ತೋರುವ ಗುರುವ ಅಂತಃಕರಣ ತಪ್ಪದೆ ಕಾಯಲಿ' ಎನ್ನುವ ನಮ್ರತೆ ಅವರಲ್ಲಿತ್ತು.

ತಮ್ಮ ಸುತ್ತಮುತ್ತಲಿನ ಆಗುಹೋಗುಗಳನ್ನು ಸೂಕ್ಷ್ಮವಾಗಿ ಗಮನಿಸುತ್ತದ್ದ ಶರೀಫರು ಹೊಸದನ್ನು ಕಂಡಾಗ ವಿಸ್ಮಯ ಪಡುತ್ತಿದ್ದರು. ಹುಬ್ಬಳ್ಳಿಗೆ ಗಿರಣಿ ಬಂದಾಗ ಜನರು ಹಿಂಡು ಹಿಂಡಾಗಿ ನೋಡಿ ಬರುತ್ತಿದ್ದರು. ಶರೀಫರೂ ಕುತೂಹಲದಿಂದಲೇ ನೋಡಿ, ಆಧುನಿಕ ಯಂತ್ರಕ್ಕೂ ಆಧ್ಯಾತ್ಮಕ್ಕೂ ಸಂಬಂಧವನ್ನು ಕಲ್ಪಿಸಿ ಪದಕಟ್ಟಿ ಹಾಡಿದ್ದಾರೆ. ಸೂಜಿಯ ಬೆಸೆಯುವ ಕ್ರಿಯೆಯೂ ಅವರಿಗೆ ಇದೇ ಬಗೆಯ ನಂಬಿಕೆಗೆ ಕಾರಣವಾಗಿದೆ. ಶರೀಫರು ಜೀವಿಸಿದ್ದ ಕಾಲಘಟ್ಟದಲ್ಲಿ ಬ್ರಿಟಿಷರ ಆಳ್ವಿಕೆಯಿತ್ತು. ಅವರ ಆಡಳಿತವನ್ನು ಟೀಕಿಸಿ ಸಾಹಿತ್ಯ ರಚನೆಗೆ ಶರೀಫರು ಮುಂದಾದಂತೆ ಕಂಡು ಬರುವುದಿಲ್ಲ. ಆ ಬಗ್ಗೆ ಶರೀಫರು ಚಿಂತಿಸಿದಂತೆ ಕಾಣುವುದಿಲ್ಲ. ಶರೀಫರು ಸಾಮಾನ್ಯರಂತೆ ಎಲ್ಲರೊಡನೆ ಬೆರೆಯುತ್ತಿದ್ದುದ್ದರಿಂದ ಜನರ ದುಃಖದುಮ್ಮಾನಗಳು ತಿಳಿಯುತ್ತಿದ್ದವು. ಸ್ವತಃ ಅವುಗಳನ್ನು ಉಂಡವರಾಗಿ ತಮ್ಮ ಅನುಭವಗಳನ್ನೂ ಅವುಗಳೊಡನೆ ಸಮೀಕರಿಸುತ್ತಿದ್ದರು. ಸಮಕಾಲೀನ ಸಮಾಜದಲ್ಲಿ ಪುರುಷರಿಗೆ ಮಾತ್ರ ಮನ್ನಣೆ ನೀಡುತ್ತಿದ್ದುದ್ದನ್ನು ಸೂಕ್ಷ್ಮವಾಗಿ ಗಮನಿಸಿದ ಶರೀಫರು ಪುರುಷರನ್ನು ಟೀಕಿಸುವ ಗೊಡವೆಗೆ ಹೋಗದೆ, ಮಹಿಳೆಯ ಸಾಂತ್ವನ ಹೇಳುವ ದಾಟಿಯನ್ನು ಗೀತೆಗಳನ್ನು ರಚಿಸಿದ್ದಾರೆ. ಅಣ್ಣನ ಸ್ಥಾನದಲ್ಲಿ ನಿಂತು 'ಅಳಬೇಡ ತಂಗಿ ಅಳಬೇಡ. ನಿನ್ನ ಕಳುಹ ಬಂದವರಿಲ್ಲಿ ಉಳುಹಿಕೊಂಬವರಿಲ್ಲ' ಎನ್ನುವ ಮಾತು ವೇದಾಂತ ದರ್ಶನದಂತಿದೆ. ವಯಸ್ಸಿಗೆ ಬಂದ ಮಗಳಿಗೆ ಮದುವೆ ಮಾಡುವಾಗ, 'ಉಡಿಯಕ್ಕಿ ಹಾಕಿ' ಗಂಡನ ಮನೆಗೆ

ಕಳುಹಿಸಿದಾಗ, ಮದುಮಗಳ ಕಂಡವರ ಕಾಲಿಗೆ ಬಿದ್ದು ಅಶೀರ್ವಾದ ತೆಗೆದುಕೊಳ್ಳುವ ಸಂಪ್ರದಾಯವನ್ನು ಶರೀಫರು ಕನ್ನಡ ಸಂಸ್ಕೃತಿಯ ವಾರಸುದಾರರಂತೆ ಗೋಚರಿಸುತ್ತಾರೆ, ಹೆಣ್ಣಾದವಳು ತಾಯಿಯಾಗಿ, ಮಗಳಾಗಿ, ಸೊಸೆಯಾಗಿ, ಅತ್ತಿಗೆ, ನಾದಿನಿ, ಮುದುಕಿಯಾಗಿ ಪಡುವ ಪಾಡು ಶರೀಫರ ಗೀತೆಗಳಲ್ಲಿ ಸೂಕ್ಷ್ಮವಾಗಿ ಗುರುತಿಸಬಹುದಾಗಿದೆ. ಶ್ರೀ ಸಾಮಾನ್ಯರನ್ನು ತಮ್ಮ ಸಾಹಿತ್ಯದಲ್ಲಿ ಉಲ್ಲೇಖಿಸುವ ಮೂಲಕ ಜನರ ನಡುವೆ ಮನ್ನಣೆ ಪಡೆದ ಶರೀಫರು ಜನರ ಮಾತುಗಳನ್ನೇ ಪದಗಳಲ್ಲಿ ಬಳಕೆ ಮಾಡಿದ್ದಾರೆ. 'ಎಂಥಾ ಬೇಗನೆ ಪ್ರಾಯ ಬಂತೇ ನಿನಗೆ; 'ನಿನ್ನ ಹೆಣ್ತಿ; ತೇರನೆಳೆಯುತಾರೆ ತಂಗಿ; 'ಸುಗ್ಗಿ ಮಾಡೋಣು ಬಾರವ್ವ', 'ಮೋಹದ ಹೆಂಡತಿ ತೀರಿದ ಬಳಿಕ ಮಾವನ ಮನಿಯ ಹಂಗಿನ್ಯಾಕೋ' ಮುಂತಾದ ಗೀತೆಗಳು ಜನರ ಮನದ ಭಾವನೆಗಳಿಗೆ ಶರೀಫರ ದನಿಯಾದರೆಂಬುದಕ್ಕೆ ನಿದರ್ಶನವಾಗಿ ನಿಲ್ಲುತ್ತವೆ. ಹೆಣ್ಣಿನೊಡನೆ ಸ್ನೇಹದಿಂದಿರಬೇಕೆನ್ನುವ ಶರೀಫರು ಎಲ್ಲಾ ಸಂದರ್ಭಗಳಲ್ಲೂ ಆಧ್ಯಾತ್ಮದ ಎಳೆಯನ್ನು ಸೂತ್ರದ ದಾರದಂತೆ ಬಳಕೆ ಮಾಡಿರುವುದನ್ನು ಕಾಣುತ್ತೇವೆ. ಬದುಕಿನ ಬಂಧುರವನ್ನು ಸಮಾಜದ ಸಿಂಧೂರದಂತೆ ಕಾಣುವ ಅವರು ನೀಡಿರುವ ಸಾಹಿತ್ಯವು ಕಣ್ಣಿಗಿಂತ ಕರುಳಿಗೆ ತಟ್ಟುತ್ತದೆ. ಶರೀಫರು ಕನ್ನಡ ಸಾಹಿತ್ಯದ ಕೊಂಡಿಯನ್ನು ಬೆಸೆಯುವ ಮಹತ್ವದ ಕಾರ್ಯವನ್ನು ಮಾಡಿದ್ದಾರೆ. ಕೇವಲ ಅವರ ಗೀತೆಗಳನ್ನು ಮನರಂಜನೆಗೆ ಕೇಳಿ ಬಿಡುವಂಥದಾಗಿರದೆ ಮತ್ತೆ ಮತ್ತೆ ಅದರ ಅರ್ಥವನ್ನು ಚಿಂತನೆಗೆ ಗುರಿಮಾಡುವ ಕಾರ್ಯದಲ್ಲಿ ತೊಡಗಿ, ಶರೀಫರಿಗೆ ಕನ್ನಡ ಸಾಹಿತ್ಯದಲ್ಲಿ ಸೂಕ್ತ ಸ್ಥಾನವನ್ನು ಗುರುತಿಸಿದಾಗ ಅವರಿಗೆ ಗೌರವ ನೀಡಿದಂತಾಗುತ್ತದೆ.

ಅಧ್ಯಾಯ-5

ಶರೀಫ ಮತ್ತು ಕೋಮು ಸೌಹಾರ್ದತೆ ಹಾಗೂ ವರ್ತಮಾನ

ಭಾರತದ ಸಂಸ್ಕೃತಿಯು ವೈವಿಧ್ಯಮಯವಾದುದಾಗಿದೆ. ಇದು ಇಲ್ಲಿನ ಜನರ ಭಾಷೆಮ ಜನಾಂಗ, ಧರ್ಮ ಸಂಪ್ರದಾಯ ಹಾಗೂ ಇತರ ಬದುಕಿನ ರೀತಿಗಳಲ್ಲಿ ಗೋಚರಿಸುತ್ತದೆ. ವೈವುಧ್ಯತೆಯನ್ನು ಬಿಂಬಿಸುವ ಭಾರತೀಯರು ಅತಿ ಪ್ರಾಚೀನ ಕಾಲದಿಂದ ಆಧುನಿಕ ಕಾಲದವರೆಗೂ ಪರಸ್ಪರ ಸಹಕಾರ, ಸಂಘರ್ಷ, ಸಾಮರಸ್ಯದ ಹಾದಿಯಲ್ಲಿ ಕ್ರಮಿಸಿದ್ದಾರೆ. ಹಾಗೂ ತಮ್ಮದೇ ಆದ ಬದುಕಿನ ವಿಶಿಷ್ಟ್ಯತೆಯನ್ನು ಗೌರವಿಸಿ ಬೆಳೆಸುತ್ತಾ ಅನ್ಯಧರ್ಮ, ನಂಬಿಕೆ, ಆಚರಣೆಗಳನ್ನು ಗೌರವಿಸುತ್ತಾ ಬಂದಿರುವ ಐತಿಹಾಸಿಕ ಹಿನ್ನೆಲೆ ನಮ್ಮ ಸಂಸ್ಕೃತಿಗೆ ಇದ್ದು, ಇಂತಹ ಪರಿಸರ ನಿರ್ಮಾಣಕ್ಕೆ ಸಮಾಜ ಸುಧಾರಕರು ಹಾಗೂ ಸಾಧು ಸಂತರ ಕೊಡುಗೆ ಅನುಪಮವಾದುದಾಗಿದೆ.

ಕನ್ನಡದ ಪ್ರಾಚೀನ ಕೃತಿಯಾದ ಕವಿರಾಜ ಮಾರ್ಗದಲ್ಲಿ ಬರುವ 'ಕಸವರವೆಂಬುದು ನೆಲೆ ಸೈರಿಸಲಾರ್ಪೊಡೆ ಪರಧರ್ಮಂ, ಪರ ವಿಚಾರಮಂ" ಎನ್ನುವ ಮಾತು, ಅಂದಿನ ಕನ್ನಡಿಗರ ಸಹೃದಯ ಭಾವನೆ ಹಾಗೂ ಧರ್ಮ ಸಹಿಷ್ಣು ಜೀವನದ ದಷ್ಟಿಯನ್ನು ಬಿಂಬಿಸುತ್ತದೆ. ಹಾಗೂ ಅನಂತರದ ಕನ್ನಡಿಗರು ನಡೆಸಬೇಕಾದ ಸಾಮಾಜಿಕ ಜೀವನಕ್ಕೆ ಮಾರ್ಗದರ್ಶನ ನೀಡುವಂತಹದ್ದು ಆಗಿದೆ.

ಕನ್ನಡ ಸಾಹಿತ್ಯವು ಆಯಾ ಕಾಲಘಟ್ಟದ ಜನರ ಜೀವನವನ್ನು ಬಿಂಬಿಸುತ್ತದೆ. ಅಂದಂದಿನ ಧರ್ಮಗಳ ಸ್ಥಿತಿಗಳು, ಸಂಘರ್ಷದ ಆಳ್ವಿಕೆ, ಪ್ರೋತ್ಸಾಹ. ಜನರ ಬದುಕಿನ ರೀತಿ ಹಾಗೂ ಸೃಜನಶೀಲ ಚಟುವಟಿಕೆಗಳು ಇವೆಲ್ಲವೂ ಸಾಹಿತ್ಯದಲ್ಲಿ ಪ್ರಕಟವಾಗಿದೆ.

ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಧರ್ಮ ಹಾಗೂ ಪ್ರಭುತ್ವ ಸಾಹಿತ್ಯದ ವಾಸ್ತುವಾಗಿದ್ದು, ಧಾರ್ಮಿಕ ಕೃತಿಗಳಲ್ಲಿ ಸಾಮರಸ್ಯ, ಸಂಘರ್ಷದ ಚಿತ್ರಣಗಳು ಸಿಗುತ್ತವೆ. ಪಂಪ ಜೈನನಾಗಿದ್ದರೂ, ವೈದಿಕ ಧರ್ಮ ಪ್ರಧಾನ ಕೃತಿ ರಚಿಸಿದ್ದು, ರಾಜ ಸಹ ಜೈನಧರ್ಮಿಯ ಕವಿಗೆ ಆಶರಯ ಪ್ರೋತ್ಸಾಹ ನೀಡಿ ಗೌರವಿಸಿದ್ದು, ಅನಂತರದ ರನ್ನ ಪೊನ್ನ ಹಾಗೂ ಇತರ ಕವಿಗಳು ಹಾಗೂ ಅವರ ಆಶ್ರಯದಾತ ಅರಸರು ಇದೇ ಹಾದಿಯಲ್ಲಿ ನಡೆದದ್ದು, ಧಾರ್ಮಿಕ ಸಹಿಷ್ಣುತೆಯ ಭಾವನೆಯ ಅಭಿವ್ಯಕ್ತಿಗಳಾಗಿವೆ.

ವಚನಕಾರರು ಜನಮುಖಿಯಾಗಿ ಪ್ರವರ್ಧಮಾನಕ್ಕೆ ಬಂದಂತೆಲ್ಲಾ, ಆಗ ಚಾಲ್ತಿಯಲ್ಲಿದ್ದ, ಜೈನ, ವೀರಶೈವ ಹಾಗೂ ವೈದಿಕ ಧರ್ಮಗಳಲ್ಲಿ ಪರಸ್ಪರ ಅಸ್ತಿತ್ವಕ್ಕಾಗಿ ಸಂಘರ್ಷಗಳು ಸಂಭವಿಸಿ ಅವು ಸಾಹಿತ್ಯದಲ್ಲಿ ವಿಡಂಬನ ಸಾಹಿತ್ಯವಾಗಿ ನೆಲೆಯಾಗಿವೆ. ಆಂಡಯ್ಯನ 'ಕಬ್ಬಿಗರ ಕಾವ್ಯ' ನಯಸೇನನ 'ಧರ್ಮಾಮೃತ', ಬ್ರಹ್ಮಶಿವನ 'ಸಮಯ ಪರೀಕ್ಷೆ' ಇವು ಈ ಹಿನ್ನೆಲೆ ಇರುವ ಕೃತಿಗಳಾಗಿದ್ದು, ಇವುಗಳಲ್ಲಿ ಕವಿಗಳು ತನ್ನ ಸ್ವಂತ ಧರ್ಮಗಳನ್ನು ಎತ್ತಿ ಹಿಡಿದು, ಅನ್ಯ ಧರ್ಮಗಳನ್ನು ಕತೆಗಳ ಮೂಲಕ ಹಾಗೂ ಘಟನೆಗಳ ಮೂಲಕ ಕಟುವಾಗಿ ಟೀಕಿಸಿರುವುದು ತಿಳಿಯುತ್ತದೆ.

ಸಂಘರ್ಷ, ಸಾಮರಸ್ಯದ ಬದುಕಿನ ರೀತಿಯು ಭಾರತೀಯ ಜನ ಜೀವನದ ಪ್ರಮುಖ ಲಕ್ಷಣವಾಗಿದೆ. ಈ ಲಕ್ಷಣವು ಕನ್ನಡದ ಸಂದರ್ಬದಲ್ಲಿ ಪ್ರಾಚೀನದಿಂದ ಅರ್ವಾಚೀನ ಸಾಹಿತ್ಯದವರೆಗೂ ಆಯಾ ಸಂದರ್ಭಾನುಸಾರ ವ್ಯಕ್ತವಾಗಿದೆ.

ವೈವಿಧ್ಯಮಯ ಜನರ ಜೀವನದಲ್ಲಿ ಕೋಮು, ಧರ್ಮಗಳ ಕಾರಣಕ್ಕಾಗಿ ಸಂಘರ್ಷದ ಸನ್ನಿವೇಶಗಳು ಸಂಭವಿಸಿದಾಗ, ಆಯಾ ಕಾಲಘಟ್ಟಗಳಲ್ಲಿ ಹಲವಾರು ಸಮಾಜ ಸುಧಾರಕರು ಜನಿಸಿ, ತಮ್ಮ ಚಿಂತನೆಗಳನ್ನು ಬೋಧಿಸಿ, ಸಾಮರಸ್ಯ ಮೂಡಿಸುವ ಕೆಲಸ ಮಾಡಿದ್ದಾರೆ. ಕನ್ನಡದ ಸಂದರ್ಭದಲ್ಲಿ ಶಿವಶರಣರು, ಸರ್ವಜ್ಞದಾಸರು ಹಾಗೂ ಇತರ ಅನುಭಾವ ಕವಿಗಳು ಕಾಣಿಸಿಕೊಂಡು ತಮ್ಮ ಸಾಹಿತ್ಯಾಭಿವ್ಯಕ್ತಿಯ ಮೂಲಕ ಹಲವು ಧರ್ಮಗಳ ಶ್ರೇಷ್ಠತೆ ವೈಶಿಷ್ಟತೆ ಹಾಗೂ ಪರಸ್ಪರ ಅನ್ಯಧರ್ಮೀಯರಲ್ಲಿ ಇರಬೇಕಾದ ಗೌರವ ಹಾಗೂ ಸಾಮರಸ್ಯ ಭಾವನೆಗಳ ಬಗ್ಗೆ ಬೋಧಿಸಿ ಜನರ ಜೀವನವನ್ನು ಸುಧಾರಿಸಿ ಶಾಂತಿ, ಸೌಹಾರ್ದತೆಗಳನ್ನು ನೆಲೆಗೊಳಿಸಿದ್ದಾರೆ.

ಪ್ರಸ್ತುತ ಸಮಾಜದಲ್ಲಿ ಧಾರ್ಮಿಕ ಸಂಘರ್ಷಗಳ ಸನ್ನಿವೇಶ ಇದ್ದು, ಇಂತಹ ಪರಿಸ್ಥಿತಿಯನ್ನು ತಿಳಿಗೊಳಿಸುವುದು ಇಂದಿನ ಅಗತ್ಯವಾಗಿದೆ. ಹಾಗಾಗಿ ಚಾರಿತ್ರಿಕವಾಗಿ ಇಂತಹ ಸನ್ನಿವೇಶಗಳನ್ನು ತಮ್ಮ ಬೋಧನೆಗಳು, ನೈತಿಕ ಮೌಲ್ಯಗಳು, ಹಾಗೂ ಮಾನವೀಯ ದೃಷ್ಟಿಯ ಚಿಂತನೆಗಳಿಂದ ಸರಿಪಡಿಸಿದ, ನಮ್ಮ ಪ್ರಾಚೀನ ಸಮಾಜ ಸುಧಾರಕರು ಹಾಗೂ ಚಿಂತಕರನ್ನು ಕುರಿತು ಅವಲೋಕಿಸುವುದರ ಮೂಲಕ ನಮ್ಮ ಇಂದಿನ ಸಾಮಾಜಿಕ ರೋಗಗಳಿಗೆ ಪರಿಹಾರಗಳನ್ನು ಕಂಡುಕೊಳ್ಳಬಹುದಾಗಿದೆ. ಈ ಹಿನ್ನೆಲೆಯಲ್ಲಿ ಸಂತ ಶಿಶುನಾಳ ಷರೀಪರ ಜಾತ್ಯಾತೀತ ಹಾಗೂ ಧರ್ಮಾತೀತ ಬದುಕು ಹಾಗೂ ಬೋಧನೆಗಳನ್ನು ಅವಲೋಕಿಸುವುದು ಔಚಿತ್ಯ ಪೂರ್ಣವೆನಿಸುತ್ತದೆ.

ಷರೀಪರು ನಮ್ಮ ನಡುವೆ ಎರಡು ಧರ್ಮಗಳ ಸೇತುವೆಯಂತೆ ಬದುಕಿದ್ದವರು. ಹಾಗೆಯೇ ತಮ್ಮ ಚಿಂತನೆಗಳನ್ನು ಸಮಾಜಕ್ಕೆ ಬೋಧಿಸಿದವರು. ಇವರು ತಮ್ಮ ಸಾಹಿತ್ಯದಲ್ಲಿ ಇಸ್ಲಾಂ, ವೀರಶೈವ ಹಾಗೂ ವೈದಿಕ ಧರ್ಮಗಳಲ್ಲಿನ ಮೌಢ್ಯಗಳನ್ನು ಕಟುಮಾತುಗಳಲ್ಲಿ ವಿಡಂಬಿಸಿ ಮಾನವೀಯ ಮೌಲ್ಯ ಹಾಗೂ ಜಂಗಮ ಸ್ವರೂಪ ಭಕ್ತಿಗೆ ಒಲವು ತೋರಿಸಿದ್ದಾರೆ.

ಅಲ್ಲಮಪ್ರಭು ವಚನ ಚಳುವಳಿಯ ಕೇಂದ್ರ ವ್ಯಕ್ತಿಯಾಗಿದ್ದು, ತಮ್ಮ ವಚನಗಳ ಮೂಲಕ ಆಧ್ಯಾತ್ಮಿಕ ನೆಲೆಯಲ್ಲಿ ಸಾಮಾಜಿಕ ರೋಗಗಳನ್ನು ಟೀಕಿಸಿ ವೈಚಾರಿಕತೆಯನ್ನು ಸಾರಿದವರು. ಇವರ ಬಗ್ಗೆ ಶರೀಫರು ಮುಸ್ಲಿಂರು ಕೂಪಮಂಡೂಕಗಳಂತೆ ಕೇವಲ ತಮ್ಮ ಧರ್ಮದ ಬಗ್ಗೆ ತಿಳಿದರೆ ಸಾಲದು, ತಮ್ಮ ಧರ್ಮದಾಚೆಗಿನ ಅಲ್ಲಮ ಪ್ರಭುಗಳಂತಹವರ ಜೀವನ ಮೌಲ್ಯಗಳನ್ನು ತಿಳಿದು ಪರಿಪೂರ್ಣರಾಗಬೇಕೆಂದು "ಅಲ್ಲಮಪ್ರಭುವನು ಅರಿಯದ ತುರುಕರು ಮಾಡುವುದು ವ್ಯರ್ಥ" ಎಂದು ಹೇಳಿ ಎಲ್ಲರೂ ಎಲ್ಲಾ ಧರ್ಮಗಳ ಬಗ್ಗೆ ಸಹೃದಯ ಭಾವನೆ ಹೊಂದಿ ಅವುಗಳಲ್ಲಿನ ಒಳ್ಳೆಯ ಮೌಲ್ಯಗಳನ್ನು ಅರಿತು ಜೀವನದಲ್ಲಿ ಆಚರಣೆಗೆ ತರಬೇಕೆಂಬ ಧರ್ಮ ಸಮನ್ವಯ ದೃಷ್ಟಿಯನ್ನು ವ್ಯಕ್ತಪಡಿಸುತ್ತಾರೆ.

ಇವರ ಸಾಹಿತ್ಯ ಶಿಷ್ಟ ಸಾಹಿತ್ಯದಂತೆ ಬೆಳೆದು ಬರದೆ ಜನಪದ ಸಾಹಿತ್ಯದ ರೀತಿಯಲ್ಲಿ ಚಾಲ್ತಿಯಲ್ಲಿರುವುದು ಇವರ ಚಿಂತನೆಗಳ ಜನಪರತೆಯನ್ನು ತೋರಿಸುತ್ತದೆ. ಇವರ ಸಾಹಿತ್ಯ ಭಕ್ತಿ ಪ್ರಧಾನವಾಗಿದ್ದು, ತತ್ವಪದ, ದಂಡಕ (ದೇವ-ದೇವಿಸ್ತುತಿ) ಕಾಲಜ್ಞಾನ, ಲಾವಣಿ, ಹೋಳಿಹಾಡು, ಮಂಗಳಾರತ, ಹಾಗೂ ರಿವಾಯತ್‌ಗಳೆಂದು ವಿಭಾಗಿಸಲ್ಪಟ್ಟಿದೆ. ಷರೀಪರು ಜನ್ಮತಃ ಮುಸ್ಲಿಂರಾಗಿದ್ದರೂ, ತಮ್ಮ ಬಹುಪಾಲು ಕಾವ್ಯ ನಡೆಸಿರುವುದು ಶಿಶುನಾಳದ ಶಿವ ಹಾಗೂ ಸ್ಥಳೀಯ ಇತರ ವೈದಿಕ ದೇವರುಗಳನ್ನು ಕುರಿತೇ. ಅಷ್ಟರ ಮಟ್ಟಿಗೆ ಅವರು ಧರ್ಮಾತೀತವಾಗಿ ಸಾಹಿತ್ಯ ಚರಿತ್ರೆಯಲ್ಲಿ ನೆಲೆಯಾಗಿದ್ದಾರೆ.

ಶರೀಫರ ಸಾಹಿತ್ಯ-ಚಿಂತನೆಗಳು ಆರೋಗ್ಯಕರ ಸಮಾಜದ ನಿರ್ಮಾಣದ ದೃಷ್ಟಿಯನ್ನುಳ್ಳವುಗಳಾಗಿದ್ದು, ಅವುಗಳಲ್ಲಿ ಸಮಕಾಲೀನ ಸಮಾಜದಲ್ಲಿದ್ದ ಧಾರ್ಮಿಕ ಮೌಢ್ಯ, ಅಂಧಶ್ರದ್ಧೆ, ಗೊಡ್ಡು ಸಂಪ್ರದಾಯಗಳು ಟೀಕಿಸಲ್ಪಟ್ಟಿವೆ. ಭಕ್ತಿ ನೀತಿಗಳನ್ನು ಮೇಲೈಸಿ ದೇವನೊಬ್ಬ ನಾಮ ಹಲವು ಎಂದು ತಮ್ಮ ಚಿಂತನೆಗಳಲ್ಲಿ ಬೋಧಿಸಿದ ಶರೀಫರು ಹರಿ-ಹರ-ಹಜರತ್

ಮಾರ್ಗಗಳೆಲ್ಲಾ ದೇವನನ್ನು ಸೇರುವ ದಾರಿಗಳೆ ಎಂದು ತಿಳಿಸಿ ಆ ಮೂಲಕ ಹಿಂದೂ-ಮುಸ್ಲಿಂ ಸಂಸ್ಕೃತಿಯ ಐಕ್ಯತೆಗೆ ಕಾರಣ ಪುರುಷರಾಗಿದ್ದಾರೆ.

ಷರೀಪರು ಜನರ ನಡುವೆ ಬದುಕಿ ಅವರಿಗೆ ಧಾರ್ಮಿಕ ನೈತಿಕ ಬದುಕಿನ ಸಾಮರಸ್ಯದ ರೀತಿಯನ್ನು ಬೋಧಿಸಿದ್ದಲ್ಲದೇ ಸ್ವತಃ ತಾವೇ ಆದರ್ಶ ಮಾದರಿಯಾಗಿದ್ದವರು. ಇಂತಹ ಶರೀಫರ ಕೊನೆಯ ದಿನಗಳು ಹಾಗೂ ಅನಂತರದ ಘಟನೆಗಳು 'ಶರಣರ ಬದುಕನ್ನು ಮರಣದಲ್ಲಿ ಕಾಣು' ಎನ್ನುವಂತೆ ಇವರ ಧರ್ಮಾತೀತ ಭಾವನೆಯ ದ್ಯೋತಕಗಳಾಗಿ ಕಾಣಿಸುತ್ತವೆ.

ಇವರು ಬದುಕಿನ ಎಲ್ಲಾ ಅನುಭವಗಳನ್ನು ಬಲ್ಲವರಾಗಿದ್ದು, ಜೀವನದ ಅಂತ್ಯವನ್ನು ಇಚ್ಚಾಮರಣಿಯಂತೆ ಸ್ವೀಕರಿಸಿದರು. ಇವರ ಅಂತ್ಯ ಸಂಸ್ಕಾರ ಅವರು ಬದುಕಿ ಬೋಧಿಸಿದಂತೆ ಎರಡು ಧರ್ಮಗಳ ವಿಧಿ ವಿಧಾನಗಳಂತೆಯೆ ಎಲ್ಲಾ ಭಕ್ತಾದಿ ನಾಗರೀಕರ ಸಮ್ಮುಖದಲ್ಲಿ ನಡೆದದ್ದು, ಈಗಲೂ ಈ ಸ್ಥಳ ಉಭಯ ಧರ್ಮಿಯರಿಗೂ ಪವಿತ್ರ ಹಾಗೂ ಪೂಜ್ಯನೀಯ ಸ್ಥಳವಾಗಿರುವುದು. ಷರೀಫರ ಮಾನವ ದೃಷ್ಟಿಯನ್ನು ಬಿಂಬಿಸುತ್ತದೆ.

ಪ್ರಸ್ತುತದ ಸಾಮಾಜಿಕ ಜೀವನ ಧರ್ಮಾಂಧತೆ, ಜಾತೀಯತೆಯಂತಹ ಸಂಕುಚಿತ ದೃಷ್ಟಿಗಳಿಂದ ಕೂಡಿದ್ದು, ಧಾರ್ಮಿಕ ಸಂಘರ್ಷದ ನೆಲೆಯಲ್ಲಿ ನಿಂತಿದೆ, ಜನರಲ್ಲಿ ಪರಸ್ಪರ ದ್ವೇಷ, ಅಸೂಯೆ, ಅಭದ್ರತೆಯ ಭಾವನೆಗಳು ಕಾಣಿಸಿ ನೆಮ್ಮದಿಯುತ ಜೀವನ ಮರೆಯಾಗಿದೆ. ಹಾಗಾಗಿ ಸಾಮಾಜಿಕ ನೆಮ್ಮದಿ ಮೂಡಿಸುವುದು ಇಂದಿನ ಜರೂರಾಗಿದ್ದು, ಅದಕ್ಕಾಗಿ ನಮ್ಮ ಚರಿತ್ರೆಯಲ್ಲಿ ಸಾಮರಸ್ಯದ ಬದುಕಿನ ಕುರಿತು ಬಾಳಿ ಬೋಧಿಸಿದ ಸಮಾಜ ಸುಧಾರಕರು – ಅನುಭವಿಗಳ ಬದುಕನ್ನು ಕುರಿತು ಅವಲೋಕಿಸುವುದು ಅಗತ್ಯವಾಗಿದೆ. ಈ ಹಿನ್ನೆಲೆಯಲ್ಲಿ ಧರ್ಮ ಸಮನ್ವಯಕಾರರಾಗಿದ್ದ ಸಂತ ಶಿಶುನಾಳ ಷರೀಪರ ಕುರಿತು ಚಿಂತನೆ ನಡೆಸುವುದು ಹೆಚ್ಚು ಅರ್ಥಪೂರ್ಣವೆನಿಸುತ್ತದೆ.

ಅಧ್ಯಾಯ-6

ಶರೀಫರ ತತ್ವಪದಗಳಲ್ಲಿ ಭಾಷಾ ರಚನೆಯ ಸ್ವರೂಪ

ಜೀವನದ ನಶ್ವರತೆ, ಅತೀತ ಶಕ್ತಿಯ ಇರುವಿಕೆ ಮತ್ತು ಇಂದ್ರಿಯಾತೀತ ಅನುಭವಗಳನ್ನು ಅರ್ಥೈಸಿಕೊಂಡ ಹಲವರು ತಮ್ಮ ಕಾಣ್ಕೆಯನ್ನು ವೈವಿಧ್ಯಮಯ ಭಾಷಾ ರಚನೆಗಳ ಮೂಲಕ ಇತರರಿಗೂ ಉಣಿಸುವ ಕ್ರಿಯೆಯಲ್ಲಿ ನಿರಂತರವಾಗಿ ತೊಡಗಿದ್ದಾರೆ. ಇಂತಹವರಲ್ಲಿ 19ನೇ ಶತಮಾನದಲ್ಲಿ ಬಾಳಿ, ಬೆಳಗಿದ 'ಶಿಶುನಾಳ ಶರೀಫ್ ಸಾಹೇಬ' ರೂ ಒಬ್ಬರು. ಜಾತಿ, ಮತ, ಧರ್ಮಗಳನ್ನು ಮೀರಿ ಸಮಸ್ತ ಮಾನವ ಕುಲದ ಕಲ್ಯಾಣಕ್ಕಾಗಿ ಸಂದೇಶ ಸಾರಿದ 'ಮಹಮ್ಮದ ಶರೀಫ್ ಸಾಹೇಬ' ರು ಕರ್ನಾಟಕದ ಅನರ್ಘ್ಯ, ಶಾಶ್ವತ ಆಸ್ತಿಯೆಂದರೆ ತಪ್ಪಾಗಲಾರದು.

ಕ್ರಿ.ಶ. 1819–1889 ರವರೆಗೆ ಜೀವಿಸಿದ್ದ ಶರೀಫರು ಧಾರವಾಡ ಜಿಲ್ಲೆಯ 'ಶಿಶುವಿನಹಾಳ' ಎಂಬ ಗ್ರಾಮದಲ್ಲಿ ಜನಿಸಿ, ಉತ್ತರ ಕರ್ನಾಟಕದಲ್ಲಿ ಬಾಳ್ವೆ ನಡೆಸಿದವರು. ಇಸ್ಲಾಂ ಧರ್ಮದ ಇಮಾಮ್ ಮತ್ತು ಹಜ್ಜುಮಾರ ಮಗನಾದ ಈತನು ಗುರು ಹಿಂದೂಧರ್ಮದ ಗೋವಿಂದಭಟ್ಟ, ಬಾಲ್ಯದಿಂದಲೂ ಹಿಂದೂ-ಮುಸ್ಲಿಂ ಧರ್ಮಗಳ ಸಂಗಮದ ವಾತಾವರಣದಲ್ಲಿ ಬೆಳೆದ ಶರೀಫರು ಕಾಲ ಕ್ರಮೇಣ ಜಾತ್ಯಾತೀತ, ಧರ್ಮಾತೀತ, ಮನೋಧರ್ಮದವರಾಗಿ ಇಡೀ ಮಾನವ ಕುಲಕ್ಕೆ ಸಲ್ಲುವವರಾದರು.

'ಶರೀಫ' ಎಂ 'ಪಾರ್ಸಿ' ಭಾಷೆಯ ಪದದ ಅರ್ಥ "ಉದಾತ್ತ ಧ್ಯೇಯಗಳ ಅಥವಾ ಉತ್ತಮ ಶೀಲಸ್ವಭಾವವನ್ನು ಹೊಂದಿ ಇತರರಿಂದ ಗೌರವಿಸಲ್ಪಡು ವ್ಯಕ್ತಿ" ಎಂದು ಡಾ॥ ಶಿವಾನಂದ ಸುಬ್ಬಣ್ಣವರ ಅವರು ಅರ್ಥೈಸಿದ್ದಾರೆ. ಆದ್ದರಿಂದ ಇವರ ಹೆಸರು ಅನ್ವರ್ಥನಾಮವಾಗಿದೆಯೆಂದು ಹೇಳಬಹುದು. ಶರೀಫರನ್ನು 'ಶರೀಫ ಸಾಹೇಬರು, ಶರೀಫಜ್ಜ, ಶರೀಫ ಶಿವಯೋಗಿ ಮತ್ತು ಕರ್ನಾಟಕದ ಕಬೀರ' ರೆಂದು ಜನತೆ ವಿವಿಧ ರೀತಿಗಳಲ್ಲಿ ಗುರುತಿಸಿದ್ದಾರೆ.

ನನ್ನ ಪ್ರಬಂಧ ರಚನೆಗೆ ಡಾ॥ ಶಿವಾನಂದ ಗುಬ್ಬಣ್ಣನವರು ಪ್ರಕಟಿಸಿರುವ 'ಬರಕೋ ಪದಾ ಬರಕೋ' ಗ್ರಂಥದಲ್ಲಿರುವ 410 ಪದಗಳನ್ನು ಮತ್ತು ಪರಿಷ್ಕರಣ ಪಾಠದೊಂದಿಗೆ ಪ್ರಕಟಣೆಗೊಂಡಿರುವ 'ಶರೀಫ ಸಾಹೇಬರ ಗೀತೆಗಳು' ಎಂಬ ಕೃತಿಗಳನ್ನು ಆಧಾರವಾಗಿ ಇಟ್ಟುಕೊಂಡಿದ್ದೇನೆ.

ವೈಯಕ್ತಿಕ ಜೀವನದ ವಿವರಗಳಿಗೆ ಹೋಗದೆ ಸಂಕ್ಷಿಪ್ತವಾಗಿ ಹೇಳುವುದಾದರೆ, ಶರೀಫರ ಆರಂಭದ ಜೀವನ ಸಾಮಾನ್ಯರಂತೆಯೇ ಇತ್ತು. ಮುಲ್ಕಿ ಪರೀಕ್ಷೆಯಲ್ಲಿ ಪಾಸಾಗಿ ಶಿಕ್ಷಕ ವೃತ್ತಿಯಲ್ಲಿದ್ದು, ಮದುವೆಯಾಗಿ ಸಂಸಾರಸ್ಥರಾಗಿದ್ದು, ಆ ನಂತರ ಆಧ್ಯಾತ್ಮದಲ್ಲಿ ಒಲವನ್ನು ಪಡೆದು ಯೋಗಿಯಾಗಿ, ಎಲ್ಲವನ್ನೂ ತ್ಯಜಿಸಿ ಜೀವನ್ಮುಕ್ತರಾದವರು.

ಇನ್ನು, ಶರೀಫರು ಜೀವಿಸಿದ್ದ 'ಕಾಲ' ವನ್ನು ಗಮನಿಸೋಣ. ರಾಜಕೀಯವಾಗಿ ನೋಡಿದಾಗ, ಬ್ರಿಟಿಷರು ಭಾರತವನ್ನು ಆಳುತ್ತಿದ್ದು, ಆಂಗ್ಲ ಶಿಕ್ಷಣ, ಕೈಗಾರಿಕಾ ಕ್ರಾಂತಿಗಳಿಗೆ ಭಾರತ ತನ್ನನ್ನು ಒಡ್ಡಿಕೊಂಡ ಕಾಲದಲ್ಲಿ ಜೀವಿಸಿದ್ದರು. ಆದ್ದರಿಂದ 'ದೇಸಿ ಸಂಸ್ಕೃತಿ'ಯಲ್ಲಿ ಅನ್ಯದೇಶಿಕ ಸಂಸ್ಕೃತಿ ಬೆರೆತು ದೇಶ ಸಂಕ್ರಮಣ ಸ್ಥಿತಿಯಲ್ಲಿ ಇದ್ದುದನ್ನು ಧಾರವಾಡ, ಹುಬ್ಬಳ್ಳಿ ಪರಿಸರದಲ್ಲಿದ್ದು ಅನುಭವಿಸಿದವರು. ಸಾಹಿತ್ಯಕವಾಗಿ ನೋಡಿದಾಗ ಗದ್ಯ ಗ್ರಂಥಗಳ ಬಾಹುಳ್ಯವಿತ್ತು. ಭಾಷಿಕ ನೆಲೆಯಲ್ಲಿ ನೋಡಿದಾಗ ಹಳಗನ್ನಡದೊಂದಿಗೆ ಹೊಸಗನ್ನಡ ರೂಪಗಳು ಬೆರೆತು ಭಾಷೆ ಸಂಕ್ರಮಣಾವಸ್ಥೆಯಲ್ಲಿ ಇದ್ದುದನ್ನು ಕಾಣುತ್ತೇವೆ.

ಪ್ರಾಚೀನ ಕಾಲದಿಂದಲೂ ಜನಪದ ಸಾಹಿತ್ಯವಲ್ಲದೆ ಶಿಷ್ಟ ಸಾಹಿತ್ಯದಲ್ಲಿಯೂ ಕವಿರಾಜಮಾರ್ಗದ ಕಾಲಕ್ಕಿಂತ ಹಿಂದಿನಿಂದಲೂ 'ಪದ, ಮೇಲ್ವಾಡು, ಬೆದಂಡೆ' ಮೊದಲಾದ ಹೆಸರುಗಳೊಂದಿಗೆ 'ಹಾಡುಗಬ್ಬ' ವೊಂದು ಅಸ್ತಿತ್ವದಲ್ಲಿತ್ತು ಎಂದು ತಿಳಿದು ಬರುತ್ತದೆ. ವಚನಕಾರರು, ಹರಿದಾಸರು ಮತ್ತು ತತ್ವಪದಕಾರರು 'ಸ್ವರವಚನ, ಕೀರ್ತನೆ, ಕೈವಲ್ಯ ಪದ ಮತ್ತು ತತ್ವಪದ' ಗಳೆಂಬ ಹೆಸರುಗಳಲ್ಲಿ ಹಾಡುಗಬ್ಬವನ್ನು ವೈವಿಧ್ಯಮಯವಾಗಿ ಬೆಳೆಸುತ್ತಾ ಬಂದಿದ್ದಾರೆ. ಈ ಸಾಲಿನಲ್ಲಿ ಸಲ್ಲುವವರು ಶಿಶುನಾಳ ಶರೀಫರು. ಆದ್ದರಿಂದ ಶರೀಫರು ಮೂಲಭೂತವಾಗಿ 'ತತ್ವಪದಕಾರರು' ಎಂದು ಗುರುತಿಸಲ್ಪಟ್ಟಿದ್ದಾರೆ.

ಪಲ್ಲವಿ, ಕೆಲವೊಮ್ಮೆ ಅನುಪಲ್ಲವಿ, ನುಡಿ/ಸಲ್ಲು/ಚರಣಗಳು, ಅಂಕಿತ ಮತ್ತು ರಾಗ–ತಾಳಗಳ ನಿರ್ದೇಶನ – ಇವೇ ಈ ಎಲ್ಲ ಗೇಯಕೃತಿಗಳ ಲಕ್ಷಣ. ರಾಗ–ತಾಳಗಳ ನಿರ್ದೇಶನ ಇಲ್ಲದೆ ಉಳಿದ ಎಲ್ಲ ಲಕ್ಷಣಗಳು ತತ್ವಪದಗಳಿಗೂ ಅನ್ವಯವಾಗುತ್ತವೆ. ಭಾವಕ್ಕೆ ತಕ್ಕಂತೆ ರಾಗ–ತಾಳಗಳನ್ನು ಅಳವಡಿಸಿಕೊಂಡು ಹಾಡಬಹುದು. ವಚನಕಾರರಿಂದ 'ಸ್ವರವಚನ' ಗಳು. ಹರಿದಾಸರೇ ಮೊದಲಾದವರಿಂದ 'ಕೀರ್ತನೆ'ಗಳು. ನಿಜಗುಣ ಶಿವಯೋಗಿಗಳು ಮೊದಲಾದವರಿಂದ 'ಕೈವಲ್ಯಪದ'ಗಳು, ಕೂಡಲೂರು ಬಸವಲಿಂಗ, ಕಡಕೋಳ ಮಡಿವಾಳೇಶ್ವರ, ಶಿಶುನಾಳ ಶರಿಫ–

ಮೊದಲಾದವರಿಂದ 'ತತ್ವಪದ'ಗಳು ಅಸ್ತಿತ್ವಕ್ಕೆ ಬಂದವು. ಆದ್ದರಿಂದ ಶರೀಫರು ಮೂಲಭೂತವಾಗಿ 'ತತ್ವಪದಕಾರ' ರೆಂದು ಗುರುತಿಸಲ್ಪಟ್ಟಿದ್ದಾರೆ.

ಶರೀಫರು ಕುರಾನ್, ವೈದಿಕ ಸಂಪ್ರದಾಯದ ಗ್ರಂಥಗಳು, ವೀರಶೈವ ಸಂಬಂಧಿತ ಗ್ರಂಥಗಳು, ವಚನ ಸಾಹಿತ್ಯ ಮತ್ತು ವಚನಕಾರರ ಜೀವನಗಳ ಪ್ರಭಾವಕ್ಕೆ ಒಳಗಾದರು. ಇನ್ನೂ ಹೆಚ್ಚಿನ ಪ್ರಭಾವ ಬೀರಿದ ಕ್ಷೇತ್ರವೆಂದರೆ 'ಜಾನಪದ'. ಜಾತಿ, ಮತಗಳ ಎಲ್ಲೆಯನ್ನು ದಾಟಿ ಪ್ರತಿನಿತ್ಯ ತಾವು ಕಾಣುತ್ತಿರುವ ಜನಸಾಮಾನ್ಯರ ಜೀವನದ ಘಟನೆಗಳು, ಹಬ್ಬ-ಹರಿದಿನಗಳು, ಭಾಷೆ-ಸಂಸ್ಕೃತಿಯ ಗಾಢ ಪ್ರಭಾವಕ್ಕೆ ಒಳಗಾದ ಶರೀಫರು 'ಜನಪದ ಕವಿ' ಯಾಗಿಯೇ ಮೂಡಿ ಬಂದರು. ಇವೆಲ್ಲವುಗಳ ಸಂಗಮವೇ ಶರೀಫ್ ಸಾಹಿತ್ಯ

ಶರೀಫರದೆಂದು ಗುರುತಿಸಲಾಗಿರುವ ರಚನೆಗಳಲ್ಲಿ ಭಿನ್ನ, ಭಿನ್ನ 'ಅಂಕಿತ' ಗಳಿವೆ. ಶಿಶುನಾಳಕ್ಕೆ ಸಂಬಂಧಿಸಿದಂತಹ ಅಂಕಿತಗಳಿರುವ ರಚನೆಗಳೆಲ್ಲವನ್ನೂ ಶರೀಫರದೆಂದೇ ಗುರುತಿಸಲಾಗಿದೆ. 'ಶಿಶುನಾಳಧೀಶ' ಎಂಬುದು ಬಹುಮಟ್ಟಿಗೆ ಕಾಣುವ ರೂಪ. ಅಲ್ಲದೆ 'ಶಿಶುನಾಳ, ಶಿಶುನಾಳೇಶ, ಶಿಶುವಿನಹಾಳ, ಶಿಶುವಿನಾಳೇಶ, ಶಿಶುನಾಳ ಪುರೇಶ, ಶಿಶುನಾಳದ ಒಡೆಯ, ಶಿಶುನಾಳ ಪತಿ' – ಎಂಬ ರೂಪಗಳೂ ಇವೆ. ಎರಡನೆಯ ಬಗೆಯೆಂದರೆ 'ಗುರುಗೋವಿಂದ' 'ರಸಿಕ ಗೋವಿಂದನ ಸೇವಕ' ಎಂಬಂತೆ ಗುರುಗೋವಿಂದ ಭಟ್ಟರ ಹೆಸರುಗಳಿರುವ ಪದಗಳು. ಮೂರನೆಯ ಬಗೆಯೆಂದರೆ 'ಶರೀಫ, ಶರೀಫ ಸಾಹೇಬ' ಎಂದು ತನ್ನ ಹೆಸರನ್ನೇ ಬಳಸುವುದು.

"ಬುಡುಬುಡಿಕ್ಯಾ" "ನರಿ ಸತ್ತು ಹೋಯ್ತು ಬೇಡಿ ಹುಲಿಯ ಬಣ್ಣ" ಮತ್ತು ಸ್ವಾಮಿ ಹೊರಟಾರು ಶರಣಾ" ಎಂಬ ರಿವಾಯತ್‌ನಲ್ಲಿ "ಶಿಶುನಾಳ" ಮತ್ತು "ಶರೀಫ ಸಾಹೇಬ" – ಎಂಬ ಎರಡೂ ಅಂಕಿತಗಳಿವೆ. "ಜನಿಂಬು ಕರಸಪ್ಪ ಹಮಾರೇಕೋ ಗಿರಿಯಾ" ಎಂಬ ಉರ್ದು ರಿವಾಯತ್‌ನಲ್ಲಿ "ಶಿಶುನಾಳ ಶರೀಹತ್" ಎಂಬ ಪ್ರಯೋಗಿದೆ. ಒಟ್ಟು ಒಂಭತ್ತು ರಚನೆಗಳಿಗೆ ಯಾವ ಅಂಕಿತವೂ ಇಲ್ಲ.

ಇನ್ನೂ ಒಂದು ಗಮನಾರ್ಹ ಅಂಶವೆಂದರೆ ಶರೀಫರದೆಂದು ಗುರುತಿಸಲಾಗಿರುವ ಐದು "ದಂಡಕ"ಗಳಲ್ಲಿ "ಗುರುಗೋವಿಂದನ ಕರುಣ, ಗುರುಗೋವಿಂದಣಬಗ" ಮೊದಲಾದವುಗಳಂತೆ

ಗುರುವಿನೊಂದಿಗೆ ತನ್ನನ್ನು ಗುರುತಿಸಿಕೊಳ್ಳುವ ಅಂಕಿತಗಳಿವೆ. "ಶ್ರೀ ಬಸವೇಶ್ವರ ದಂಡಕ" ಎಂಬುದರಲ್ಲಿ ಮಾತ್ರ ಇದರೊಂದಿಗೆ "ಶಿಶುನಾಳಧೀಶ" ಎಂಬ ಅಂಕಿತವೂ ಇದೆ.

ಈ ಸಂದಿಗ್ಧತೆಗೆ ಕಾರಣವನ್ನು ಹೀಗೆ ಊಹಿಸಬಹುದು. ಶರೀಫರು ಮೂತಃ "ತತ್ವಪದಕಾರರು" ಪ್ರೊ॥ ಎಚ್.ಎಸ್. ಶಿವಪ್ರಕಾಶ್‌ರವರು ತತ್ವಪದಕಾರರನ್ನು "ಎಲ್ಲ ಜಾತಿಯ ಮತಗಳ ಕಾಡಿ" ಗೆ ಹೋಲಿಸಿದ್ದಾರೆ. ಬೇರೆ, ಬೇರೆ, ಸಂಸ್ಕೃತಿ, ನಂಬಿಕೆ, ಆಚರಣೆ, ಜಾತಿಯ ಜನರ ಮರ್ಧಯೆ ಒಂದಾಗಿ ಬೆರೆತು, ಎಲ್ಲವನ್ನೂ ಗೌರವಿಸುತ್ತಾ, ಎಲ್ಲರನ್ನೂ ಭಕ್ತಿ ಸನ್ಮಾರ್ಗದ ಕಡೆ ಕರೆದೊಯ್ಯುವುದೇ ಶರೀಫರಂತಹ ತತ್ವಪದಕಾರರ ಗುರಿ. ಆದ್ದರಿಂದ ಇವರ ರಚನೆಗಳು ಜನತೆಯ ಮರ್ಧಯದಲ್ಲಿ ಮೂಡಿ, ಜನತೆಯ ಆಸ್ತಿಯೇ ಆಗಿಬಿಡುತ್ತದೆ. ಈ ಕಾರಣದಿಂದ ಶರೀಫರ ರಚನೆಗಳಲ್ಲಿ ಅನೇಕ ಸಾಲುಗಳು ಅರ್ಥಹೀನವಾಗುವ ಮಟ್ಟಿಗೆ ಕೆಟ್ಟು ಹೋಗಿ, ಆಟಪಾಠಗಳಿಂದ ತುಂಬಿರುವುದನ್ನು ಡಾ॥ ಎನ್.ಎಸ್. ಲಕ್ಷ್ಮೀನಾರಾಯಣಭಟ್ಟರು ಗುರುತಿಸಿದ್ದಾರೆ. ಇನ್ನೂ ಎಷ್ಟೋ ಪದಗಳು ಜನತೆಯ ಬಾಯಲ್ಲೇ ಉಳಿದು ಹೋಗಿರುವ ಸಾಧ್ಯತೆಗಳೂ ಇವೆ. ಎಲ್ಲ ತೊಂದರೆಗಳ ನಡುವೆಯೇ 'ಭಾಷೆ–ಶೈಲಿ'ಯ ಸ್ವರೂಪವನ್ನು ಅರಿಯುವ ಪ್ರಯತ್ನ ಮಾಡಲಾಗಿದೆ.

'ಶೈಲಿ' ಪದದ ಅರ್ಥದ ಬಗ್ಗೆ ಸ್ಪಷ್ಟೀಕರಣದ ಅಗತ್ಯವಿದೆ ಎನಿಸುತ್ತದೆ. ಪ್ರಸಿದ್ಧ ಭಾಷಾವಿಜ್ಞಾನಿ ಪ್ರೊ॥ ಕೆ.ವಿ. ತಿರುಮಲೇಶ್‌ರವರು ಶೈಲಿಯನ್ನು ನಾಲ್ಕು ಅರ್ಥಗಳಲ್ಲಿ ವಿವರಿಸುತ್ತಾರೆ. "ಒಂದು: ಶೈಲಿಯೆಂದರೆ ಉತ್ತಮವಾದ ಬರವಣಿಗೆ. ಎರಡು: ಶೈಲಿಯೆಂದರೆ ಸಾಹಿತ್ಯ ಭಾಷೆಗೆ ಹೊದಿಸಿದ ಅಲಂಕಾರ, ಮೂರು: ಶೈಲಿಯೆಂದರೆ ಒಂದು ಸಾಹಿತ್ಯದ ಸಂಪ್ರದಾಯದಲ್ಲಿ ಅಥವಾ ಲೇಖನದಲ್ಲಿ ಗುರುತಿಸಬಹುದಾದ ಪ್ರತ್ಯೇಕತೆ. ನಾಲ್ಕು: ಶೈಲಿಯೆಂದರೆ ವಸ್ತು, ವಿಷಯ, ಸಂದರ್ಭಗಳಿಗೆ ಸಮಂಜಸವಾಗುವಂತೆ ಭಾಷೆಯನ್ನು ಬಳಸುವ ರೀತಿ" ಎಂಬ ವಿವರಣೆಯಲ್ಲಿರುವ ಮೂರು ಮತ್ತು ನಾಲ್ಕನೇ ಅರ್ಥಗಳ ಹಿನ್ನೆಲೆಯಲ್ಲಿ ಈ ಅಧ್ಯಯನವನ್ನು ಮಾಡಿದ್ದೇನೆ. ಆದ್ದರಿಂದ ಭಾಷೆ–ಶೈಲಿಗಳು ಪರಸ್ಪರ ಪುರಕ ಮತ್ತು ಬಿಡಿಸಲಾಗದ ಅವಿನಾಭಾವ ಸಂಬಂಧವನ್ನು ಪಡೆದಿವೆ ಎಂದು ಹೇಳಬಹುದು.

ಮೊದಲು ಶರೀಫರ 'ಭಾಷೆ'ಯನ್ನು ಗಮನಿಸೋಣ. ಶರೀಫರು ಇಂದು ನಾವು ಗುರುತಿಸಿಕೊಂಡಿರುವ 'ಪ್ರಮಾಣ ಕನ್ನಡ' ವನ್ನು ಪ್ರಧಾನವಾಗಿ ಬಳಸುತ್ತಾರೆ. ಅದರೊಂದಿಗೆ ಉತ್ತರ ಕರ್ನಾಟಕದ ಪ್ರಧಾನವಾಗಿ ಧಾರವಾಡದ ಭಾಷೆ ಅಲ್ಲಲ್ಲಿ ಬೆರೆಯುತ್ತದೆ.

ಉದಾ: "ಸಣ್ಣಾಕಿ ಇರುತಾ ನಾವು ನೀವು ಜತ್ತು", "ಮುತ್ತಿನಂಥಾ ಮಾತಿದು ಕೇಳ ಗೆಳತಿ ನಿಮ್ಮತ್ತಿಮಾವಗುತ್ತರ ಏನ ಹೇಳತಿ?" ಇತ್ಯಾದಿ.

ಈ ಉಪ ಭಾಷೆ ಗ್ರಾಮೀಣ ರೂಪದಲ್ಲೂ ಬಳಕೆಯಾಗುತ್ತದೆ. "ಬ್ಯಾಡ, ಐತಿ, ಹೂನ, ಚಂಚಿ, ಕೊರವಿ, ದಾಣಿ, ಜೀರಗಿಂಡಿ, ಅಗೀನ್, ಮದ್ಲಿ" ಮುಂತಾದ ಅಸಂಖ್ಯ ಗ್ರಾಮ್ಯ ಪದಗಳು ದೊರೆಯುತ್ತವೆ. ಉರ್ದು, ಮರಾಠಿ, ಇಂಗ್ಲಿ ಭಾಷೆಯೇ (ಉದಾ: ರಿಪೋರ್ಟ್) ಮೊದಲಾದ ಅನ್ಯಭಾಷೆಯ ಪದಗಳು ಜನರ ಮಾತುಗಳಲ್ಲಿ ಬೆರೆತಿರುವುದರಿಂದ ಶರೀಫರ ಸಾಹಿತ್ಯದಲ್ಲೂ ಪ್ರವೇಶಿಸಿವೆ.

ಶರೀಫರು ಪ್ರೌಢ, ಗ್ರಾಂಥಿಕ ಭಾಷೆಯಲ್ಲೂ ಬರೆಯುತ್ತಾರೆ. ಉದಾ: ಧೀರ ಸಮರ ಗಂಭೀರ ಅತಿ ಸುಂದರ ಮೂರುತಿ, ಶೌರ್ಯ ವಿಚಾರ್ಯ ಪ್ರಾಕ್ರಮ್ಯ ಕಾರಣ ಕಪಿವರಮೂರುತಿ, ಬಾರಿ ಬಾರಿಗೆ ನುತ ಪರಮ ಹಿತಕರ ಜೀರುತ, ವಜ್ರ ಶರೀರ ಸಿರಾಮಯ ವೀರನರನ ಧ್ವಜಸಾರಥಿ, ಮೀರಿದ ಉಗ್ರ ಅಮೋರದಿ ಪೂರ್ಣ, ವಾರಿಧಿಯೊಳು ಘನಗೌರವ ನಿರ್ಮಿಸಿ, ಧಾರುಣೆ ಆತ್ಮಜ ಸೇರಿದ ಮಂದಿರ."

ಶರೀಫರ ಭಾಷೆಯ ಮೇಲೆ ಅವರ ಕಾಲದ ಸಾಹಿತ್ಯಿಕ ಭಾಷೆಯ ಪ್ರಭಾವವೂ ಆಗಿದೆ. ಶರೀಫರ ಕಾಲದಲ್ಲಿ ಸಾಹಿತ್ಯ ಕೃತಿಗಳು ಹಳಗನ್ನಡ ಭಾಷೆಯಲ್ಲಿ ರಚಿತವಾಗುತ್ತಿದ್ದು, ಅದರೊಂದಿಗೆ ಹೊಸಗನ್ನಡ ಪ್ರಯೋಗಗಳು ಬೆರೆಯುತ್ತಿದ್ದವು. ಇಂತಹ ಸಂಕ್ರಮಣಾವಸ್ಥೆಗೆ ಕೆಂಪು ನಾರಾಯಣನ 'ಮುದ್ರಾಮಂಜೂಷ' ಉತ್ತಮ ಉದಾಹರಣೆ. ಶರೀಫರಲ್ಲಿಯೂ ಅಲ್ಲಲ್ಲಿ "ವಾರಿಧಿಯೊಳು, ಹಾದಿಯೋಳ್, ವಚನದಿಂ' ಮೊದಲಾದ ಹಳಗನ್ನಡ ಪದಗಳು ಸ್ಥಾನ ಪಡೆದಿವೆ. 'ಲಾವಣಿ; 'ಹೋಳೀಪದ' 'ಕಾಲಜ್ಞಾನ' 'ಆರತಿಪದಗಳು' ಮುಂತಾದ ರಚನೆಗಳಲ್ಲಿ 'ಜಾನಪದ ಮಟ್ಟು'ಗಳನ್ನು ಬಳಸಿದರೂ, ಭಾಷೆ ಬಹುಮಟ್ಟಿಗೆ ಗ್ರಾಂಥಿಕ ರೂಪದಲ್ಲಿಯೇ ಬಳಕೆಯಾಗಿದೆ. ಆದರೆ 'ಪದಗಳಲ್ಲಿ' ಧಾರವಾಡ-ಕನ್ನಡದ ಆಡು ಮಾತು. ಗ್ರಾಮೀಣ ರೂಪಗಳ ಮಿಶ್ರಣವಿರುವ ಗ್ರಾಂಥಿಕ ಕನ್ನಡವೇ ಪ್ರಧಾನವಾಗಿ ಬಳಕೆಯಾಗಿದೆ ಎಂದು ಹೇಳಬಹುದು.

'ಮೊಹರಮ್ ಪದ' ಗಳಿರುವ 'ರಿವಾಯತ್' ಗಳ ಭಾಷೆಯೇ ಬೇರೆ. ವಿಷಯಕ್ಕೆ ತಕ್ಕಂತೆ ಭಾಷೆಯ ಸ್ವರೂಪವನ್ನು ನಿರ್ಧರಿಸುತ್ತಾರೆ. ಆದ್ದರಿಂದ 'ಕನ್ನಡ'ದ ಜೊತೆ ಉರ್ದು' ಭಾಷೆಯ

ಪದಗಳು ಹೆಚ್ಚಾಗಿ ಸೇರಿವೆ. ಕೆಲವು ಉರ್ದು ಪದಗಳು ಕನ್ನಡದ ಪ್ರತ್ಯಯವನ್ನು ಅಂಟಿಸಿಕೊಂಡಿವೆ. ಉದಾ: ಫೌಜ, ಲಡಾಯಕ್ಕ, ಸಾಬತ್ತು, ಮಹೌ, ಶಹಾದತೋ ಇತ್ಯಾದಿ.

ಕೆಲವೊಮ್ಮೆ ಕನ್ನಡ ಮತ್ತು ಉರ್ದು ಭಾಷೆಯ ಪದಗಳನ್ನು ಸೇರಿಸಿ ಒಟ್ಟೊಟ್ಟಿಗೆ ಬರೆದುಬಿಡುತ್ತಾರೆ. ಉದಾ: "ಓದಿಕೋ ಪುರಾಣ ಓದಿಕೋ ಕಿತಾಬ ಯಾತಕ್ಕಾಡಬೇಕು......" "ಐಸುರ ಬಲು ಹಾನಿಯೇನಲೋ" ಎಂಬ ರಿವಾಯತ್‌ನಲ್ಲಿ 'ಖೇಲೋಜಿ, ಬೋಲೋಜಿ' ಎಂಬ ಎರಡು ಪದಗಳನ್ನು 'ಪಾಪದ' ಎಂಬ ಕನ್ನಡ ಪ್ರತ್ಯಯದ ಪದದೊಂದಿಗೆ ಬಳಸಿದ್ದಾರೆ. 'ಅಲಾವಿ ಪದ'ಗಳು ಮತ್ತು ಹಿಂದು–ಮುಸ್ಲಿಂ ಸಂಸ್ಕೃತಿ ಸಂಗಮಪದ'ಗಳಲ್ಲಿ ಮಿಶ್ರಣದ ಭಾಷೆ ಹೆಚ್ಚಾಗಿ ಬಂದಿದೆ. ಮೊಹರಮ್ ಹಬ್ಬದ ಪಾರಿಭಾಷಿಕ ಪದಗಳೂ ಜೊತೆಯಲ್ಲಿ ಸೇರುತ್ತವೆ. "ಐಸುರ ಮೋರುಮ ದಸರೆಕ" ಎಂಬ ರಿವಾಯತ್ ಹೆಸರೇ ಹೇಳುವಂತೆ ಮೊಹರಂ ಮತ್ತು ದಸರಾ ಹಬ್ಬಗಳೆರಡರ ಸಮೀಕರಣದೊಂದಿಗೆ, ಕನ್ನಡ–ಉರ್ದು ಭಾಷೆಗಳ ಮಿಶ್ರಣದಲ್ಲಿ ಅತ್ಯಂತ ಅರ್ಥಪೂರ್ಣವಾಗಿ ಮೂಡಿಬಂದಿದೆ. ಕೆಲವೊಮ್ಮೆ ಮಿಶ್ರಣ ಅಸಹಜವಾಗಿದ್ದು, ಅರ್ಥಕ್ಕೆ ಬಾಧಕವಾಗುವುದೂ ಉಂಟು. ಉದಾ: 'ದಶಾವತಾರಕಾ ಕೃಷ್ಣ" ಎಂಬ ಕನ್ನಡ 'ರಚನೆ' ಯಲ್ಲಿರುವ ದಶಾವತಾರಕಾ' ಎಂಬ ಪದ.

ಕೇಶಿರಾಜ 'ಶುದ್ಧಗೆ'ಯಲ್ಲಿ ಅಂದರೆ ಶುದ್ಧ ಕನ್ನಡದಲ್ಲಿ 47 ಅಕ್ಷರಗಳಿವೆ ಎಂದು ಹೇಳಿದ್ದರೂ, ಶರೀಫರು ಪ್ರಾಚೀನ ವೈಯಾಕರಣಿಗಳ ಅಭಿಮತವನ್ನೇ ಅನುಸರಿಸಿ "ಐವತ್ತೆರಡು" ಅಕ್ಷರಗಳಿವೆ ಎಂದು ಹೇಳಿದ್ದಾರೆ. ಆದರೆ ಬರವಣಿಗೆಯಲ್ಲಿ ಮಾತ್ರ ಆಧುನಿಕ ಕನ್ನಡದಲ್ಲಿರುವ ಅಕ್ಷರಗಳನ್ನಷ್ಟೇ ಬಳಸಿದ್ದಾರೆ.

ಶರೀಫರು 'ಒತ್ತಕ್ಷರ'ಗಳನ್ನು ಬಳಸಿದ್ದಾರೆ. ಗ್ರಾಮ್ಯ ಪ್ರಯೋಗವನ್ನು ಬಳಸುವಾಗ ಕೆಲವೊಮ್ಮೆ ವಿಜಾತೀಯ ಒತ್ತಕ್ಷರಗಳನ್ನು ಸಜಾತೀಯ ಒತ್ತಕ್ಷರಗಳಾಗಿ ಮಾಡಿಕೊಂಡು ಬಳಸುತ್ತಾರೆ. ಉದಾ: ಉಪ್ಪನ್ನಾ. ಇದು 'ಉತ್ಪನ್ನ'ದ ಗ್ರಾಮೀಣ ರೂಪ.

ಕೆಲವೊಮ್ಮೆ ಒತ್ತಕ್ಷರಗಳು 'ವಿರಳಾಕ್ಷರ'ಗಳಾಗುತ್ತವೆ. ಉದಾ: ಪಾತರದವಳ ಅಗೀನ.

ಜನರನ್ನು ಉದ್ದೇಶಿಸಿ ಪದರಚನೆ ಮಾಡುವುದರಿಂದ ಪದಗಳಲ್ಲಿ ಅಲ್ಲಲ್ಲಿ 'ಅಣ್ಣಾ, ಅಕ್ಕ, ಅಬೇ' ಮೊದಲಾದ ಪ್ರಯೋಗಗಳು ಬರುತ್ತವೆ. 46 'ಸಲ್ಲು'ಗಳಿರುವ 'ಬುಡುಬುಡಿಕ್ಯಾ' ಎಂಬ ಪದದಲ್ಲಿ ಬಹುಮಟ್ಟಿನ ಸಾಲುಗಳ ಕೊನೆಯಲ್ಲಿ "ತಾಯಿ, ಅಮ್ಮ, ಅವ್ವ, ತಂಗಿ, ಮಗಳೆ" ಎಂಬ

ಪದಗಳಿವೆ. ಈ ರೀತಿಯ ನಿರೂಪಣೆ 'ಆತ್ಮೀಯತೆ' ಯನ್ನು ತಂದುಕೊಡುತ್ತದೆ. ಇಂತಹ ಬರವಣಿಗೆ ವಚನಕಾರರಲ್ಲಿ ಮತ್ತು ಹರಿದಾಸರಲ್ಲೂ ಬಂದಿದೆ. "ಅಲ್ಲೀಕೇರಿಗೆ ಹೋಗುನು ಬರ್ತಿರೇನ್ರೇ ನೀವು, ಒಲ್ಲದಿದ್ದರೆ ಇಲ್ಲೆ ಇರತೀರೇನ್ರೇ" "ಕಲ್ಲೌ ಮಲ್ಲೌ ಕುಡಿಕೊಮಡು ದೀವಳಿಗೆಯ ಹಬ್ಬದಲ್ಲಿ, ಉಲ್ಲಾಸದಿಂದ ಅಲ್ಲಮಪ್ರಭುವಿನ ಮರತಿರೇನ್ರೇ 'ಇಲ್ಲೇ ಇರತೀರೇನ್ರೇ ಎಂಬ ಪಲ್ಲವಿ, ಅನುಪಲ್ಲವಿಗಳಲ್ಲಿ ಆತ್ಮೀಯರು ಪರಸ್ಪರ ಮಾತನಾಡಿಕೊಳ್ಳುವ ಧಾಟಿ ಇದೆ. ವ್ಯಕ್ತಿಗಳ ಹೆಸರುಗಳೂ ಬಂದು ಭಾಷೆಗೆ ಸಹಜತೆಯ ಲೇಪ ಬಂದಿದೆ; ಘಟನೆ ದೃಶ್ಯ ರೂಪವನ್ನು ಪಡೆದಿದೆ.

ಶರೀಫರು ವಿಷಯವನ್ನು ಕಣ್ಣಿಗೆ ಕಟ್ಟುವಂತೆ ನಿರೂಪಿಸುವುದರಲ್ಲಿ, ನಾಟಕೀಯ ಸ್ಪರ್ಶ ನೀಡುವುದರಲ್ಲಿ ಸಿದ್ಧಹಸ್ತರು. ಅನುಭಾವದ ವಿಷಯವನ್ನು ದೃರ್ಶಯ ರೂಪದಲ್ಲಿ ಚಿತ್ರಿಸಿರುವುದಕ್ಕೆ "ಬಿದ್ದಿಯಬೇ ಮುದುಕಿ" ಎಂಬ ಪದ ಉತ್ತಮ ಉದಾಹರಣೆ. ಮಠದ ಗುರುವನ್ನು ನಿಂದಿಸಿದಂತಹ 'ನಿಂದಕ'ನ ಚಿತ್ರ ಹೀಗಿದೆ. "ಹಟದಿ ನಮ್ಮನ್ಯಾಕ ನೋಡುತಿ ಒಣ, ಕಟಗಿಯತೆ ಸೆಟೆದುಕೊಂಡು ಮಾತನಾಡುಕಿ, ಚಟಕಿ ಹೊಡೆದು ಬಟ್ಟ ಕುಣಿಸಿ, ಕಠಿಣ ಕಲಹ ಗುಣ ಗುಣಗಳೆಣಿಸಿ, ಕಟಕಿ ದೋಷವು ತಟ್ಟಿತೋ ಹಿರಿಯ ಮಠದ ಪಾದಸಾಕ್ಷಿ".

ಶರೀಫರು ದ್ವಿತೀಯಾಕ್ಷರ ಪ್ರಾಸವನ್ನು ಬಹುಮಟ್ಟಿಗೆ ಕಟ್ಟುನಿಟ್ಟಾಗಿ ಪಾಲಿಸುತ್ತಾರೆ. ಅಂತ್ಯಾಕ್ಷರ ಪ್ರಾಸ, ಅನುಪ್ರಾಸಗಳು ಧಾರಾಳವಾಗಿ ಬರುತ್ತವೆ. ಪದಗಳನ್ನು, ಪದಗುಚ್ಛಗಳನ್ನು ವಾಕ್ಯಗಳ ಅಂತ್ಯದಲ್ಲಿ ಪ್ರಾಸದಂತೆ ತರುವುದುಂಟು. ಕೆಲವೊಮ್ಮೆ ಇಡೀ ವಾಕ್ಯವೇ ಪುನರುಕ್ತವಾಗುತ್ತಾ ನಾದ ತರುವುದುಂಟು. ಉದಾ: 'ಸದಾನಂದ ಪರಮಾತ್ಮ ಬೋಧಮಯ' ಎಂಬ ಪದದಲ್ಲಿ "ಇದೇ ಬ್ರಹ್ಮಜ್ಞಾನ ನೋಡಿಕೋ. ಇದೇ ಬ್ರಹ್ಮಜ್ಞಾನ" ಎಂಬ ಸಾಲು ಪಲ್ಲವಿ ಮತ್ತು ಎಲ್ಲ 'ಸಲ್ಲು' ಗಳ ಕೊನೆಯ ವಾಕ್ಯವಾಗಿ ಬರುತ್ತದೆ. ಬ್ರಹ್ಮಜ್ಞಾನಕ್ಕೆ ಒತ್ತು ನಿಡಿ, ಮನಕ್ಕೆ ನಟಿಸಲು ಶಬ್ದಾಲಂಕಾರ ನೆರವಾಗಿದೆ. ಕೆಲವೊಮ್ಮೆ ಶಬ್ದಾಲಂಕಾರ ವಿಫಲವಾಗುವುದೂ ಉಂಟು. ಉದಾ: "ಮನಸೇ ಮನಸಿನ ಮನಸ ನಿಲ್ಲಿಸುವುದು, ಮನಸ್ಸಿನ ಮನ ತಿಳಿಯುವ ಮನಬ್ಯಾರೆಲೋ ಮನಸೇ".

ಒಂದೇ ವಾಕ್ಯವನ್ನು ಎರಡು ಬಾರಿ ಹೇಳಿ. ಅದನ್ನೇ ಪಲ್ಲವಿಯಾಗಿ 'ಪದ' ರಚಿಸುವುದೂ ಉಂಟು. ಉದಾ: ಬೀಳಬಾರದೋ ಕೆಸರಿನೊಳು ಜಾತಿ, ಬೀಳಬಾರದೋ ಕೆಸರಿನೊಳು ಜಾರಿ".

ಶರೀಫರು ಕನತೆಯ ನಡುವೆ ಇದ್ದು, ಅವರ ಭಾಷೆಯ ಸವಿಯನ್ನು ಚೆನ್ನಾಗಿ ಅರಿತವರು. "ಮನಿ ಮನಿ, ಬೈಲು ಬೈಲು" ಮುಂತಾದ ದ್ವಿರುಕ್ತಿಗಳು; 'ಬದುಕು ಬಾಳೆವು' ಪ್ಯಾಟಿ ಪೇಟೆ'

ಮೊದಲಾದ ಸಮಾನಾರ್ಥಕ ಭಿನ್ನ ರೂಪಗಳು; 'ಎಬಡಾ ತಬಡಾ, ತಾಗು–ಬಾಗು, ಕಡ್ಡಿ–ಕಸರು, ಗುಲ್ಲಾ–ಗಂಟಿ, ಹಳ್ಳ–ಕೊಳ್ಳ" ಮೊದಲಾದ ಜೋಡಿ ಪದಗಳು ಭಾಷೆಯಲ್ಲಿ ಸೇರ್ಪಡೆಯಾಗಿವೆ. "ಬಟ್ಟೆ ಕಟ್ಟಿಸಿದೆ ರುದ್ರವ್ವಾ" ಎಂಬ ಪದದಲ್ಲಿರುವ 'ಬಟ್ಟೆ ಕಟ್ಟಿಸಿವೆ' ಎಂಬುದು 'ಗರ್ಭಿಣಿ' ಎಂಬರ್ಥದ ನುಡಿಗಟ್ಟಿ (?) ರಬೇಕೆಂದು ಕಾಣುತ್ತದೆ.

ಭಾರತದ–ವಿಶೇಷವಾಗಿ ಉತ್ತರ ಕರ್ನಾಟಕದ ಹಿಂದೂ, ಮುಸ್ಲಿಂ ಜನಾಂಗ ಆಚರಿಸುವ ಹಬ್ಬ–ಹರಿದಿನಗಳು, ಜಾತ್ರೆ ಮೊದಲಾದ ಸಾಂಸ್ಕೃತಿಕ ವಿವರಗಳು ಶರೀಫರ ಪದಗಳಲ್ಲಿ ಸ್ಥಾನ ಪಡೆದಿವೆ. ಪಂಚಮಿ ಹಬ್ಬ, ದಸರಾ, ಮೊಹರಮ್ ಜೊತೆಗೆ ಉತ್ತರ ಕರ್ನಾಟಕಕ್ಕೆ ವಿಶಿಷ್ಟವಾದ ಶೀಗಿ ಹುಣ್ಣಿವಿ, ರಂಡೀ ಹುಣ್ಣಿವೆ, ಅಲ್ಲಿಕೇರಿ, ಎಲ್ಲಮ್ಮನ ಜಾತ್ರೆ ಮೊದಲಾದವುಗಳು ವಿಧಿ–ವಿಧಾನಗಳೊಂದಿಗೆ ವರ್ಣಿತವಾಗಿವೆ. ಸಾಂಸ್ಕೃತಿಕ ವೈಶಿಷ್ಟ್ಯವುಳ್ಳ ಅನೇಕ ಪದಗಳನ್ನು ಬಳಸಿ, ಸಾಂಸ್ಕೃತಿಕ ಕ್ಷೇತ್ರಕ್ಕೆ ಉತ್ತಮ ಕೊಡುಗೆ ನೀಡಿದ್ದಾರೆ.

'ವಸ್ತು' ಅಥವಾ 'ವಿಷಯ' ಯಾವುದೇ ಇರಲಿ, ಅದಕ್ಕೆ ಆಧ್ಯಾತ್ಮಿಕ ಸ್ಪರ್ಶ ಕೊಡುವುದು ಶರೀಫರ ಪ್ರಧಾನ ಶೈಲಿ. 'ದೇಸಿ ಸಂಸ್ಕೃತಿ' ಮತ್ತು ಪಾಶ್ಚಾತ್ಯ ಸಂಸ್ಕೃತಿಗಳ' ಮಿಶ್ರಣದೊಂದಿಗೆ ಜನ ಜೀವಿಸುತ್ತಿದ್ದ ಕಾಲದಲ್ಲಿ ಶರೀಫರು ಜೀವಿಸಿದ್ದರು. ಎರಡೂ ಸಂಸ್ಕೃತಿಗಳನ್ನು 'ವಸ್ತು'ವಾಗಿ ಸ್ವೀಕರಿಸುತ್ತಾರೆ.

ಏಸೂರ ತಿರುಗಿದರು ಬೀಸೋಣ ಬಿಡದವ್ವಾ, ಬಿಸೋಣ ಬರ್‍ರೆವ್ವ ಹಾಡ್ಯಾಡಿ" ನಗಬಾರದಮ್ಮ ಲಗುಬಗಿ ಸುಮ್ಮನೆ ಬೀಸಮ್ಮ" ಎಂಬ ಪದಗಳಲ್ಲಿ ಹಾಡುಗಳನ್ನು ಹಾಡುತ್ತಾ ರಾಗಿ, ಗೋಧಿ, ಜೋಳ ಮುಂತಾದವನ್ನು ಬೀಸುವ ಕಲ್ಲಿನಲ್ಲಿ ಬೀಸಿ ಹಿಟ್ಟು ಮಾಡುವ ಬಗೆಯನ್ನು ವರ್ಣಿಸುತ್ತಾ, ಪ್ರತಿಯೊಂದು ಪರಿಕರಕ್ಕೂ ಆಧ್ಯಾತ್ಮಿಕ ಅರ್ಥದ ಲೇಪವನ್ನು ಕೊಡುತ್ತಾರೆ. "ಅರಗೊಡವಿನ್ನೇನು ಮಗಳೆ, ಮುನ್ನೋಡಿ ಹಂಜಿ ನೂಲಮ್ಮಾ" ಎಂಬ ಪದ ಚರಕದಿಂದ ನೂಲು ತೆಗೆದು, ಬಟ್ಟೆ ನೇಯು ದೇಸೀ ವಿಧಾನವನ್ನು ವಿವರಿಸುತ್ತದೆ. "ಸಖಿ ಬೆಣ್ಣೆ ಮಾರುವ ನೀನಾರೆ" ಎಂಬಲ್ಲಿ ಹೆಂಗಸರು ಬೆಣ್ಣೆ ಮಾರುವ ಗ್ರಾಮೀಣ ಉದ್ಯೋಗ, ಕುಂಬಾರಕಿ ಈಕೆ ಕುಂಬಾರಕಿ" ಎಂಬಲ್ಲಿ ಮಣ್ಣಿನಿಂದ ಮಡಿಕೆ, ಕುಡಿಕೆ ಮಾಡಿ, ಮಾರುವ ಉದ್ಯೋಗಗಳ ವಿವರಗಳಿವೆ. "ಜಾಣ ಹೆಂಗಸರಾಟ ನೋಡು ಜಲದ ಬಾವ್ಯಾಗ" ಎಂಬಲ್ಲಿ ಬಾವಿಗೆ ಹೋಗಿ ನೀರು ಸೇದಿ ತರುವ ಗ್ರಾಮೀಣ ಬದುಕಿನ ಉಲ್ಲೇಖವಿದೆ. ಈ ರೀತಿ ದೇಸಿ ಸಂಸ್ಕೃತಿಯ ಜೀವನವನ್ನು ವಿವರಿಸುತ್ತಾ, ಅದಕ್ಕೆ ಆಧ್ಯಾತ್ಮಿಕ ಲೇಪ ಕೊಡುತ್ತಾರೆ.

ವಸಾಹತುಶಾಹಿಯ ಆಕ್ರಮಣ, ಯಂತ್ರ ನಾಗರಿಕತೆಗೆ ಸ್ಪಂದಿಸಿ ರಚಿಸಿರುವ "ಗಿರಣಿ ವಿಸ್ತಾರ ನೋಡಮ್ಮಾ" ಎಂಬ ಪದ ಈಗಾಗಲೇ ಸಾಕಷ್ಟು ಚರ್ಚಿಸಲ್ಪಟ್ಟಿದೆ. 'ಗಿರಣಿ ವಿಸ್ತಾರ' ಎಂಬ ಶೀರ್ಷಿಕೆಯೇ ವಸಾಹತುಶಾಹಿಯ ಆಕ್ರಮಣದ ವ್ಯಾಪಕತೆಯ ಸಂಕೇತವಾಗಿದೆ. "ಸೂಜಿಯೇ ನೀನು ಸೂಜಿಯೇ, ಈ ರಾಜ್ಯದೊಳಗೆಲ್ಲ ತೇಜ ಕಾಣಿಸುವಂಥ" ಎಂಬ ಪದದಲ್ಲಿ ಸೂಜಿಯಂತಹ ಸಲಕರಣೆಗಳು ಯಂತ್ರಗಳ ಭಾಗವಾಗಿರುವುದನ್ನು ಗಮನಿಸಿ, ವರ್ಣಿಸುವಾಗಲೇ "ಮರವಿಯ ಅರವಿಯ ಹೊಲಿವಂಥ ಸೂಜಿಯೇ" "ಅಂಗಳ ಬೈಲೊಳು ಹೋದಂಥ ಸೂಜಿಯೇ" ಎಂದು ಆಧ್ಯಾತ್ಮಿಕ ಸ್ಪರ್ಶ ನೀಡುತ್ತಾರೆ. ಭಾರತದಲ್ಲಿ ಮೊದಲಿನಿಂದಲೂ ಶಿಕ್ಷಣವನು ಕಲಿಸುವ ಪದ್ಧತಿ ಹಲವಾರು ರೀತಿಗಳಲ್ಲಿ ಜಾರಿಯಲ್ಲಿದ್ದರೂ, ಬ್ರಿಟಿಷರು ಈ ಪ್ರಕ್ರಿಯೆಗೆ ಹೊಸ ರೂಪ ನೀಡಿದರು. ಕೊಠಡಿಗಳಲ್ಲಿ ಶಿಕ್ಷಣ ಕಲಿಸುವ ಅಸಂಖ್ಯ ಶಾಲೆಗಳು, ವಿದ್ಯಾಲಯಗಳು ಸ್ಥಾಪಿತವಾದವು. ಇದನ್ನು ಗಮನಿಸಿದ ಶರೀಫರಿಗೆ "ಸಾಲಿ ಸದ್ಗುರುವಿನ ಮಾಲು ಮಂಟಪವಿದು, ಮೇಲೆ ಕಾಣಿಸುವುದು ಭೂಲೋಕದಲ್ಲಿ" ಎಂಬಂತೆ ಲೌಕಿಕ ವಿದ್ಯೆ ಕಲಿಸುವ ಎಲ್ಲ ಶಾಲೆಗಳಿಗಿಂತ ಉನ್ನತ ಸ್ಥಾನದಲ್ಲಿ ಸದ್ಗುರು ನಿರ್ಮಿಸಿರುವ ಆರು ಕುಂಭಗಳು, ಒಂಭತ್ತು ಬಾಗಿಲುಗಳ ಮಹಲಿನ ಮಂಟಪವೆಂಬಂತೆ ಮಾನವ ದೇಹ ಕಾಣಿಸುತ್ತಿದೆ. ಶಿವನ ಧ್ಯಾನಕ್ಕೆ ಅನುಕೂಲವಾಗುವಂತಹ ಅಕ್ಷರಗಳನ್ನು ಕಲಿಸುವ, ತತ್ವಗಳ ಸಾರವನ್ನು ಒಳಗೊಂಡ 'ಸಹಜ ಶಿಕ್ಷಣ' 'ಮಾಸ್ತ'ನಿಂದ ಲಭಿಸುತ್ತಿದೆ ಎಂದಿದ್ದಾರೆ. ಹೀಗೆ ವಸಾಹತುಶಾಹಿ ಸಂಸ್ಕೃತಿಯ ವಿವರಗಳನ್ನು ನೀಡುತ್ತಿರುವಾಗಲೇ, ಅವುಗಳಿಗಿಂತ ದೇವರೇ ಶ್ರೇಷ್ಠ ಎಂದು ತೀರ್ಮಾನಿಸುವ ಮೂಲಕ ಆ ಸಂಸ್ಕೃತಿಯನ್ನು ಪ್ರತಿಭಟಿಸುತ್ತಿದ್ದರೆ ಎಂದು ಊಹಿಸಬಹುದು.

ಮುಖ್ಯ ವಿಷಯ ಅಥವಾ ಸಿದ್ಧಾಂತವೊಂದನ್ನು ಪ್ರಾರಂಭದ 'ಪಲ್ಲ'ದಲ್ಲಿ ಹೇಳಿ, ಮುಂದಿನ 'ಸಲ್ಲು/ಚರಣ' ಗಳಲ್ಲಿ ವಿವರಿಸುವುದು ಶರೀಫರ ಪ್ರಧಾನ ಶೈಲಿ. ಇದರಲ್ಲಿ ಮೂರು ಬಗೆಗಳಿವೆ.

1. ನೇರ, ನಿರಲಂಕಾರ ನಿರೂಪಣೆ.
2. ರೂಪಕ, ಪ್ರತಿಮೆ, ಸಂಕೇತಗಳ ಮೂಲಕ ನಿರೂಪಣೆ.
3. ಲೌಕಿಕ ವಿವರಗಳನ್ನು ಅಲೌಕಿಕ ವಿವರಗಳೊಂದಿಗೆ ತಳುಕು ಹಾಕುವ ವಿಧಾನ.

ಮೊದಲನೆಯ ವಿಧಾನಕ್ಕೆ ಅತ್ಯುತ್ತಮ ಉದಾಹರಣೆ:

ಬಿದುರು ನಾನಾರಿಗಲ್ಲದವಳು
ಹುಟ್ಟುತ ಹುಲ್ಲಾದೆ ||ಪ||
ಬೆಳೆಯುತ ಮರವಾದೆ
ಸುಂದರ ಸ್ತ್ರೀಯರಿಗೆ ಕೇರುವ ಮರವಾದೆ ||1||

ಮಾನವನ ಜೀವನದಲ್ಲಿರುವ 'ಬಿದರಿ'ನ ಪಾತ್ರದ ಸರಳ, ಸುಂದರ ನಿರೂಪಣೆಯಿದ್ದು, ಉತ್ತರ ಕರ್ನಾಟಕದ ಸಂಸ್ಕೃತಿ ಮತ್ತು ಆಧ್ಯಾತ್ಮಿಕ ಸ್ಪರ್ಶವನ್ನೂ ಪಡೆದಿದೆ. ನಿರೂಪಣಾ ರೀತಿಯಲ್ಲಿ "ಗೋವಿನ ಹಾಡ"ನ್ನು ನೆನಪಿಸುತ್ತದೆ.

ಎರಡನೆಯ ವಿಧಾನದ 'ಪದ'ಗಳು ಅಧಿಕ ಸಂಖ್ಯೆಯಲ್ಲಿ ದೊರೆಯುತ್ತವೆ. ಇಂದ್ರಿಯಗಳಿಗೆ ಅತೀತವಾದ, ಅಮೂರ್ತವಾದ 'ಅನುಭಾವ;ದ ಅನುಭವವನ್ನು ಇಂದ್ರಿಯಗಮ್ಯವಾಗುವಂತೆ ಸರಳವಾಗಿ ವಿವರಿಸಲು ಶರೀಫರ ಈ ಮಾರ್ಗವನ್ನು ಅನುಸರಿಸುತ್ತಾರೆ. ಇಂತಹ ಪ್ರತಿಮಾತ್ಮಕ ನಿರೂಪಣೆ ವಚನಕಾರರು ಮತ್ತು ಹರಿದಾಸರಲ್ಲೂ ಇದ್ದು 'ಬೆಡಗಿನ ವಚನ' 'ಮುಂಡಿಗೆ' ಗಳೆಂದು ಕರೆಯಲ್ಪಟ್ಟಿವೆ. ಧ್ವನ್ಯರ್ಥಕ್ಕೆ ಇಲ್ಲಿ ಅಗ್ರಪಟ್ಟ, ಸಾಂಕೇತಿಕ ಅರ್ಥದಲ್ಲಿಯೂ ಒಮ್ಮೆಲೇ ತನ್ನನ್ನು ಪೂರ್ತಿಯಾಗಿ ಹಚ್ಚಿಕೊಳ್ಳದೆ, ಓದುಗರನ್ನು ಕಾಡಿ, ಚಿಂತನೆಗೆ ಕರೆದೊಯ್ಯುತ್ತದೆ.

ಉದಾಹರಣೆ:

ಚೋಳ ಕಡಿತು ನನಗೊಂದು ಚೋಳ ಕಡಿತು
ಕಾಲ ಕತ್ತಲದೊಳಗ ಕೂತಿತ್ತು – ನನ್ನ
ಕಂಡು ಬಂತು,
ಚೋಳ ಕಡಿತು ನನಗೊಂದು ಚೋಳ ಕಡಿತು

ಕತ್ತಲೆಯಲ್ಲಿದ್ದ 'ಚೋಳ ಅಥವಾ ಚೇಳು' ಇದ್ದಕ್ಕಿದ್ದಂತೆ ಬಂದು ಕಚ್ಚಿದ ಸಾಮಾನ್ಯ ಘಟನೆಯನ್ನು ದೃಶ್ಯರೂಪದಲ್ಲಿ ಚಿತ್ರಿಸುತ್ತಾ, ಅದಕ್ಕೆ ಆಧ್ಯಾತ್ಮಿಕ ಅರ್ಥ ನೀಡಿದ್ದಾರೆ. ಚೇಳಿನ ಕಡಿತ 'ಆಧ್ಯಾತ್ಮಿಕ ಜಾಗೃತಿ'ಯ ಸಂಕೇತವಾಗುತ್ತದೆ. ಸ್ಥೂಲ, ಸೂಕ್ಷ್ಮ, ಕಾರಣ ಶರೀರಗಳ ಒಳಗಿದ್ದು, ಪರಮಾತ್ಮನೊಳಗೆ ಬೆಳೆದಿದ್ದ ಈ ಜಾಗೃತಿ ಈಗ ಸ್ಥೂಲದೇಹದೊಳಗೆ ಮಲಗಿತ್ತು; ದೇವರ ಮನೆಯ ಮೂಲೆಯಲ್ಲಿತ್ತು. ಈಗ ಇದ್ದಕ್ಕಿದ್ದಂತೆ ಊರ್ಧ್ವಮುಖಿಯಾಗಿ, ಮೂರು ಲೋಕ ಬೆಳಗುವಂತೆ ಮೇಲೆ ಬಂದು ಕಚ್ಚಿ, ಹುಚ್ಚು ಹಿಡಿಸಿತು ಎಂದಿದ್ದಾರೆ. ಪುರಂದರದಾಸರೂ ಸಹ ಇಂತಹ ಸ್ಥಿತಿಯನ್ನು 'ಹುಚ್ಚು ಹಿಡಿಯುವ' ಕ್ರಿಯೆಯ ಜೊತೆ ಸಮೀಕರಿಸಿದ್ದಾರೆ.

"ಕೋಡಗನ ಕೋಳಿ ನುಂಗಿತ್ತ" "ತರವಲ್ಲ ತಗಿ ನಿನ್ನ ತಂಬೂರಿ" "ಗಿರಣಿ ವಿಸ್ತಾರ ನೋಡಮ್ಮಾ" "ಅಳಬೇಡ ತಂಗಿ" ಗುಡಿಯ ನೋಡಿರಣ್ಣಾ" "ಹಾದರ ಮಾಡಿದೆನೆ" "ನಡಿ ನಡಿಯುತ ಗಂಡ ನಡ ಮುರಿದೊದೆದೆನ್ನ" "ಸೋರುತಿಹುದು ಮನೆಯ ಮಾಳಿಗಿ" "ಸೇದಿದಿಯಾ ಬತ್ತಿ ನಿ

ಸೇದಿದಿಯಾ" "ಎಲ್ಲರಂಥವನಲ್ಲ ನನ ಗಂಡ" – ಮುಂತಾದ ಅನೇಕ ಪದಗಳು ಈ ಗುಂಪಿಗೆ ಸೇರುತ್ತವೆ. ಕೊಡ, ತಂಬೂರಿ, ಅಂಗಿ, ಗುಡಿ, ಸಾಲೆ, ಮನೆ ಮೊದಲಾದವು 'ದೇಹ'; ಹಾವು, ಹುಚ್ಚುನಾಯಿ, ಕಪ್ಪೆಗಲು 'ಕಾಮ'; ಕಪಿ, ಭ್ರಮರ 'ಮನಸ್ಸು'; ಕೋಲಿ 'ಜ್ಞಾನ' – ಮೊದಲಾದವುಗಳ ಸಂಕೇತಗಳಾಗುತ್ತವೆ. ಹಾಗೆಯೇ ಆರು, ಮೂರು, ಈರೈದು, ಒಂಭತ್ತು ದ್ವಾರಗಳು – ಮೊದಲಾದ ಕೆಲವು ಸಂಖ್ಯೆಗಳನ್ನು ಪ್ರಾಚೀನದಂತೆ ಆಧ್ಯಾತ್ಮಿಕ ಸಂಕೇತಗಳಾಗಿ ಬಳಸಿದ್ದಾರೆ.

ಲೌಕಿಕ ವಿವರಗಳನ್ನು ಅಲೌಕಿಕ ವಿವರಗಳೊಂದಿಗೆ ತಳುಕು ಹಾಕುವ ಮೂರನೇ ವಿಧಾನ ಎರಡನೆಯ ವಿಧಾನದಲ್ಲೇ ಸ್ವಲ್ಪ ಮಟ್ಟಿಗೆ ಲೀನವಾಗುತ್ತದೆ. ಕೆಲವೊಮ್ಮೆ ಪ್ರತ್ಯೇಕವೆಂಬಂತೆ ಎದ್ದು ಕಾಣುತ್ತದೆ. "ಕುಂಬಾರಕಿ ಈಕಿ ಕುಂಬಾರಕಿ" ಎಂಬ ಪದದಲ್ಲಿ "ಚಿನ್ನ ಎಂಬುವ ಮಣ್ಣನು ತರಿಸಿ, ತನು ಎಂಬುವ ನೀರನು ಹಣಿಸಿ, ಮನ ಎಂಬುವ ಹುದಲನು ಕಲಸಿ, ಗುಣ ಎಂಬುವ ಸೂಸನು ಹಾಕಿ" ಎಂಬಂತೆ ಸ್ಪಷ್ಟ ಹೋಲಿಕೆಗಳೊಂದಿಗೆ ಸಾಗುತ್ತದೆ. ಇಂತಹ ನಿರೂಪಣೆ ಅನೇಕ ಪದಗಳಲ್ಲಿ ಕಾಣುತ್ತದೆ.

ಎರಡು ಮತ್ತು ಮೂರನೆಯ ವಿಧಾನಗಳಲ್ಲಿ ಇರುವ ವ್ಯತ್ಯಾಸವೆಂದರೆ ಎರಡನೆಯ ವಿಧಾನದಲ್ಲಿ ಚಿಂತನೆಗೆ, ಧ್ವನಿಗೆ ಹೆಚ್ಚಿನ ಅವಕಾಶವಿದ್ದರೆ, ಮೂರನೆಯ ವಿಧಾನದಲ್ಲಿ ಹೋಲಿಕೆ ಸ್ಪಷ್ಟವಾಗಿ ಅರ್ಥವಾಗುತ್ತದೆ.

ಶರೀಫರು ಘಟನೆಯೊಂದನ್ನು 'ಕಥನ ಕವನ'ದ ರೂಪದಲ್ಲೂ ಬರೆಯಬಲ್ಲರು. ಇದಕ್ಕೆ "ವಾರಿಜಮುಖಿ ದೊಡ್ಡ ಶಹರ ಹುಬ್ಬಳ್ಳಿಯೊಳು" ಎಂಬುದು ಉತ್ತಮ ಉದಾಹರಣೆ. ದೀರ್ಘ ವಿಷಯಗಳ ನಿರೂಪಣೆಗೆ ಲಾವಣಿ, ಹೋಳಿಪದಗಳನ್ನು ಆಯ್ಕೆ ಮಾಡಿಕೊಳ್ಳುತ್ತಾರೆ.

ಕೇಳುಗರಲ್ಲಿ ಕುತೂಹಲ ಮೂಡುವಂತೆ ಮತ್ತು ಹಾಸ್ಯ ಉಕ್ಕುವಂತೆ ನಿರೂಪಿಸುವ ವಿಧಾನವೂ ಎಂಟು. ಇಕ್ಕೆ "ಕೋಡಗನ ಕೋಳಿ ನುಂಗಿತ್ತಾ" "ಬುದ್ಧಿ ಇಲ್ಲವೇ ನಿನಗೆ ನಿದ್ರೆಯಂಬೋ ನಿಜ ಹಾದರಗತ್ತೀ?" ಎಂಬ ಪದಗಳು ಉತ್ತಮ ಉದಾಹರಣೆಗಳಾಗಿವೆ. "ಕುಟ್ಟಲಿಕ್ಕೆ ಬಂದ ಮುದುಕಿಯ ನೊಣವು ನುಂಗಿತ" ಎಂಬ ಸಾಲಂತೂ ನಗುವಿನ ಬುಗೆಯನ್ನೇ ಚಿಮ್ಮಿಸುತ್ತದೆ.

ಶರೀಫರ ಭಾಷೆ ಕೆಲವೊಮ್ಮೆ 'ಗಾದೆ' ಗಳಂತೆ ಸತ್ವಪೂರ್ಣವಾದವು. ಉದಾ: "ಜುಟ್ಟಾಗಬಾರದು ಹಣ ನಿನ್ನ ತಲೆಗೆ, ಮೆಟ್ಟಾಗಬೇಕೋ ಕಾಲಿನ ಅಡಿಗೆ" "ಶತ್ರುವಲ್ಲವೋ ಹೆಣ್ಣು

ಹೊನ್ನು ಮಣ್ಣು ತಿಳಿದರೆ ಅವು ಮೂರು ಗುರು ಕೊಟ್ಟ ಕಣ್ಣು" "ಸ್ಥಿರವಲ್ಲ ಸಂಸಾರ ಕೆರವಿನಟ್ಟಿಯ ಸರಿ" ಇತ್ಯಾದಿ.

ಶರೀಫರು ಜನತೆಯ ಕವಿಯಾಗಿರುವುದರಿಂದ ಇವರ ಪದಗಳ ಉಚ್ಚಾರ, ಹಾಡುವ ಧಾಟಿಗಳಲ್ಲಿ ವ್ಯತ್ಯಾಸ; ಪದಗಳನ್ನು ಬಿಡುವ ಅಥವಾ ಸೇರಿಸುವ ಪರಿಪಾಠ ನಿರಂತರವಾಗಿ ನಡೆಯುತ್ತಾ ಬಂದಿದೆ. ಆದ್ದರಿಂದ ಇವರ ಪದಗಳೆಲ್ಲವೂ ಪ್ರಧಾನವಾಗಿ ಅಂಶಗಣ ಛಂದಸ್ಸಿನ ಲಯವನ್ನು ಪಡೆದಿದ್ದು, ಹಾಡುಗಾರರಿಗೆ ಸ್ವಾತಂತ್ರ್ಯ ನೀಡಿವೆ ಎಂದು ಹೇಳಬಹುದು.

ಶರೀಫರು ರಚಿಸಿರುವ ಅನ್ಯ ಸಾಹಿತ್ಯವನ್ನು ಗಮನಿಸಿದಾಗ 'ಇವಾಯತ್'ಗಳು ಮುಖ್ಯವಾಗುತ್ತವೆ. ಹಿಂದೂ–ಮುಸ್ಲಿಂ ಬಾಂದವ್ಯದ ಕೊಂಡಿಯಂತಿರುವ 'ಮೊಹತಂ' ಸಂದರ್ಭದಲ್ಲಿ ಹಾಡಿದ ಮದಗಳೇ ಉತ್ತರ ಕರ್ನಾಟಕದಲ್ಲಿ 'ಕರ್ಬಲಾ ಪದಗಳು, ರಿವಾಯತ ಪದಗಳು, ಅಲಾವಿ ಪದಗಳು' ಎಂದು ಕರೆಯಲ್ಪಟ್ಟಿವೆ. ಮೊಹತಂ ಆಚರಣೆಯ ಸಂದರ್ಭದಲ್ಲಿ 'ಅಲಂ' ಇಡುವ ಕೋಣೆಯ ಎದುರು ಅಲಾವಿ ತೋಡಿ, ಅಲಾವಿ ಸುತ್ತ ಪ್ರದಕ್ಷಿಣೆ ಹಾಕುತ್ತ ಹಾಡುವ ಹಾಡುಗಳು 'ಅಲಾವಿ ಪದ'ಗಳೆಂದು ಕರೆಯಲ್ಪಡುತ್ತವೆ. 'ಸವಾಲ್–ಜವಾಬ್– ಪದಗಳಲ್ಲಿ ಶರೀಫರು ಮೊಹರಂ ಆಚರಣೆ ಮತ್ತ ತತ್ತ್ವ ವೇದಾಂತಗಳಿಗೆ ಸಂಬಂಧಿಸಿದ ಅನೇಕ ಪ್ರಶ್ನೆಗಳನ್ನು ಎತ್ತಿಕೊಂಡು ನಿಗೂಢವಾಗಿ ಉತ್ತರಿಸುತ್ತಾ ಹೋಗುತ್ತಾರೆ. ಭಾಷಿಕವಾಗಿ ನೋಡಿದಾಗ ಕನ್ನಡ–ಉರ್ದು ಮಿಶ್ರಣ ಮತ್ತು ಸಾಂಸ್ಕೃತಿಕ ವೈಶಿಷ್ಟ್ಯದ ಪದಗಳು ಸೇರ್ಪಡೆಯಾಗಿವೆ. ನಿರೂಪಣಾ ವಿಧಾನದಲ್ಲಿ ವಿಶೇಷವೇನೂ ಇಲ್ಲ; ತತ್ವ ಪದಗಳ ರೀತಿಯಲ್ಲೇ ಇವೆ. 'ರಿವಾಯತ್'ಗಳನ್ನು ಕನ್ನಡದಲ್ಲಿ ರಚಿಸಿ, ಶರೀಫರು ಅತ್ಯುತ್ತಮ ಕಾಣಿಕೆ ನೀಡಿದ್ದಾರೆ.

ಉತ್ತರ ಕರ್ನಾಟಕದ ಜನಪ್ರಿಯ ಗೀತಪ್ರಕಾರವಾದ 'ಲಾವಣಿಲ ಗಳನ್ನು ಶರೀಫರು ಬರೆದಿದ್ದಾರೆ. ಇವುಗಳ ಸ್ವರೂಪದಲ್ಲಿ ಏಕತೆಯಿಲ್ಲ. ಕೆಲವು ರಚನೆಗಳಲ್ಲಿ 'ಏರು, ಇಳವು, ಚಾಲ' ಮುಂತಾದ ಉಪಶೀರ್ಷಿಕೆಗಳಿದ್ದರೆ ಕೆಲವೆಡೆಗಳಲ್ಲಿ ಇಲ್ಲ. 'ಪಲ್ಲ' ಎಂಬುದೂ ಎಲ್ಲ ಕಡೆ ಇಲ್ಲ. ಕೇವಲ ಸಂಖ್ಯಾನಿರ್ದೇಶನಗಳಿವೆ. ಸ್ವರೂಪದಲ್ಲಿ ದೀರ್ಘವಾಗಿವೆ. ವಸ್ತು–ಭಾಷೆ ತತ್ವಪದಗಳಲ್ಲಿ ಇರುವಂತೆಯೇ ಇವೆ.

ಶರೀಫರು ಐದು 'ದಂಡತ'ಗಳನ್ನು ಬರೆದಿದ್ದಾರೆ. ಇವುಗಳಲ್ಲಿ "ಶ್ರೀ ಶಿವಾಪರಾಧ ಸ್ತೋತ್ರ' ಎಂಬುದು ಶಂಖರಾಚಾರ್ಯರ "ಶ್ರೀ ಶಿವಪರಾಧ ಕ್ಷಮಾಪಣ ಸ್ತೋತ್ರ"ದ ಕನ್ನಡ

ರೂಪಾಂತರವಾಗಿದೆ ಎಂಬುದನ್ನು ವಿದ್ವಾಂಸರು ಗುರುತಿಸಿದ್ದಾರೆ. 'ದಂಡಕ' ಎಂಬುದು 'ವರ್ಣಸಮ ವೃತ್ತ'ವಾಗಿದ್ದು, ಎರಡು 'ನ' ಗಣಗಳ ಮುಂದೆ ಏಳು ಅಥವಾ ಏಳಕ್ಕಿಂತ ಹೆಚ್ಚು 'ರ' ಗಣಗಳು ಬರುವುದು ಅದರ ಸಾಮಾನ್ಯ ಲಕ್ಷಣವೆಂದು ವಿವರಿತವಾಗಿದೆ. ಆದರೆ ಕನ್ನಡದ ಮೊಟ್ಟ ಮೊದಲ ದಂಡಕವಿರಬಹುದೆಂದು ಗುರುತಿಸಲ್ಪಟ್ಟಿರುವ ಕ್ರಿ.ಶ. ಸು. 500ರಲ್ಲಿದ್ದ 'ಶ್ರೀಪಾದರಾಜ' ರ 'ಶ್ರೀ' ಲಕ್ಷ್ಮೀನೃಸಿಂಹ ಪ್ರಾದುರ್ಭಾವ ದಂಡಕ' ಎಂಬುದು ಮೇಲಿನ ಲಕ್ಷಣಗಳನ್ನು ಪಡೆದಿಲ್ಲ. ಅದೇ ರೀತಿಯಲ್ಲಿ ಶರೀಫರ ದಂಡಕಗಳೂ ಛಂದಃಶಾಸ್ತ್ರಜ್ಞರ ಲಕ್ಷಣಗಳಿಗೆ ಅನುಗುಣವಾಗಿ ಇಲ್ಲ. 'ಶ್ರೀ ಬಸವೇಶ್ವರ ದಂಡಕ' ದಲ್ಲಿ ವಿಭಜನೆಯಿಲ್ಲದೆ ಪಾದಗಳು ಸಾಗುತ್ತವೆ. 'ಕಾವಲವು' ಎಂಬ ಪದ ಬಹುಮಟ್ಟಿನ ಪಾದಗಳ ಅಂತ್ಯದಲ್ಲಿ ಬರುತ್ತದೆ. ಆರ್.ಪಿ. ಹಗಡೆಯವರು 'ರಗಳೆಯ ರೂಪದಲ್ಲಿ ಬರೆದಿಟ್ಟಿರುವ ಅನಿಯುತ ಪಾದಗಳ ಗದ್ಯದಂಡಕವಿರಬೇಕೆಂದು ತೋರುತ್ತದೆ' ಎಂದಿದ್ದಾರೆ. ಇನ್ನು ಮೂರು ದಂಡಕಗಳು 'ಪದ'ಗಳಂತೆ ಪಲ್ಲವಿ, ಅನುಪಲ್ಲವಿ, ಸಲ್ಲುಗಳು ಮತ್ತು ಅಂಕಿತದ ರೂಪದಲ್ಲಿವೆ. 'ಸಲ್ಲು'ಗಳ ಸಾಲುಗಳ ಸಂಖ್ಯೆಯಲ್ಲಿ ಏಕರೂಪತೆ ಇಲ್ಲ.

ಶರೀಫರ ಎರಡು 'ಹೋಳೀ ಪದ'ಗಳಾದ 'ಮೇಲಾರಲಿಂಗ' ಮತ್ತು 'ಪ್ರಮೀಲೆಗೆ' ಸಂಬಂಧಿಸಿದ ದೀರ್ಘ ಕಥನಕವನಗಳ ಮಾದರಿಯನ್ನು ಹೋಲುತ್ತವೆ. ನಿರೂಪಣಾ ಧಾಟಿಯಲ್ಲಿ ನಾಟಕೀಯ ಸ್ಪರ್ಶವಿದೆ. ಹಾಗೆಯೇ 'ಕಾಲಜ್ಞಾನ'ದ ಪದಗಳು ಮತ್ತು 'ಮಂಗಳಾರತಿ'ಯ ಹಾಡುಗಳು 'ಪದ'ಗಳ ಸ್ವರೂಪವನ್ನೇ ಪಡೆದಿವೆ.

19ನೇ ಶತಮಾನದ ಕೊನೆಯಲ್ಲಿದ್ದ ಶರೀಫರು ತಮ್ಮ ಹಿಂದೆ ಇದ್ದ ತತ್ವಪದಕಾರರ ಪ್ರಭಾವಕ್ಕೆ ಒಳಗಾಗಿರುವಂತೆ ಕಾಣೂತ್ತದೆ. 19ನೇ ಶತಮಾನದ ಕೊನೆಯ ಭಾಗದಲ್ಲಿದ್ದ 'ಕೂಡಲೂರು ಬಸವಲಿಂಗ ಶರಣ'ರ ಕೆಲವು ತತ್ವಪದಗಳೊಂದಿಗೆ ಸಾಮ್ಯತೆ ಇದೆ.

ಉದಾ: ಸೋರುತಿಹುದು ಮನೆಯ ಮಾಳಿಗ, ಅಂತಿಂಥದೆಲ್ಲವು ಏನೇ ಬರಲಿ ನಿಶ್ಚಿಂತೆ ಎಂಬುದು ನಿಜವಾಗಿರಲಿ.

ಕೆಲವು 'ಪದಗಳ' ಶೀರ್ಷಿಕೆಯಲ್ಲಿ ಸಾಮ್ಯತೆ ಇದೆ. ಉದಾ: ಕುರುಬರೊ ನಾವು ಕುರುಬರೊ, ಚೇಳು ಕಚ್ಚಿತವ್ವಾ

ಹಾಗೆಯೇ ಕ್ರಿ.ಶ. ಸು. 1780 ರಿಂದ 1855 ರವರೆಗೆ ಜೀವಿಸಿದ್ದ 'ಕಡಕೋಳ ಮಡಿವಾಳೇಶ್ವರ'ರ ರಚನೆಗಳಲ್ಲೂ ಸಾಮ್ಯತೆ ಇದೆ. ಉದಾ: 'ಹೌದಪ್ಪ ಹೌದು ದೇವರು । ನಿಂದು, ನೀ ತಿಳಿದರೆ ಇಲ್ಲಪ್ಪ ದೂರು' ಮತ್ತು 'ನನ್ನೊಳಗ ನಾ ತಿಳಕೊಂಡೆ'.

ಶರೀಫರ ಪ್ರಸಿದ್ಧ ರಚನೆಗಳಲ್ಲಿ ಒಂದಾದ 'ಕೋಡಗನ ಕೋಳಿ ನುಂಗಿತ್ತ' ಎಂಬ ಪದ "ಕ್ವಾಡಗನ ಕೋಳಿ ನುಂಗಿತ ಕೇಳಕ್ಕಯ್ಯ" ಎಂಬ ಹೆಸರಿನಲ್ಲಿ ಮಡಿವಾಳೇಶ್ವರರಲ್ಲೂ ಇದೆ. ಆಶ್ಚರ್ಯದ ಸಂಗತಿಯೆಂದರೆ 'ಅಹಜ ನುಂಗುವ' ಪ್ರಕ್ರಿಯೆ ಕೂಡಲೂರು ಬಸವಲಿಂಗರಲ್ಲೂ ಬರುತ್ತದೆ. "ಇದು ಏನು ಸೋಜಿಗವೋ" ಎಂಬ ತತ್ವಪದದಲ್ಲಿ.

ಸ್ವರವಚನಕಾರರು ಮತ್ತು ಕೈವಲ್ಯ ಪದಕಾರರು ತಮ್ಮ ರಚನೆಗಳಲ್ಲಿ ವೀರಶೈವ ಧರ್ಮದ ತತ್ವ, ಸಿದ್ಧಾಂತಗಳನ್ನು ಪ್ರತಿಪಾದಿಸಿದರೆ ಹರಿದಾಸರು ಮಧ್ವಾಚಾರ್ಯರ ದ್ವೈತ ತತ್ವ, ಸಿದ್ಧಾಂತಗಳನ್ನು ಹೇಳಿದ್ದಾರೆ. ಆದರೆ ಶರೀಫರು ಮಾತ್ರ ಯಾವ ಸಿದ್ಧಾಂತಕ್ಕೂ ಬದ್ಧರಾಗದೆ, ಎಲ್ಲರಿಗೂ ಸಲ್ಲುವ ಉದಾರ ಮಾನವತಾ ತತ್ವವನ್ನು ನಿರೂಪಿಸುತ್ತಾರೆ. ಕೂಡಲೂರು ಬಸವಲಿಂಗ ಮತ್ತು ಕಡಕೋಳ ಮಡಿವಾಳೇಶ್ವರರು ಕೆಲವೊಮ್ಮೆ ಕೆಟ್ಟ ಬೈಗುಳನ್ನು ಭಾಷೆಯನ್ನು ಸೇರಿಸುತ್ತಾರೆ. ಆದರೆ ಶರೀಫರು ಬಹುಮಟ್ಟಿಗೆ ಶಾಂತಚಿತ್ತರಾಗಿಯೇ ಬೋಧಿಸಲು ತೊಡಗುತ್ತಾರೆ.

19ನೇ ಶತಮಾನದಲ್ಲಿ ಜೀವಿಸಿದ್ದ ಶರೀಫರು ಕೇವಲ ಕನ್ನಡದಲ್ಲಿ ಮಾತ್ರ ಅಲ್ಲದೇ ಉರ್ದು ಭಾಷೆಯಲ್ಲೂ ಪದಗಳನ್ನೂ ರಚಿಸಿದ್ದಾರೆ. ಚಿರಪರಿಚಿತ ವಿವರಗಳಿಗೆ ಅಲೌಕಿಕತೆಯ ಮೆರಗು ನೀಡುತ್ತಾ ಮನಮುಟ್ಟುವಂತೆ, ಹಾಡಲು ಅನುಕೂಲವಾಗುವಂತೆ ಬರೆಯುತ್ತಾ ವಿಶ್ವಮಾನವ ಸಹೋದರತ್ವ, ಧಾರ್ಮಿಕ ಸಹಬಾಳ್ವೆ ಕಾಲಕ್ಕೂ ಸಲ್ಲುವವರು. ಧರ್ಮದ ಹೆಸರಿನಲ್ಲಿ ಭಯೋತ್ಪಾದಕರು ಮನುಷ್ಯರ ಮಾರಣ ಹೋಮ ಮಾಡುತ್ತಿರುವ ಇಂದಿನ ವರ್ತಮಾನದಲ್ಲಿ ಹಿಂದೂ-ಮುಸ್ಲಿಂ ಐಕ್ಯತೆಯನ್ನು, ವಿಶ್ವಮಾನವತ್ವವನ್ನು ಹೇಳುವ ಶರೀಫರ ಸಂದೇಶ ಅತ್ಯಗತ್ಯವಾಗಿ ಬೇಕಾಗಿದೆ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ.

ಉಪಸಂಹಾರ

ಹತ್ತೊಂಬತ್ತನೆಯ ಶತಮಾನದ ಉದ್ದಕ್ಕೂ ಉತ್ತರ ಕರ್ನಾಟಕದಲ್ಲಿ ಅನೇಕ ತತ್ವಪದಕಾರರು ಹಳ್ಳಿಗಳಲ್ಲಿ ಅಂದಿನ ಬದುಕನ್ನು ಬಾಳುವೆ ಮಾಡುತ್ತ ಹಾಡಿಕೊಂಡು ಅಡ್ಡಾಡುತ್ತಿದ್ದರು. ಇವರೆಲ್ಲ ಜನಪದ ಜೀವನದ ದಾರ್ಶನಿಕರಾಗಿದ್ದರು. ಶಿಶುನಾಳ ಗ್ರಾಮದ ಶರೀಫರು. ಇವತ್ತಿಗೂ ತಮ್ಮ ಪದಗಳಿಂದಾಗಿ ನಮ್ಮೊಂದಿಗೆ ಉಳಿದುಕೊಂಡಿದ್ದಾರೆ. ಅವರದು ಆಶುಕವಿತಾ ಹಾದಿ, ಬೋಧವೆಂದೇ ಬ್ರಹ್ಮನಾದವೊಂದೇ ಎಂಬ ಉಪನಿಷತ್. ಸಿದ್ಧಾಂತವನ್ನು ಸಾಧಿಸಿದವರು. ಬಯಲು ಆಲಯದ ವಿಸ್ಮಯಕಾರಿ ಸಂಬಂಧವನ್ನು ಚಿಂತನೆಗೆ ಒಳಪಡಿಸಿದವರು ಯೋಗಮಾರ್ಗ ಕ್ರಮಗಳನ್ನು ಅಂದರೆ ಏಕಾಗ್ರತೆ, ಧ್ಯಾನಸ್ಥಿತಿಗಳನ್ನು ಗಳಿಸಲು ಗೋವಿಂದಭಟ್ಟರ ಕ್ರಮದ ಗುರೂಪದೇಶ ನೆರವಾಯಿತು.

ಶರೀಫರ ತತ್ವಪದಗಳು ಅನ್ಯೋನ್ಯ ರೀತಿಯ ಶಬ್ದಾರ್ಥ ಸಂಯೋಜನೆಯ ರಚನೆಗಳಾಗಿಯೇ ನಮ್ಮನ್ನು ಆಕರ್ಷಿಸುತ್ತವೆ. ದೈನಂದಿನ ವ್ಯವಹಾರಗಳು ಮಾತುಕತೆಗಳು ಸಾಮಾಜಿಕ ಸಂಬಂಧಗಳಲ್ಲಿಯ ಏರುಪೇರುಗಳು ವಿಚಿತ್ರ ವಿಕೃತ ಮನೋಪ್ರವೃತ್ತಿಗಳು. ಪ್ರಾಣಿ ಪಶು-ಪಕ್ಷಿಗಳ ಸಹಜ ವರ್ತನೆಗಳು ಶರೀಫರಿಂದ ಉಪಮೆ, ರೂಪಕ, ದೃಷ್ಟಾಂತಗಳಾಗಿ ಭಾಷಾ ವಿನ್ಯಾಸವನ್ನು ಪಡೆಯುತ್ತವೆ. ನೂರಾರು ತತ್ವಪದಕಾರರ ಹಾಡುಗಳೆಲ್ಲ ಹೆಚ್ಚು ಕಡಿಮೆ ಇದೇ ಆಶಯದ ರಾಗ, ದನಿ ಧಾಟಿಗಳನ್ನು ಅನುಸರಿಸಿವೆ.

ಅಧ್ಯಾಯ-3 ರಲ್ಲಿ "ತತ್ವಪದ ಮತ್ತು ಸಂಗೀತ ಪರಂಪರೆ" ಕನ್ನಡ ಶಕ್ತಿ ಸಾಹಿತ್ಯದಲ್ಲಿ ತತ್ವಪದಗಳಿಗೆ ಒಂದು ವಿಶಿಷ್ಟವಾದ ಮಹತ್ವವಿದೆ. ವಚನಕಾರರು, ಕೀರ್ತನಕಾರರು ಮತ್ತು ತತ್ವಪದಕಾರರು. ಈ ಮೂರು ಗುಂಪಿನ ಅನುಭಾವಿಗಳು ಭಕ್ತಿಸಾಹಿತ್ಯದ ಪ್ರಮುಖ ಸೋತ್ರಗಾರರಾಗಿದ್ದಾರೆ. ತತ್ವಪದಗಳು ಜನಸಾಮಾನ್ಯರಿಗೆ ಬದುಕಿನ ಬಗ್ಗೆ ತಿಳುವಳಿಕೆ ನೀಡಿವೆ. ಆಧ್ಯಾತ್ಮಿಕ ಅರ್ಥ ನೀಡಿವೆ. ನೈತಿಕ ಮಾರ್ಗದರ್ಶನ ನೀಡಿವೆ.

ಸಂಗೀತಕ್ಕೆ ಮಾನವನ ಮನಸ್ಸನ್ನು ಶುದ್ಧೀಕರಿಸುವ ಶಕ್ತಿ ಇದೆ. ತತ್ವಪದಗಳಿಗೆ ಅದರ ಸಾಹಚರ್ಯವನ್ನು ಪಡೆದು ಬಲಿಷ್ಠತೆಯನ್ನು ತಂದುಕೊಂಡಿದೆ. ತತ್ವಪದದ ಪ್ರತಿಯೊಂದು ಅಕ್ಷರವೆಂಬ ರಕ್ತಕಣದಲ್ಲೂ ಸಂಗೀತವೆಂಬ ಜೀವ ತುಂಬಿದೆ.

ಅಧ್ಯಾಯ-3:- ಕರ್ನಾಟಕದ ಕಬೀರರೆಂದು ಹೆಸರುವಾಸಿಯಾದ ಶರೀಫರು ಹಿಂದೂ ಮುಸ್ಲಿಂ ಸಮಾಜದ ಸಂಪ್ರದಾಯಗಳಂತೆ ಭಾವೈಕ್ಯತೆಯನ್ನು ಸಾರಿದ ಜನಪದ ಕವಿ ದಿನಬಳಕೆಯ ದೃಷ್ಟಿ ಏಕೋಭಾವ. ಈ ಎಲ್ಲಾ ಪದಗಳ ಲಕ್ಷಣಗಳಾಗಿವೆ. ಶರೀಫರನ್ನು ಅನುಭಾವಿಗಳೆಂದು ಕರೆದು ಶಿವಶರಣರ ಹರಿದಾಸರ ಪಂಕ್ತಿಯಲ್ಲಿ ಸೇರಿಸುವುದು ಉಚಿತ. ಜನ್ಮ ಮುಸ್ಲಿಂ ಕುಟುಂಬದಲ್ಲಾದರೂ ಹಿಂದೂ ಪರಂಪರೆಯೊಂದಿಗೆ ಶರೀಫರ ಬಾಲ್ಯ ಬೆರೆತು ಹೋಗಿತ್ತು. ಪ್ರಾರಬ್ಧ ಕರ್ಮದ ಮೇಲೆ ಶರೀಫರಿಗೆ ವಿಶ್ವಾಸವಿತ್ತು. ನಿರಾಕಾರವನ್ನು ಸಾಕಾರಗೊಳಿಸುವ ಕಲೆ ಶರೀಫರಿಗೆ ಕರಗತವಾಗಿತ್ತು.

ಅಧ್ಯಾಯ-4:- ಶರೀಫರಿಗೆ ಇಸ್ಲಾಂ ಏಕೇಶ್ವರ ಕಲ್ಪನೆ ಅದ್ವೈತ ಶಾಕ್ತ ಶಕ್ತಿ ವಿಶಿಷ್ಟಾದ್ವೈತ ಕಲ್ಪನೆಗಳು ತಮ್ಮ ಜೀವನದುಸಿರಾಗಿತ್ತು. ಇವೆಲ್ಲದರ ಬೇರು ನಾಥ ಪಂಥದಲ್ಲಿ ಆಂಶಿಕವಗಿಯೋ ಪರಿಷ್ಕರಣ ರೂಪದಲ್ಲಿಯೋ ಸಾಮ್ಯತೆಯ ರೂಪದಲ್ಲೋ ನೆಲೆಸಿತ್ತು ಎಂಬುದರ ಕಡೆ ಗಮನ ಸೆಳೆಯಬೇಕಿತ್ತು. ಶರೀಫರು ದೇಹವನ್ನು ಸಮಾನತ್ಮ ಸಾಧನತ್ವ ಮತ್ತು ದೈವತ್ವದ ಭಾಗವಾಗಿ ಕಂಡಿದ್ದಾರೆ. ಶರೀಫರು ದೇಹದ ಜೀವ ಚೈತನ್ಯ ತತ್ವವನ್ನು ಪರಾತ್ಪರ ಬ್ರಹ್ಮರೂಪವೆಂದು ಬಣ್ಣಿಸಿದ್ದಾರೆ. ದೇಹವನ್ನು ಸಾಮಾನ್ಯತ್ವ ಸಾಧನತ್ವ ಮತ್ತು ದೈವತ್ವದ ಭಾಗವಾಗಿ ಕಂಡಿದ್ದಾರೆ. ಆದರೆ ಶರೀಫರ ಪದದಲ್ಲಿ ದೈವಾನುಕೃಪೆಯ ಭರವಸೆ ಆಶಾವಾದಿತನ ವ್ಯಕ್ತವಾಗಿರುವುದು ವಿಶೇಷವಾಗಿದೆ. ಈ ಎಲ್ಲ ಅಂಶಗಳು ಶರೀಫರಲ್ಲಿ ಮುಖ್ಯವಾಗಿ ಕಾಣುವ ಮತಧರ್ಮಗಳಾಚೆಗಿನ ನಿಲುವಿಗೆ ಅವರು ಹುಟ್ಟಿದ ಪ್ರದೇಶದ ಸಾಮಾಜಿಕ ಮತ್ತು ರಾಜಕೀಯ ಪರಿಸರ ಮಾತ್ರ ಕಾರಣವಾಗಿದೆ.

ಅಧ್ಯಾಯ-5:- ಸಂಘರ್ಷ, ಸಾಮರಸ್ಯದ ಬದುಕಿನ ರೀತಿಯ ಭಾರತೀಯ ಜನ ಜೀವನದ ಪ್ರಮುಖ ಲಕ್ಷಣವಾಗಿದೆ. ವೈವಿಧ್ಯಮಯ ಜನರ ಜೀವನದಲ್ಲಿ ಕೋಮು, ಧರ್ಮಗಳ ಕಾರಣಕ್ಕಾಗಿ ಸಂಘರ್ಷದ ಸನ್ನಿವೇಶಗಳು ಸಂಭವಿಸಿದಾಗ ಆಯಾ ಕಾಲಘಟ್ಟಗಳಲ್ಲಿ ಹಲವಾರು ಸಮಾಜ ಸುಧಾರಕರು ಜನಿಸಿ ತಮ್ಮ ಚಿಂತನೆಗಳನ್ನು ಬೋಧಿಸಿ, ಸಾಮರಸ್ಯ ಮೂಡಿಸುವ ಕೆಲಸ ಮಾಡಿದ್ದಾರೆ. ಕನ್ನಡದ ಸಂದರ್ಭದಲ್ಲಿ ಶಿವಶರಣರು, ಸರ್ವಜ್ಞ, ದಾಸರು ಹಾಗೂ ಇತರ ಅನುಭಾವಿ ಕವಿಗಳು ಕಾಣಿಸಿಕೊಂಡು ತಮ್ಮ ಸಾಹಿತ್ಯಾಭಿವ್ಯಕ್ತಿಯ ಮೂಲಕ ಹಲವು ಧರ್ಮಗಳ ಶ್ರೇಷ್ಠತೆ, ವೈಶಿಷ್ಟ್ಯತೆ ಹಾಗೂ ಪರಸ್ಪರ ಅನ್ಯ ಧರ್ಮೀಯರಲ್ಲಿ ಇರಬೇಕಾದ ಗೌರವ ಹಾಗೂ ಸಾಮರಸ್ಯ ಭಾವನೆಗಳ ಬಗ್ಗೆ ಬೋಧಿಸಿ ಜನರ ಜೀವನವನ್ನು ಹಾಗೂ ಸಾಮರಸ್ಯ ಭಾವನೆಗಳ ಬಗ್ಗೆ ಬೋಧಿಸಿ ಜನರ ಜೀವನವನ್ನು ಸುಧಾರಿಸಿ ಶಾಂತಿ ಸೌಹಾರ್ದತೆಗಳನ್ನು ನೆಲೆಗೊಳಿಸಿದ್ದಾರೆ. ಅವುಗಳಲ್ಲಿ ಸಮಕಾಲೀನ

ಸಮಾಜದಲ್ಲಿದ್ದ ಧಾರ್ಮಿಕ ಮೌಢ್ಯ ಅಂಧಶ್ರದ್ಧೆ, ಗೊಡ್ಡು ಸಂಪ್ರದಾಯಗಳು ಟೀಕಿಸಲ್ಪಟ್ಟಿವೆ. ನಮ್ಮ ಚರಿತ್ರೆಯಲ್ಲಿ ಸಾಮರಸ್ಯದ ಬದುಕಿನ ಕುರಿತು ಬಾಳಿ ಬೋಧಿಸಿದ ಸಮಾಜ ಸುಧಾರಕರು.

ಅಧ್ಯಾಯ–6:– ಹರಿದಾಸರು ಮತ್ತು ತತ್ವಪದಕಾರರು ಸ್ವರವಚನ, ಕೀರ್ತನೆ ಕೈವಲ್ಯಪದ ಮತ್ತು ತತ್ವಪದಗಳೆಂಬ ಹೆಸರುಗಳಲ್ಲಿ ಹಾಡುಗಬ್ಬವನ್ನು ವೈವಿಧ್ಯಮಯವಾಗಿ ಬೆಳೆಸುತ್ತಾ ಬಂದಿದ್ದಾರೆ. ಈ ಸಾಲಿನಲ್ಲಿ ಸಲ್ಲುವವರು ಶಿಶುನಾಳ ಶರೀಫರು. ಆದ್ದರಿಂದ ಶರೀಫರು ಮೂಲಭೂತವಾಗಿ ತತ್ವಪದಕಾರರು ಎಂದು ಗುರುತಿಸಲ್ಪಟ್ಟಿದ್ದಾರೆ. ಶರೀಫರು ಇಂದು ನಾವು ಗುರುತಿಸಿಕೊಂಡಿರುವ "ಪ್ರಮಾಣ ಕನ್ನಡ"ವನ್ನು ಪ್ರಧಾನವಾಗಿ ಬಳಸುತ್ತಾರೆ. ಅದರೊಂದಿಗೆ ಉತ್ತರ ಕರ್ನಾಟಕದ ಪ್ರಧಾನವಾಗಿ ಧಾರವಾಡದ ಭಾಷೆ ಅಲ್ಲಲ್ಲಿ ಬೆರೆಯುತ್ತದೆ. ಈ ಉಪ ಭಾಷೆ ಗ್ರಾಮೀಣ ರೂಪದಲ್ಲೂ ಬಳಕೆಯಾಗುತದೆ. ಶರೀಫರು ಪ್ರೌಢ ಗ್ರಾಂಥಿಕ ಭಾಷೆಯಲ್ಲೂ ಬರೆಯುತ್ತಾರೆ. ಶರೀಫರ ಭಾಷೆಯ ಮೇಲೆ ಅವರ ಕಾಲದ ಸಾಹಿತ್ಯಿಕ ಭಾಷೆಯ ಪ್ರಭಾವವೂ ಆಗಿದೆ. ಕನ್ನಡ ಜೊತೆ ಉರ್ದು ಭಾಷೆಯ ಪದಗಳು ಹೆಚ್ಚಾಗಿ ಸೇರಿವೆ. ಕೆಲವು ಉರ್ದು ಪದಗಳು ಕನ್ನಡ ಪ್ರತ್ಯಯವನ್ನು ಅಂಟಿಸಿಕೊಂಡಿವೆ. ಉದಾ:– ಫೌಜ, ಲಡಾಯಕ್ಕ, ಸಾಬತ್ತು, ಮಹೌ ಶಹಾದತೋ.

ಕೇವಲ ಅವರ ಗೀತೆಗಳನ್ನು ಮನರಂಜನೆಗೆ ಕೇಳಿ ಬಿಡುವಂಥದಾಗಿರದೆ ಮತ್ತೆ ಮತ್ತೆ ಅದರ ಅರ್ಥವನ್ನು ಚಿಂತನೆಗೆ ಗುರಿ ಮಾಡುವ ಕಾರ್ಯದಲ್ಲಿ ತೊಡಗಿ ಶರೀಫರಿಗೆ ಕನ್ನಡ ಸಾಹಿತ್ಯದಲ್ಲಿ ಸೂಕ್ತ ಸ್ಥಾನವನ್ನು ಗುರುತಿಸಿದಾಗ ಅವರಿಗೆ ಗೌರವ ನೀಡಿದಂತಾಗುತ್ತದೆ. ಕನ್ನಡ ಸಾಹಿತ್ಯವು ಆಯಾ ಕಾಲಘಟ್ಟದಲ್ಲಿ ಜನರ ಜೀವನವನ್ನು ಬಿಂಬಿಸುತ್ತದೆ. ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಧರ್ಮ ಹಾಗೂ ಪ್ರಭುತ್ವ ಸಾಹಿತ್ಯದ ವಾಸ್ತುವಾಗಿದ್ದು, ಧಾರ್ಮಿಕ ಕೃತಿಗಳಲ್ಲಿ ಸಾಮರಸ್ಯ ಸಂಘರ್ಷದ ಚಿತ್ರಣಗಳು ಸಿಗುತ್ತವೆ. ಪ್ರಸ್ತುತ ಸಮಾಜದಲ್ಲಿ ಧಾರ್ಮಿಕ ಸಂಘರ್ಷಗಳ ಸನ್ನಿವೇಶ ಇದ್ದು, ಇಂತಹ ಪರಿಸ್ಥಿತಿಯನ್ನು ತಿಳಿಗೊಳಿಸುವುದು ಇಂದಿನ ಅಗತ್ಯವಾಗಿದೆ. ಶರೀಫರ ಸಾಹಿತ್ಯ ಚಿಂತನೆಗಳು ಆರೋಗ್ಯಕರ ಸಮಾಜದ ನಿರ್ಮಾಣದ ದೃಷ್ಟಿಯನ್ನುಳ್ಳವುಗಳಾಗಿದ್ದು, ಶರೀಫರು ತಮ್ಮ ತತ್ವಪದಗಳ ಮುಖಾಂತರ ಪ್ರಬುದ್ಧ ಸಮಾಜ ನಿರ್ಮಾಣದ ಗುರಿಯನ್ನು ಹೊಂದಿದರು. ಭಾವೈಕ್ಯತೆಯನ್ನು ಬಿಂಬಿಸಲಾಗಿದೆ. ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ತಮ್ಮ ವಿಶಿಷ್ಟ ಕಾಣಿಕೆಯನ್ನು ನೀಡಿದ್ದಾರೆ.

ಪರಾಮರ್ಶನ ಗ್ರಂಥಗಳು

1. ಶಿವಾನಂದ ಗುಬ್ಬಣ್ಣನವರ, 1993, ಶಿಶುನಾಳ ಶರೀಫ ಗೀತೆಗಳು, ಅಕ್ಷರ ಪ್ರಕಾಶನ, ಧಾರವಾಡ
2. ಶಿವಾನಂದ ಗುಬ್ಬಣ್ಣನವರ, 1992, ಶಿಶುನಾಳ ಶರೀಫ ಸಾಹೇಬರು, ಸಾಹಿತ್ಯ ಅಕಾಡೆಮಿ, ಬೆಂಗಳೂರು
3. ಆರ್. ಪಿ. ಹೆಗಡೆ, 1995, ಶಿಶುನಾಳ ಶರೀಫ ಮತ್ತು ಸಂತ ಕಬೀರ್ ಒಂದು ತೌಲನಿಕ ಅಧ್ಯಯನ (ಸಮಾಜ ಕಲ್ಯಾಣ, ವಿಶ್ವಸ್ತ ಸಮಿತಿ, ಸಿದ್ಧಾಪುರ (ಉ.ಕ)
4. ಲಕ್ಷ್ಮೀನಾರಾಯಣಭಟ್ಟ ಎನ್.ಎಸ್., 1985, ಶಿಶುನಾಳ ಶರಿಫ ಸಾಹೇಬರ ಗೀತೆಗಳು, ಕ್ಷಮಾ ಪ್ರಕಾಶನ, ಬೆಂಗಳೂರು
5. ಶಿವನಾಗಪ್ಪ ರುದ್ರಪ್ಪ ಅಬ್ಬಿಗೇರಿ, 1915, ಶರೀಫ್ ಸಾಹೇಬ ಕೃತ ಶಿಶುನಾಳ ತತ್ವಪದಗಳು ಭಾಗ–1.2.3, ವಾಗ್ವಿಲಾಸ ಬುಕ್ ಡಿಪೋ, ಹುಬ್ಬಳ್ಳಿ
6. ಶ್ಯಾಮಸುಂದರ ಬಿದರಕುಂದಿ, 2011, ಬೋಧವೊಂದೆ ಬ್ರಹ್ಮನಾದವೊಂದೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
7. ಕಾವ್ಯಜೀವಿ (ಕಾವ್ಯಪ್ರೇಮಿ), 1993, ಶಿಶುನಾಳರ ಅನುಭಾವ ಗೀತಮಂಜರಿ, ಸಮಾಜ ಪುಸ್ತಕಾಲಯ, ಶಿವಾಜಿ ಬೀದಿ, ಧಾರವಾಡ
8. ಡಾ॥ ಕಾ. ವೆಂ. ಶ್ರೀನಿವಾಸಮೂರ್ತಿ, 2011, ಶಿಶುನಾಳ ಶರೀಫ ಮತ್ತು ಇತರೆ ಅನುಭಾವಿಗಳು, ಕೋಗಿ ಪ್ರಕಾಶನ, ಬೆಂಗಳೂರು
9. ಡಾ॥ ಎಂ. ಎಸ್. ಶಿಂದಗಿ, ಶಿಶುನಾಳ ಶರೀಫರ ಜೀವನ, ಕೃತಿಗಳ ಮತ್ತು ದರ್ಶನ, ಅಪ್ರಕಟಿತ ಸಂಶೋಧನಾ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಧಾರವಾಡ
10. ಡಾ॥ ಆರ್. ಪಿ. ಹೆಗಡೆ, "ಶಿಶುನಾಳ ಶರೀಫ ಮತ್ತು ಸಂತ ಕಬೀರ ಒಂದು ತೌಲನಿಕ ಅಧ್ಯಯನ" ಸಮಾಜ ಶಿಕ್ಷಣ, ವಿಶ್ವಸ್ಥ ಸಮಿತಿ, ಸಿದ್ಧಾಪುರ, 1995.